ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಪಾತ್ರ

(ಗುಲ್ಬರ್ಗಾ ನಗರವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಸುರೇಶ್ ಸಾಯಬಣ್ಣ

ಮಾರ್ಗದರ್ಶಕರು

ಡಾ. ಎಚ್. ಎಸ್. ಶ್ರೀಮತಿ

ಮುಖ್ಯಸ್ಥರು ಹಾಗೂ ಮಾರ್ಗದರ್ಶಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೨

ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಪಾತ್ರ

(ಗುಲ್ಬರ್ಗಾ ನಗರವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಸುರೇಶ್ ಸಾಯಬಣ್ಣ

ಮಾರ್ಗದರ್ಶಕರು

ಡಾ.ಎಚ್.ಎಸ್. ಶ್ರೀಮತಿ

ಮುಖ್ಯಸ್ಥರು ಹಾಗೂ ಮಾರ್ಗದರ್ಶಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೨

23

ದೃಢೀಕರಣ ಪತ್ರ

'ಗುಡಿಕೈಗಾರಿಕೆಗಳಲ್ಲಿ ಮಹಿಳೆಯರ ಪಾತ್ರ (ಗುಲ್ಬರ್ಗಾ ನಗರವನ್ನು ಅನುಲಕ್ಷಿಸಿ)' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಸುರೇಶ್ ಸಾಯಿಬಣ್ಣ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಈ ಸಂಪ್ರಬಂಧವನ್ನು ಅಥವಾ ಇದರ ಇತರೆ ಭಾಗಗಳನ್ನು ಯಾವುದೇ ಪದವಿಗೆ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15.5.2002
ಸ್ಥಳ : ವಿದ್ಯಾರಣ್ಯ

ಡಾ. ಎಚ್.ಎಸ್. ಶ್ರೀಮತಿ
ಮುಖ್ಯಸ್ಥರು ಹಾಗೂ ಮಾರ್ಗದರ್ಶಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಮಾಣ ಪತ್ರ

'ಗುಡಿಕೈಗಾರಿಕೆಗಳಲ್ಲಿ ಮಹಿಳೆಯರ ಪಾತ್ರ (ಗುಲ್ಬರ್ಗಾ ನಗರವನ್ನು ಅನುಲಕ್ಷಿಸಿ)' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಮಹಿಳಾ ಅಧ್ಯಯನ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಯಲಕ್ಕೆ ಡಾ. ಎಚ್. ಎಸ್. ಶ್ರೀಮತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ: ೧೪-೪-೨೦೦೭

ಸ್ಥಳ : ವಿದ್ಯಾರಣ್ಯ

ಸುರೇಶ್ ಸಾಯಬಣ್ಣ
ಸಂಶೋಧನ ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ ಮೊದಲಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಇಂದಿನ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರಿಗೆ, ಹಾಗೂ ಕುಲಸಚಿವರಾದ ಡಾ.ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ,

ಈ ಅಧ್ಯಯನದ ಕ್ರಮವನ್ನು ಭೋದಿಸಿ, ಪ್ರೀತಿಯಿಂದ ನನ್ನನ್ನು ಪ್ರೋತ್ಸಾಹಿಸಿ ಸೂಕ್ತ ಸಲಹೆ, ಸಹಕಾರ, ಪ್ರೇರಣೆಗಳನ್ನು ನೀಡಿ ಅತ್ಯಂತ ಆತ್ಮೀಯವಾಗಿ ಮಾರ್ಗದರ್ಶನ ನೀಡಿದ ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥರು ಮತ್ತು ಮಾರ್ಗದರ್ಶಕರಾದ ಡಾ.ಎಚ್.ಎಸ್. ಶ್ರೀಮತಿ ಅವರಿಗೆ, ಹಾಗೆಯೇ ಓದಿನಲ್ಲಿ ಸೂಕ್ತ ತಿಳುವಳಿಕೆ ನೀಡಿದ ಡಾ.ಎಂ. ಉಷಾ, ಡಾ. ಶೈಲಜಾ ಹಿರೇಮಠ, ಶ್ರೀ ಎ.ಎಸ್. ಪ್ರಭಾಕರ್, ಡಾ. ಬಿ.ಎಂ. ಪುಟ್ಟಯ್ಯ ಇವರುಗಳಿಗೆ,

ನನ್ನ ಓದಿಗೆ ಸೂಕ್ತಪ್ರೇರಣೆ, ಸಹಕಾರ, ಪ್ರೋತ್ಸಾಹ ನೀಡುತ್ತಿರುವ ಮಾವನರಾದ ಡಾ.ಎಂ.ಎಸ್. ವರ್ಮ ಹಾಗೂ ದೊಡ್ಡಮ್ಮರಾದ ಶಿವಭಾಯಿ, ಸದಾ ನನ್ನ ಶ್ರೇಯಸ್ಸನ್ನೇ ಬಯಸುವ ತಂದೆತಾಯಿಗೆ, ಸಹೋದರರಾದ ಮಹಾಂತೇಶ್ ಬಡಿಗೇರ್, ಭೀಮಾಶಂಕರ್ ಮತ್ತು ವಯಸ್ಸಿನಲ್ಲಿ ಚಿಕ್ಕವಳಾದರೂ ಸೂಕ್ತ ತಿಳುವಳಿಕೆ ನೀಡಿದ ತಂಗಿಯಾದ ಗೀತಾಗೆ,

ಸಂಪ್ರಂಬಂಧ ರಚನೆಯಲ್ಲಿ ಸಹಕಾರ ನೀಡಿದ ಹಿರಿಯ ಸಂಶೋಧಕ ಮಿತ್ರರೂ ಹಾಗೂ ಆತ್ಮೀಯರಾದ ಯರಿಸ್ವಾಮಿ ಎಂ., ವಿ.ಸಿ ಮಾರುತಿ, ಜಿ.ಉಮೇಶ್, ಚನ್ನಪ್ಪ ಮತ್ತು ಕೆ. ಮಹೇಶ್ ಇವರುಗಳಿಗೆ,

ಹಾಗು ಪ್ರೀತಿಯ ಸಹಪಾಠಿಗಳಾದ ಬಸವರಾಜ್ ಪುತ್ತಿ, ಪ್ರಕಾಶ್ ಹುಗ್ಗಿ, ಸುಭಾಷ್ ದೊಡ್ಡಮನಿ, ಗಂಗಾಧರ್, ನಾಗವರ್ಮ, ಮೋಹನ್, ಲೋಕರಾಜ್, ಕೆ. ರಘು ಹಾಗೂ ನಿಸ್ಸಾರ್ ಇತರೆ ಸಂಶೋಧನಾ ಮಿತ್ರರಿಗೂ,

ಈ ಸಂಪ್ರಂಬಂಧವನ್ನು ಗಣಕಯಂತ್ರದಲ್ಲಿ ಸುಂದರವಾಗಿ ಸಂಯೋಜಿಸಿಕೊಟ್ಟ ಶರಣ ಅವರಿಗೆ,

ತುಂಬು ಹೃದಯದ ಕೃತಜ್ಞತೆಗಳು

ಸುರೇಶ್ ಬಡಿಗೇರ್

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಪ್ರಸ್ತಾವನೆ

ಗುಡಿಕೈಗಾರಿಕೆಗಳು ನಿನ್ನೆ ಮೊನ್ನೆಯವಲ್ಲ. ಅವು ಪುರಾತನ ಕಾಲದಿಂದಲೂ ನಡೆದುಬಂದಿವೆ. ಅತ್ಯಂತ ದೀರ್ಘವಾದ ಚಾರಿತ್ರಿಕ ಹಿನ್ನೆಲೆ ಹೊಂದಿರುವ ಗುಡಿಕೈಗಾರಿಕೆಗಳನ್ನು ಗೃಹ ಕೈಗಾರಿಕೆಗಳು ಎಂದು ಕರೆಯುತ್ತಾರೆ. ಈ ಗುಡಿಕೈಗಾರಿಕೆಗಳು ಭಾರತೀಯ ಸಮಾಜದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿವೆ. ಇವುಗಳನ್ನು ಕರಕುಶಲ ಕೆಲಸಗಾರರು ತಮ್ಮ ಮನೆಯಲ್ಲಿಯೇ ತಯಾರುಮಾಡುತ್ತಾರೆ. ಕುಟುಂಬದಲ್ಲಿಯ ಮಹಿಳೆಯರು ಇವುಗಳಲ್ಲಿ ಮುಖ್ಯಪಾತ್ರ ವಹಿಸುತ್ತಾರೆ. ಕುಟುಂಬದ ಇತರೆ ಸದಸ್ಯರು ಅದೇ ಕೆಲಸದಲ್ಲಿ ನಿರತರಾಗಿ ಅವರಿಗೆ ಸಹಾಯಹಸ್ತ ನೀಡುತ್ತಾರೆ. ಹಾಗಾಗಿ ಈ ಎಲ್ಲಾ ಗುಡಿಕೈಗಾರಿಕೆಗಳು ಜೀವನೋಪಾಯಕ್ಕಾಗಿ ಪ್ರಾರಂಭಗೊಂಡು ವಂಶಪಾರಂಪರ್ಯವಾಗಿ ಬೆಳೆದು ಬಂದವುಗಳಾಗಿವೆ. ಹೆಚ್ಚಾಗಿ ಮಹಿಳೆಯರೇ ತೊಡಗಿಸಿಕೊಂಡಿರುವ ಈ ವೃತ್ತಿಗಳು ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಬಹಳಷ್ಟು ಪ್ರಭಾವ ಬೀರಿವೆ. ಇದರಿಂದಾಗಿ ಮಹಿಳೆಯರ ಆರ್ಥಿಕ ವಲಯ ಆದಾಯ ಹಾಗೂ ಗೃಹೋಪಯೋಗಿ ಸಂಬಂಧಿ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವಂತೆ ಸಹಾಯಕವಾಗಿವೆ. ಇಂತಹ ಎಲ್ಲಾ ಕಾರ್ಯಗಳೆಂದರೆ ನೂಲುವುದು, ಕೆತ್ತನೆಯ ಕೆಲಸ, ಕಮ್ಮಾರಿಕೆ, ಕುಂಬಾರಿಕೆ, ಬಡಗಿತನ, ಕಸೂತಿ ಹಾಕುವುದು, ಬೀಡಿ ಕಟ್ಟುವುದು, ಬುಟ್ಟಿ ಹೆಣೆಯುವುದು ಕೌದಿ ತಯಾರಿಸುವುದು ಕಸಬರಿಗೆ ವಿಶೇಷವಾಗಿ ಇವುಗಳು ಆಯಾ ಪ್ರದೇಶದ ಜನರ ಅವಶ್ಯಕತೆ ಮತ್ತು ಅಭಿರುಚಿಗನುಗುಣವಾಗಿ ವಸ್ತುಗಳನ್ನು ಉತ್ಪಾದಿಸುತ್ತಿವೆ.

ಗುಡಿಕೈಗಾರಿಕೆಗಳು ಚಿಕ್ಕ ಮತ್ತು ಬೃಹತ್ ಕೈಗಾರಿಕೆಗಳಿಗಿಂತ ಭಿನ್ನವಾಗಿವೆ. ಇವು ಸಣ್ಣಪುಟ್ಟ ಪ್ರಮಾಣದಲ್ಲಿ ಬಂಡವಾಳ ತೊಡಗಿಸುವುದು, ಕಸುಬುದಾರ ಕೈಚಳಕಕ್ಕೆ ಮುಖ್ಯವಾಗಿ ಬೆಲೆಯನ್ನು ನೀಡುವಂತಹವು. ಇವು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದ್ದ ಭಾರತೀಯ ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಜೊತೆಗೆ ಭಾರತೀಯರ ಆರ್ಥಿಕ ಜೀವನದ ಮೇಲೆ ಸಾಕಷ್ಟು ಪ್ರಭಾವ ಬೀರಿವೆ.

ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ವಿವಿಧ ಬಗೆಯ ಆಶಯಗಳ ನಡುವೆ ಜನರ ಅಭಿರುಚಿ, ಅಭಿಲಾಷೆಗಳು ಬದಲಾವಣೆಗೊಳ್ಳುತ್ತಿವೆ. ಉತ್ತಮ ಗುಣಮಟ್ಟದ ವಸ್ತುಗಳು ಮಾರುಕಟ್ಟೆಯಲ್ಲಿ ಪೈಪೋಟಿ ನೀಡುತ್ತಿದ್ದರೂ ಮಹಿಳೆಯರ ವಸ್ತುಗಳು ಮಾರುಕಟ್ಟೆಯಲ್ಲಿ ಪೈಪೋಟಿ ನೀಡುತ್ತಿದ್ದರೂ ಮಹಿಳೆಯರ ಗುಡಿಕೈಗಾರಿಕೆ ತಯಾರಿಕೆಯ ವಸ್ತುಗಳು ವಿಶೇಷವಾಗಿ ಮಾರುಕಟ್ಟೆಯಲ್ಲಿ ಗಮನ ಸೆಳೆದಿವೆ.

೧೯೩೭ರಲ್ಲಿ ಗಾಂಧೀಜಿಯವರು ಗುಡಿಕೈಗಾರಿಕೆಗಳನ್ನಾಧರಿಸಿ ಒಂದು ಶಿಕ್ಷಣವನ್ನು ಪ್ರತಿಪಾದಿಸಿ ಅದಕ್ಕೆ ಮೂಲ ಶಿಕ್ಷಣ ಎಂದು ಕರೆದು ಅದರ ಅಗತ್ಯತೆಯನ್ನು ಸಾರಿದರು ಈ ಗುಡಿಕೈಗಾರಿಕೆಗಳು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಬಹಳ ಮಹತ್ವದ ಸ್ಥಾನ ಪಡೆದಿವೆ. ಸುಮಾರು ೨೨ ಕೋಟಿ ಜನರು ಈ ಕೈಗಾರಿಕೆಯಲ್ಲಿ ನಿರತರಾಗಿದ್ದಾರೆ.

ಗ್ರಾಮೀಣ ಆರ್ಥಿಕತೆಯ ಗಣನೀಯವಾದ ಸಂಖ್ಯೆಯಲ್ಲಿ ತನ್ನ ವಸ್ತುಗಳನ್ನು ತಯಾರಿಸುವ ದೊಡ್ಡ ಸಂಖ್ಯೆಯ ಉತ್ಪಾದಕರನ್ನು ಪೋಷಿಸುವಷ್ಟು ವಿಶಾಲವಾಗಿರುವ ಸಂಭಾವನೆಗಳು ಕಡಿಮೆ ಹೀಗಾಗಿ ಉನ್ನತ ಗುಣಮಟ್ಟದ ಕಡಿಮೆ ಬೆಲೆಯ ವಸ್ತುಗಳನ್ನು ಗ್ರಾಹಕರಿಗೆ ನೀಡಲೂ ಎಷ್ಟೆ ಸಮರ್ಥರಾದರೂ ಆರ್ಥಿಕತೆಯ ಕೌಟುಂಬಿಕ ಸಮಸ್ಯೆಗಳ ನಡುವೆ ಸಾರ್ವಜನಿಕರು ಸಾಧ್ಯವೆನಿಸುವ ಅತ್ಯುತ್ತಮ ಉತ್ಪಾದನೆಯನ್ನು ಸಾಧ್ಯವಾದ ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಸಮಾಜದಲ್ಲಿ ವಿವಿಧ ಬಗೆಯ ತಾರತಮ್ಯಗಳು ಹೊಂದಿರುವುದು ಇದರಿಂದ ಕಂಡುಬರುತ್ತದೆ. ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡು ಹೊಂದಿರುವುದು ಇದರಿಂದ ಕಂಡುಬರುತ್ತದೆ. ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಮಸ್ಯೆಗಳು ಅನೇಕ ಹೀಗಿದ್ದೂ ಕೂಡ ತನ್ನ ಕೌಟುಂಬಿಕ ಸ್ಥಿತಿಗೆ ಹೊಂದಿಕೊಂಡು ದುಡಿಯುತ್ತಿರುವುದು ಕಾಣಬಹುದಾಗಿದೆ. ತನ್ನ ಸುತ್ತಲ ಪರಿಸರದಲ್ಲಿ ತನಗೆ ಲಭ್ಯವಿರುವ ಅಲ್ಪಸ್ವಲ್ಪ ಸಂಪನ್ಮೂಲಗಳ ಮೊರೆ ಹೋಗಿ ಆದಾಯವನ್ನು ರೂಢಿಸಿಕೊಳ್ಳುವಲ್ಲಿ ತನ್ಮಯರಾಗಿದ್ದಾರೆ. ಆದರೂ ಸಹ ಹಲವಾರು ಸಂದರ್ಭಗಳಲ್ಲಿ ತನ್ನ ಶ್ರಮಶಕ್ತಿಯಿಂದಲೆ ಉತ್ಪನ್ನಗಳನ್ನು ಕಲಾತ್ಮಕತೆಯ ಕೌಶಲ್ಯದಿಂದ ತಯಾರಿಸುತ್ತಿದ್ದಾಳೆ. ಇಂತಹ ವಸ್ತುಗಳಿಗೆ ಮಾರುಕಟ್ಟೆಯ ಸೀಮಿತತೆಯಲ್ಲಿ ಕಡಿಮೆ ಬೆಲೆಯಿಂದ ಕೊಳ್ಳುತ್ತಿರುವುದು ಶೋಷಣೆಯ ಇನ್ನೊಂದು ರೂಪವಾಗಿದೆ.

ಈ ರೀತಿಯ ಸಮಸ್ಯೆಗಳಿಂದ ಗುಡಿಕೈಗಾರಿಕೆಯಲ್ಲಿನ ಮಹಿಳೆಯರ ಆರ್ಥಿಕ ಜೀವನದ ಮೇಲೆ ನೇರ ಪ್ರಬಾವ ಬೀರಿ, ಗುಡಿಕೈಗಾರಿಕೆಗಳ ಪ್ರಾಬಲ್ಯ ಕಡಿಮೆಯಾಗುತ್ತದೆ. ಇದರಿಂದ ಹೆಚ್ಚಿನ ಮಾನವನ ಶ್ರಮ ಸಂಪತ್ತು ವ್ಯರ್ಥವಾಗಿ ಪೋಲಾಗುವಂತಾಗಿದೆ.

ಅಧ್ಯಯನದ ಉದ್ದೇಶ

ಮಹಿಳಾ ಉತ್ಪಾದನೆಯ ವಿವಿದ ಮೂಲಗಳಲ್ಲಿ ಗುಡಿಕೈಗಾರಿಕೆಯು ಒಂದಾಗಿದೆ. ತನ್ನ ಆಸೆಗಳನ್ನು ಪೂರೈಸಿಕೊಳ್ಳಲು ತನ್ನ ಬುದ್ಧಿಶಕ್ತಿಯಂತೆ ಕೌಶಲ್ಯವನ್ನು ಅವಲಂಬಿಸಿ ದುಡಿಯಲು ಪ್ರಾರಂಭಿಸಿದ ಗುಡಿಕೈಗಾರಿಕೆಗಳಲ್ಲಿ ಮಹಿಳೆಯರು ತಮ್ಮ ಶ್ರಮಶಕ್ತಿಯನ್ನು ತೊಡಗಿಸಿಕೊಳ್ಳುವಲ್ಲಿ ಮೊದಲ ಸ್ಥಾನದಲ್ಲಿವೆ. ಹೀಗಾಗಿ ಇಂತಹ ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರ ಸ್ಥಾನಮಾನ ಗುರುತಿಸುವಿಕೆಯಿಂದ ಮಾನವನ ಅಭಿವೃದ್ಧಿಗೆ ಪೂರಕವೆಂಬಂತೆ ಪರಿವರ್ತಿತವಾಗುವ ಕೌಟುಂಬಿಕ ಆದಾಯ, ರಾಷ್ಟ್ರೀಯ ಆದಾಯದಲ್ಲಿ ಸೇರ್ಪಡೆಯಾಗುತ್ತದೆ. ಇದರಿಂದ ಬಡತನದ ಪ್ರಮಾಣ ಮತ್ತು ನಿರುದ್ಯೋಗದ ಪ್ರಮಾಣವನ್ನು ಸ್ವಲ್ಪಮಟ್ಟಿಗಾದರೂ ನಿವಾರಿಸಲು ಸಾಧ್ಯ.

ಜಾಗತೀಕರಣದ ಈ ಸಂದರ್ಭದಲ್ಲಿ ವಿಶ್ವವೇ ಒಂದು ಮಾರುಕಟ್ಟೆಯಾಗಿ ಪರಿವರ್ತಿತವಾಗುವುದರಿಂದ ಗುಡಿಕೈಗಾರಿಕೆಯ ಉತ್ಪನ್ನಗಳಿಗೆ ಹಲವು ಸವಾಲುಗಳನ್ನು ಎದುರಿಸಬೇಕಾಗಿದೆ. ಇದಕ್ಕೆ ಕಾರಣ ಕೈಗಾರೀಕಿಕರಣ ಮತ್ತು ಜಾಗತೀಕರಣದ ಪ್ರಭಾವದಿಂದ ಗುಡಿಕೈಗಾರಿಕೆಯ ಉತ್ಪನ್ನಗಳ ತಯಾರಿಕೆಗೂ ಬಂಡವಾಳಶಾಹಿ ರಾಷ್ಟ್ರಗಳು ಮುಂದಾಗಿರುವುದರಿಂದ ಜೊತೆಗೆ ಮುಂದುವರೆದ ತಂತ್ರಜ್ಞಾನದ ಬಳಕೆಯಿಂದ ಮಾನವ ಕೌಶಲ್ಯದಿಂದ ತಯಾರಿಸುವ ವಸ್ತುಗಳಿಗೆ ಧಕ್ಕೆ ಒದಗಿ ಬಂದಿದೆ. ಇದರಿಂದ ಎಷ್ಟೋ ಕುಟುಂಬಗಳು ಬಡತನದಿಂದ ನರಳುತ್ತಿರುವುದು ಕಾಣಬರುತ್ತದೆ. ನಾವು ದಿನದ ಕ್ಷಣಗಳು ಲೆಕ್ಕ ಹಾಕುತ್ತಿರುವಂತೆ ಹಲವಾರು ಗುಡಿಕೈಗಾರಿಕೆಗಳು ನಶಿಸುತ್ತಿವೆ. ಈವರೆಗೆ ಮಾನವನು ತೊಡಗಿಸಿಕೊಂಡ ಶ್ರಮವನ್ನು ಕಡೆಗಣಿಸುವಂತೆ ಮಾಡಿದೆ. ಇಲ್ಲಿ ಉತ್ಪಾದನಾ ನೈಪುಣ್ಯತೆಯ ವಸ್ತುಗಳ ಬೆಲೆ, ಮಾರುಕಟ್ಟೆ ಸಮಸ್ಯೆಯಿಂದ ಸಾವಿರಾರು ಮಹಿಳೆಯರು ದಿನಾಲು ದುಡಿದರು. ಇಂದು ಗುಡಿಕೈಗಾರಿಕೆಗಳನ್ನು ಅವಲಂಬಿಸಿ ಬದುಕುವ ಯಾರೊಬ್ಬರಿಗೂ ಉತ್ತಮ ಮಟ್ಟದ ಜೀವನ ನಿರ್ವಹಿಸಲು ಆಗದಿರುವುದು ಕಾಣಬರುತ್ತದೆ.

ಗುಡಿಕೈಗಾರಿಕೆಗಳು ಬೆಳೆದು ಬಂದಂತಹ ಹಿನ್ನೆಲೆಯಲ್ಲಿ ಮಹಿಳೆಯರ ಸ್ಥಾನಮಾನ ಉತ್ಪಾದನೆಯಲ್ಲಿ ಪಾತ್ರ, ಪರಿಸರ, ಸಂಸ್ಕೃತಿಯನ್ನು ತಿಳಿಯುವುದರೊಂದಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯ ಪಾತ್ರ ಗಮನಿಸುವುದು ಅಗತ್ಯವಾಗಿದೆ. ಇಂತಹ ವೃತ್ತಿಗಳು ಆರ್ಥಿಕ ವ್ಯವಸ್ಥೆಗೆ ಮೂಲ ತಳಹದಿ ಸಹ ಆಗಿವೆ. ಇದರಿಂದ ಎಷ್ಟೋ ಬಡ ಕುಟುಂಬಗಳು ಜೀವನಾಧಾರವನ್ನು ಸಹ ರೂಪಿಸಿಕೊಂಡಿವೆ. ಹಾಗಾಗಿ ಈ ರೀತಿಯ ಬೆಳವಣಿಗೆಯಿಂದ ಬೆಳೆದು ಬಂದ ಗುಡಿಕೈಗಾರಿಕೆಗಳು ಪ್ರಸ್ತುತ ಪರಿಸ್ಥಿತಿಯಲ್ಲಿ ನಶಿಸುವಂತಹ ಹಂತವನ್ನು ತಲುಪಿವೆ. ಉದಾರೀಕರಣ, ಖಾಸಗೀಕರಣ, ಹಾಗೂ ಜಾಗತೀಕರಣವು ಹಲವಾರು ಗುಡಿಕೈಗಾರಿಕೆಗಳನ್ನು ನುಂಗಿ ಹಾಕುವ ಹಂತವನ್ನು ತಂದುನಿಲ್ಲಿಸಿದೆ. ಇದರಿಂದ ಎಷ್ಟೋ ಮಹಿಳೆಯರು, ಬಡ ಕುಟುಂಬಗಳು ಉದ್ಯೋಗವಿಲ್ಲದೆ ಆದಾಯವಿಲ್ಲದೆ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಸಿಕೊಂಡು ಜೀವಿಸುವಂತಾಗಿವೆ.

ಸಾಮಾಜಿಕ ಪಿಡುಗುಗಳಿಂದ ಬಡತನ, ನಿರುದ್ಯೋಗ, ಅನಕ್ಷರತೆ, ಜನಸಂಖ್ಯೆಸ್ಫೋಟ ಇಂತಹ ಹಲವಾರು ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದ ಸಮಸ್ಯೆಗಳು ಕಂಡು ಬರುತ್ತಿವೆ.

ಮೂಲತಃ ಗುಡಿಕೈಗಾರಿಕೆಗಳು ಅಲ್ಪಮಟ್ಟದ ಜೀವನಾಧಾರ ವೃತ್ತಿಯಾಗಿ ಬಹಳಷ್ಟು ಕುಟುಂಬಗಳು ಇಂತಹ ಗುಡಿಕೈಗಾರಿಕೆಗಳಿಂದಲೇ ಜೀವನ ನಡೆಸುತ್ತಿರುವುದು ನಾವು ಇಂದಿಗೂ ಕಾಣಬಹುದಾಗಿದೆ. ಕೈಗಾರಿಕೀಕರಣದಿಂದ ಗುಡಿಕೈಗಾರಿಕೆಗಳು ನಶಿಸುವುದರಿಂದ ಮಹಿಳೆಯ ಬದುಕಿನ ಮೇಲೆ ಬರೆ ಬಿದ್ದಂತಾಗಿದೆ. ಇದರಿಂದಾಗಿ ಕಸುಬು ಜೀವನ ವೃತ್ತಿ ಕಳೆದುಕೊಳ್ಳುವಂತಾಗಿದೆ. ಇದರಿಂದಾಗಿ ಮಾನವ ಶ್ರಮ ಸಂಪತ್ತು ವ್ಯರ್ಥವಾಗಿ ಕಳೆದುಹೋಗುತ್ತಿದೆ. ಅದ್ದರಿಂದಲೇ ಗುಡಿಕೈಗಾರಿಕೆ ಮಧ್ಯಮ ವರ್ಗದ ಜನರ ದುಡಿಯುವ ಚಿಂತನೆಗೆ ಹಚ್ಚುತ್ತಿದೆ. ಈ ಬಗೆಯ ಚಿಂತನೆಗಳು ಪ್ರಸ್ತುತ ಅಗತ್ಯವಾಗಿರುವುದರಿಂದ ಅಧ್ಯಯನಕ್ಕೆ ಹೆಚ್ಚಿನ ವಿಶೇಷತೆ ಕಂಡುಬರುತ್ತದೆ.

ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಯನ್ನು ತಿಳಿಯಲು ಇದು ಒಂದು ಅವಕಾಶವಾಗಬಹುದು ಎನ್ನಬಹುದು. ಮಹಿಳೆಯರ ಸಾಮಾಜಿಕ, ಆರ್ಥಿಕ, ಕೌಟುಂಬಿಕ ಜೀವನದ ಮೂಲ ಉದ್ದೇಶಗಳನ್ನು ತಿಳಿಯಲು ಕುಟುಂಬದ ಪ್ರತಿಯೊಂದು ವಿಷಯದಲ್ಲಿ ಗಂಡಿನಷ್ಟೆ ಸಮನಾಗಿ ದುಡಿದರೂ ತಾರತಮ್ಯದ ಭಾವನೆ. ಕಳಚಲು ಸಾಧ್ಯವಿಲ್ಲದ ಪರಿಸ್ಥಿತಿಯಿಂದ ಮಹಿಳೆ ನರುಳುತ್ತಿದ್ದಾಳೆ. ಹೀಗಾಗಿ ಈ ಅಧ್ಯಯನವನ್ನು ಗುಲ್ಬರ್ಗಾ ಜಿಲ್ಲೆಯ ಪರಿಸರದಲ್ಲಿನ ಗುಡಿಕೈಗಾರಿಕೆಗಳನ್ನು ಅನುಲಕ್ಷಿಸಿ ಕೈಗೊಳ್ಳಲಾಗಿದೆ. ಇದರಿಂದ ಅಧ್ಯಯನದಲ್ಲಿ ಮಹಿಳೆಯರ ಕೌಟುಂಬಿಕ ಜೀವನದ ಸಮಸ್ಯೆಗಳೊಂದಿಗೆ ಮಹಿಳೆಯ ಸ್ಥಾನಮಾನ ತಿಳಿಯಲು ಹಾಗೂ ಅವಳ ತಾರತಮ್ಯ ಬದುಕಿನ ವಿಷಯಗಳನ್ನು ತಿಳಿಯಲು ಸಹಾಯಕವಾಗಿದೆ. ಈ ರೀತಿಯ ಅಧ್ಯಯನಗಳಿಗೆ ಇಂದು ಬಹಳಷ್ಟು ಅಗತ್ಯವಿದೆ. ಮಹಿಳಾ ಮೀಸಲಾತಿಯ ಬಗ್ಗೆ ಚರ್ಚಿಸುವ ಸಂದಭದಲ್ಲಿ ಇಂಥ ಬಹಳಷ್ಟು ಅಧ್ಯಯನಗಳು ರಾಷ್ಟ್ರ, ರಾಜ್ಯಸರ್ಕಾರ, ಸಂಘಸಂಸ್ಥೆಗಳು ಗುಡಿಕೈಗಾರಿಕೆಗಳ ಕಡೆ ಗಮನಹರಿಸಿ ಅವುಗಳ ಹಾಗೂ ಅವುಗಳನ್ನು ಆಶ್ರಯಿಸಿ ಬದುಕುವ ಜನಸಮೂಹಕ್ಕೆ ಒಂದು ತಿರುವನ್ನು ನೀಡಿ ಯೋಜನೆಗಳ ತಯಾರಿಕೆಗೆ, ಹೊಸ ಹೊಸ ಕಾರ್ಯಕ್ರಮಗಳ ರೂಪಿಸುವಿಕೆಗೆ ಇಂತಹ ಅಧ್ಯಯನಗಳು ಸಹಾಯಕವಾಗಬಲ್ಲವು ಎಂಬ ಆಶಯಗಳು ಒತ್ತಾಸೆಗಳು ಈ ಅಧ್ಯಯನದ ಹಿನ್ನೆಲೆಗಿವೆ. ಗುಡಿಕೈಗಾರಿಕೆಗಳನ್ನೇ ಜೀವನಾಧಾರವಾಗಿ ನಂಬಿ ಬದುಕುವವರು ಇಂದಿನ ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಅವರು ಎದುರಿಸುವ ಅವರ ಮುಂದೆ ನಿಂತ ಸವಾಲುಗಳಾವುವು ಈ ಎಲ್ಲಾ ಪ್ರಶ್ನೆಗಳ ಹಿನ್ನೆಲೆಯೊಂದಿಗೆ ಗುಡಿಕೈಗಾರಿಕೆಗಳ ತಯಾರಿಕೆಯಲ್ಲಿನ ಒಟ್ಟು ಸಮುದಾಯದ ಉತ್ಪನ್ನದೊಂದಿಗೆ ಜೀವನಕ್ರಮ, ಕುಟುಂಬ ವ್ಯವಸ್ಥೆ, ಅಲ್ಲಿಯ ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು ಕಟ್ಟಿಕೊಡುವುದು ಈ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

ಅಧ್ಯಯನದ ಮಹತ್ವ

ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮುಂತಾದ ಅನೇಕ ಕರಣಗಳ ಮಧ್ಯ ಜಗತ್ತು ಇಂದು ಸಂಕುಚಿತಗೊಂಡು ಪ್ರಗತಿ ಪಥದತ್ತ ದಾಪುಗಾಲು ಹಾಕುತ್ತಾ ಅಭಿವೃದ್ಧಿಯ ಅರ್ಥವ್ಯವಸ್ಥೆಯನ್ನು ಹೊಂದುವ ಹಂಬಲ ಒಂದು ಕಡೆಗೆ ಇದ್ದರೆ, ಇನ್ನೊಂದು ಕಡೆಗೆ ಪುರಾತನ ಸಂಪ್ರದಾಯ ಸನ್ನಿವೇಶಗಳ ಮಧ್ಯದಲ್ಲಿ ಆಮೆ ವೇಗದ ಸಣ್ಣ ಪ್ರಮಾಣದ ಗುಡಿಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಜನರನ್ನು ಕಾಣುತ್ತೇವೆ. ಜಗತ್ತಿನ ಇಂದಿನ ಬೃಹತ್ ಉದ್ದಿಮೆಗಳು ಅಲ್ಪ ವೆಚ್ಚದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸರಕುಗಳನ್ನು ಆಹಾರ ಸಾಮಗ್ರಿಗಳನ್ನು ಉತ್ಪಾದಿಸಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿ ಗರಿಷ್ಠಮಟ್ಟದ ಲಾಭವನ್ನು ಪಡೆಯುತ್ತಿದ್ದರೆ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಹಳೆ ಪದ್ಧತಿಯಲ್ಲಿ ದೀರ್ಘಕಾಲದ ಶ್ರಮವಹಿಸಿ ಕಡಿಮೆ ಉತ್ಪಾದನೆಮಾಡಿ ಲಾಭಾಂಶ ಹೊಂದದೆ, ಇದೊಂದು ಪುರಾತನ ವೃತ್ತಿಯೆಂಬಂತೆ ಸಂಪ್ರದಾಯವನ್ನೇ ಪಾಲಿಸಿಕೊಂಡು ಬರುತ್ತಿರುವ ಅನೇಕ ಗುಡಿಕೈಗಾರಿಕೆಗಳನ್ನು ಕಾಣುತ್ತೇವೆ.

ಅದರಲ್ಲಿ ಗುಡಿಕೈಗಾರಿಕೆಗಳು ನಮ್ಮ ದೇಶದ ಆರ್ಥಿಕ ಸುಧಾರಣೆಯ ಬಡಕುಟುಂಬಗಳ ಉದ್ಧಾರದ ಪ್ರತಿಬಿಂಬವಾಗಿ ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದಿವೆ. ಇಂದಿನ ಪರಿಸ್ಥಿತಿಗೆ ಹೋಲಿಸಿದರೆ ದಿಕ್ಕು ಕಾಣದ ದೆಸೆಯಲ್ಲಿ ನಶಿಸಿ ಹೋಗುತ್ತಿರುವ ಗುಡಿಕೈಗಾರಿಕೆ ಕುಟುಂಬಗಳನ್ನು ಕಾಣುತ್ತೇವೆ. ಇಂದು ಅವರು ಬೇರೆ ಮಾರ್ಗವನ್ನು ಕಾಣದೆ ಬೃಹತ್ ಕೈಗಾರಿಕೆಗಳಲ್ಲಿ ಕೂಲಿ ಆಳುಗಳಾಗಿ ಕೆಲಸ ಮಾಡುವ ಹಂತ ತಲುಪಿದ್ದಾರೆ. ಅದರಲ್ಲಿ ಮಹಿಳೆಯರ ಪರಿಸ್ಥಿತಿಯಂತೂ ಹೇಳತೀರದು. ಪುರುಷರ ಹಲವಾರು ಸಮಸ್ಯೆಗಳು ಎದುರಿಸುತ್ತಿರುವಾಗ ಮಹಿಳೆಯರು ತಮ್ಮ ಅಸ್ತಿತ್ವದ ಹುಡುಕಾಟ ಅರಿವಿಲ್ಲದ ಅಂಚಿನಲ್ಲಿ ಮುನ್ನುಗ್ಗುತ್ತಿದ್ದಾರೆ. ಆದರೆ ಈ ಗುಡಿಕೈಗಾರಿಕೆಗಳಲ್ಲಿ ಮಹಿಳೆಯರ ಪಾತ್ರ ಪ್ರಮುಖವಾದರೂ, ಪುರುಷರ ಪ್ರಾಬಲ್ಯದಿಂದ ಮಹಿಳೆಯರ ಸ್ಥಾನಮಾನಕ್ಕೆ ಯಾವುದೇ ರೀತಿಯ ಮನ್ನಣೆ ದೊರೆತಿಲ್ಲ. ಇಲ್ಲಿ ಮಹಿಳೆಯನ್ನು ಎರಡನೇ ದರ್ಜೆಯವಳನ್ನಾಗಿ ಸಮಾಜ ನೋಡುತ್ತದೆ. ಇವಳ ಯಾವುದೇ ಕಾರ್ಯಗಳ ಪ್ರತಿಫಲ ಪುರುಷನ ಅದೀನದಲ್ಲಿದೆಯೋ ಹೊರತು ಮಹಿಳೆಯಲ್ಲಿಲ್ಲ. ಮಹಿಳೆಯರು ಗುಡಿಕೈಗಾರಿಕೆಗಳಲ್ಲಿ ಜೀವಾಳದಂತೆ ಕಾರ್ಯನಿರ್ವಹಿಸುತ್ತಿದ್ದರೂ ಲೆಕ್ಕಕ್ಕಿಲ್ಲದ ಹಾಗೆ ಪರಿಗಣಿಸಿ ಯಾವುದೇ ಅಧಿಕಾರ ಸ್ವತಂತ್ರವನ್ನು ಕೊಡದಂತೆ ಪುರುಷಶಾಹಿ ವ್ಯವಸ್ಥೆ ನೋಡಿಕೊಳ್ಳುತ್ತದೆ. ಸರ್ಕಾರ ಮಹಿಳೆಯರ ಬಗ್ಗೆ ಸಾಕಷ್ಟು ಸುಧಾರಣೆಗಳನ್ನು ತಂದರೂ ಈ ಗುಡಿಕೈಗಾರಿಕೆಗಳಲ್ಲಿ ಯಾವುದೇ ರೀತಿಯಲ್ಲಿ ಫಲಕಾರಿಯಾಗಿಲ್ಲ. ಆದರೆ ಈ ಗುಡಿಕೈಗಾರಿಕೆಗಳಲ್ಲಿ ಮಹಿಳೆಯರ ಪಾತ್ರಗಳನ್ನು ಪತ್ರಿಕೆಗಳಲ್ಲಿ ಮಾತ್ರ ನೋಡುತ್ತೇವೆ. ಮಹಿಳೆಯರಿಂದಲೇ ನಡೆಯುತ್ತಿರುವ ಈ ಗುಡಿಕೈಗಾರಿಕೆಗಳು ವಿನಾಶದ ಅಂಚಿನಲ್ಲಿವೆ ಎಂದು ಮಾತ್ರ ಗುರುತಿಸುತ್ತಾರೆ. ಅವುಗಳ ಅಭಿವೃದ್ಧಿಗಳ ಬಗ್ಗೆ ಹೆಚ್ಚಿನ ಒತ್ತು ನೀಡಿರುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಕಂಡುಬರುವುದಿಲ್ಲ. ಅದಕ್ಕಾಗಿ ವಿಶಿಷ್ಟವಾಗಿ ಅವರ ಸಾಮಾಜಿಕ ಒತ್ತಡಗಳು, ಸ್ವಾತಂತ್ರ್ಯತೆ, ಅವುಗಳ ತಾರತಮ್ಯ, ಅತಂತ್ರದ ಪರಿಸ್ಥಿತಿ ಇದರ ಹಿನ್ನೆಲೆಗಳನ್ನು

ಕಂಡುಕೊಳ್ಳುವುದು ಅಧ್ಯಯನದ ಮಹತ್ವವನ್ನು ಸೂಚಿಸುವುದು ಅಗತ್ಯವಾಗಿದೆ. ಇದರಿಂದ ಅವರ ಕಷ್ಟ ಪರಿಪಾಟಲಿನ ಅರ್ಥವನ್ನು ಕಂಡುಕೊಳ್ಳುವುದು ಅಗತ್ಯವಾಗಿದೆ. ದೇಶದ ಅಭಿವೃದ್ಧಿಯಲ್ಲಿ ಸಾಮಾಜಿಕ ಸಮಾನತೆಯಲ್ಲಿ ಮಹಿಳೆಯರನ್ನು ಮುಂದು ತರುವುದು ಗುಡಿಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವುದು ಅಗತ್ಯ ಮತ್ತು ಅನಿವಾರ್ಯದ ಸಂಗತಿಯಾಗಿ ಉಳಿದಿದೆ.

ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರ ಸ್ವಹಿತಾಶಕ್ತಿಯ ಆಲೋಚನೆಗಳು ಪುರುಷರ ಅಂಚಿನಲ್ಲಿರುವುದರಿಂದ ಅವರು ಮಹಿಳೆಯರನ್ನು ಶೋಷಣೆಗೆ ಈಡುಮಾಡಿದ್ದು ಕಂಡುಬರುತ್ತದೆ. ಲಿಂಗತಾರತಮ್ಯ ಸೂಕ್ಷ್ಮ ಶೋಷಣೆಯು ನಿರಂತರವಾಗಿ ಹರಿದುಬಂದಿದೆ. ಅದರ ಬೇರುಗಳು ಸಾಮಾಜಿಕ ವ್ಯವಸ್ಥೆಯಲ್ಲಿವೆ. ಇದರಿಂದ ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರ ಬದುಕು ಕತ್ತಲೆ ಬವಣೆಯ ಅಂಧಕಾರದಲ್ಲಿ ಸಾಗುತ್ತಿದೆ. ಇವಳಿಗೆ ಸಂತೋಷದ ದಿನಗಳು ಕಾಣವುದೇ ಅಪರೂಪವಾದ ಸಂಗತಿಯಾಗಿದೆ. ಆದ್ದರಿಂದ ಗುಡಿಕೈಗಾರಿಕೆಯಲ್ಲಿನ ಮಹಿಳೆಯರ ಸ್ಥಾನಮಾನವು ಕುಂಠಿತವಾಗುತ್ತಿರುವುದು ಕಾಣಬರುತ್ತದೆ. ಅದಕ್ಕಾಗಿಯೇ ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರ ಪರವಾಗಿ ಸಧೃಡವಾದ ಹೆಜ್ಜೆಯಿಂದ ಕಾರ್ಯೋನ್ಮುಖವಾಗಬೇಕಾದ ತುರ್ತು ಪ್ರಸ್ತುತದಲ್ಲಿದೆ. ಈ ದಿಕ್ಕಿನಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಗುರುತಿಸುವುದು ಬಹಳ ಕ್ಲಿಷ್ಟಕರವಾದ ಸಂಗತಿಯಾಗಿದೆ. ಶಿಕ್ಷಣ, ಆದಾಯ, ದುಡಿಮೆ, ಕುಟುಂಬದಲ್ಲಿಯ ಸ್ಥಾನಮಾನಗಳು ಒಟ್ಟಾರೆಯಾಗಿ, ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಪಾತ್ರವನ್ನು ಗುರುತಿಸುವುದು ಅಧ್ಯಯನದ ಮಹತ್ವವಾಗಿದೆ.

ಅಧ್ಯಯನದ ವ್ಯಾಪ್ತಿ

'ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಪಾತ್ರ' ಎನ್ನುವ ಈ ಅಧ್ಯಯನ ವಿಷಯಕ್ಕೆ ಗುಲ್ಬರ್ಗಾ ನಗರ ಪ್ರದೇಶವನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆಮಾಡಿಕೊಂಡಿದ್ದೇನೆ. ಗುಲ್ಬರ್ಗಾ ನಗರವು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದ ಜಿಲ್ಲೆಯಾಗಿದೆ. ಈ ನಗರದಲ್ಲಿ ಹಲವಾರು ಗುಡಿಕೈಗಾರಿಕೆಗಳು ವಂಶಪಾರಂಪರಾಗತವಾಗಿ ಬೆಳೆದುಕೊಂಡುಬಂದಿವೆ. ಸಮಯ ಅಭಾವದಿಂದ ಪ್ರಸ್ತುತ ಅಧ್ಯಯನವನ್ನು ಗುಲ್ಬರ್ಗಾ ನಗರ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ.

ಗುಲ್ಬರ್ಗಾ ನಗರದ ಪ್ರಮುಖ ಕೈಗಾರಿಕಾ ಕ್ಷೇತ್ರಗಳಾದ ಶಾಹಬಜಾರ್, ಕಪನೂರು, ರಾಮನಗರ, ಪುಟಾಣಿಗಲ್ಲಿ ಮತ್ತು ಸಂತ್ರಸವಾಡಿ ಈ ಸ್ಥಳಗಳಲ್ಲಿ ಹಲವಾರು ಗುಡಿಕೈಗಾರಿಕೆಗಳನ್ನು ಕಾಣಬಹುದು. ಈ ಪ್ರದೇಶಗಳಲ್ಲಿ ಮಹಿಳೆಯರೇ ಹೆಚ್ಚು ಈ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಇಲ್ಲಿಯ ಮಹಿಳೆಯರು ವಿವಿಧ ಜಾತಿವರ್ಗಕ್ಕೆ ಸೇರಿದದವರಾಗಿದ್ದಾರೆ. ಹೀಗಾಗಿ ಅವರವರ ವರ್ಗ, ಜಾತಿ, ಹಿನ್ನೆಲೆಗನುಗುಣವಾಗಿ ವಂಶಪಾರಂಪರ್ಯವಾಗಿ ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡು ಬಂದಿದ್ದ ಹಿನ್ನೆಲೆಯಲ್ಲಿ ೭೫ ಮಹಿಳಾ ಕಾರ್ಮಿಕರನ್ನು ಈ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡು ವಿವಿಧ ಗುಡಿಕೈಗಾರಿಕೆಗಳನ್ನು ಇಲ್ಲಿ ವಿವರಿಸಲಾಗಿದೆ.

ಇಲ್ಲಿ ಹಲವಾರು ಗುಡಿಕೈಗಾರಿಕೆಗಳಿದ್ದು, ಅವುಗಳಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಮುಖ್ಯವಾಗಿ ಐದು ಗುಡಿಕೈಗಾರಿಕೆಗಳನ್ನು ಆಯ್ದುಕೊಳ್ಳಲಾಗಿದೆ.

೧. ಕಮ್ಮಾರಿಕೆ
೨. ಕುಂಬಾರಿಕೆ
೩. ಬಡಿಗತನ
೪. ನೇಕಾರಿಕೆ
೫. ಬೀಡಿ ಕಟ್ಟುವುದು

ಈ ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಪಾತ್ರ, ಕೌಟುಂಬಿಕ ಪರಿಸರ, ಆದಾಯ, ದುಡಿಮೆ ಯಾವ ರೀತಿ ಇದೆ. ಸಾಕ್ಷರತೆ, ಜಾತಿವಾರು ಈ ವಿಷಯಗಳ ಕುರಿತು ಪ್ರಶ್ನಾವಳಿಗಳನ್ನು ರಚಿಸಿ ಸಂದರ್ಶನ ಸೂಚಿಯ ಮೂಲಕ ಮಹಿಳೆಯರನ್ನು ಖುದ್ದಾಗ ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಗಿದೆ. ಈ ಮಹಿಳೆಯನ್ನು ಅಂಕಿಅಂಶಗಳ ಮೂಲಕ ಚರ್ಚಿಸಿ ಕೋಷ್ಟಕ ರೂಪದಲ್ಲಿ ನೀಡಲಾಗಿದೆ.

ಪುರುಷರೊಂದಿಗೆ ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡ ಮಹಿಳೆಯರು ಸರಿಸಮವಾಗಿ ದುಡಿದು ಆರ್ಥಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ, ಅವರಿಗೆ ಯಾವುದೇ ಆರ್ಥಿಕ ಸ್ವಾಲಂಬನೆ ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದಲೇ ಈ ಸಂಶೋಧನೆಗೆ ಗುಲ್ಬರ್ಗಾ ನಗರ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಪ್ರಮುಖವಾಗಿ ೫ ಗುಡಿಕೈಗಾರಿಕೆಗಳಲ್ಲಿ ದುಡಿಯುವ ಮಹಿಳೆಯರ ಬದುಕಿನ ರೀತಿಯ ಮಾಪನ ಮಾಡುವ ಅಗತ್ಯ ಇರುವುದರಿಂದ ನಿರ್ದಿಷ್ಟ ಮಿತಿಯನ್ನು ಹಾಕಿ ಅಧ್ಯಯನ ಕೈಗೊಳ್ಳಲಾಗಿದೆ.

******

ಅಧ್ಯಾಯ ೨

ಗುಡಿಕೈಗಾರಿಕೆಗಳ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ ೨
ಗುಡಿಕೈಗಾರಿಕೆಗಳ ಹುಟ್ಟು ಮತ್ತು ಬೆಳವಣಿಗೆ

ಶತಮಾನಗಳ ಇತಿಹಾಸವನ್ನು ತಿಳಿಯಲು ಹೊರಟರೆ ಆದಿಮ ಕಾಲದ ವಿವಿಧ ಬಗೆಯ ಆವಿಷ್ಕಾರಗಳು ಬೆಳಕಿಗೆ ಬರುತ್ತವೆ. ಆದಿಮ ಸಮುದಾಯಗಳಿಂದ ಆರಂಭಗೊಂಡ ಸಮದಾಯಗಳ ಅಂತಸ್ತ ಜಗತ್ತಿನಲ್ಲಿ ತಮ್ಮ ಬೌದ್ಧಿಕ ಹೊಸ ಆಯಾಮಗಳು ಉದಯಿಸಿವೆ. ಈ ಎಲ್ಲಾ ಆಯಾಮಗಳ ರೂಪದಲ್ಲಿ ಮಹಿಳೆಯ ಪಾತ್ರ ಗಣನೀಯವಾಗಿದೆ. ಪೂರ್ವಕಾಲದ ಮಾನವನ ಸ್ಥಿತಿಯನ್ನು ತಿಳಿಯ ಹೊರಟರೆ ಎಲ್ಲಾ ಮಾನವ ಸಮೂಹಗಳು ಮಾತೃಪ್ರಧಾನವಾಗಿ ಪ್ರಾರಂಭಗೊಂಡು ಬೆಳೆದು ಬಂದವುಗಳೇ ಆಗಿವೆ. ಮಹಿಳೆಯ ಬೌದ್ಧಿಕ ಜ್ಞಾನದಿಂದ ಉದಯಿಸಿದ ಹಲವಾರು ಹೊಸಶೋಧನೆಗಳು ಮುಂದೆ ತಮ್ಮ ಜೀವನವನ್ನು ರೂಪಿಸುವ ವಿವಿಧ ವೃತ್ತಿಗಳಾಗಿ ಬೆಳವಣಿಗೆ ಹೊಂದಿದವು. ಇವುಗಳಲ್ಲಿ ಮುಖ್ಯವಾಗಿ ಮೊದಲನೆಯ ಸಾಲಿನಲ್ಲಿ ನಿಲ್ಲುವ ಗುಡಿಕೈಗಾರಿಕೆಗಳು ಮಹಿಳೆಯ ಪಾತ್ರದಿಂದ ರೂಪಾಂತರಗೊಂಡು ಬಂದ ವಿಷಯ ಚರಿತ್ರೆಯಲ್ಲಿ ದಾಖಲಾಗಿದೆ.

ಪೂರ್ವಕಾಲದ ಮಾನವನ ಸಮೂಹದ ಉಗಮದೊಂದಿಗೆ ಆರಂಭಗೊಂಡ ಆಹಾರದ ಮೂಲಗಳು ಆರಂಭದಲ್ಲಿ ಬೇಟೆಯ ಮುಖಾಂತರ ಪರಿವರ್ತನೆಗೊಳ್ಳುತ್ತಾ ಬಂದಿವೆ. ಈ ಎಲ್ಲಾ ಘಟ್ಟಗಳಲ್ಲಿ ಮಾನವನು ತನ್ನನ್ನು ತಾನು ತೊಡಗಿಸಿಕೊಂಡು ನಿರ್ವಹಿಸಿದ ಹಲವಾರು ವೃತ್ತಿಗಳಲ್ಲಿ ಪ್ರಮುಖವಾಗಿ ಕಮ್ಮಾರಿಕೆ, ಕುಂಬಾರಿಕೆ, ಬಡಗಿತನ, ನೇಕಾರಿಕೆ ಇತ್ಯಾದಿಗಳು ಸೇರುತ್ತವೆ. ಈ ಎಲ್ಲಾ ವೃತ್ತಿಗಳಲ್ಲಿ ಮಹಿಳೆಯು ಪ್ರಧಾನಪಾತ್ರ ವಹಿಸಿದ್ದು ಕಂಡುಬರುತ್ತದೆ. ನಾಗರಿಕತೆಯ ವಿವಿಧ ಹಂತದ ಬೆಳವಣಿಗೆಯಲ್ಲಿ ಗುಡಿಕೈಗಾರಿಕೆಗಳು ಹೊಸ ರೂಪ ಪಡೆದು ಗ್ರಾಮೀಣ ಭಾಗದ ಸಂಪತ್ತಿನ ಮೂಲಗಳಾಗಿದ್ದವು. ಕೈಗಾರೀಕಿಕರಣದ ಬೆಳವಣಿಗೆಯು

ಈ ಎಲ್ಲಾ ಬೆಳವಣಿಗೆಗಳನ್ನು ಮುರಿದು ಹಾಕಿತ್ತು. ಗಾಂಧೀಜಿಯವರು ಕಂಡಂತಹ ಗ್ರಾಮೀಣಾಭಿವೃದ್ಧಿಯ ಕನಸ್ಸು ಕೈಗಾರಿಕೆಗಳು ವಿದ್ಯಮಾನಗಳು ಮಹಿಳೆಯನ್ನು ಮತ್ತು ಗುಡಿಕೈಗಾರಿಕೆಗಳನ್ನು ಮೂಲೆಗುಂಪು ಮಾಡಿವೆ.

ಮಹಿಳೆಯು ತನ್ನ ಕುಟುಂಬ ನಿರ್ವಹಣೆಯಲ್ಲಿ ತೊಡಗಿಸಿಕೊಂಡು ನಂತರ ಗುಡಿಕೈಗಾರಿಕೆಗಳಲ್ಲಿ ಕೂಡ ತೊಡಗಿಸಿಕೊಂಡು ಕಾರ್ಯನಿರ್ವಹಿಸುತ್ತಾ ಕುಟುಂಬದ ಆರ್ಥಿಕ ಹೊರೆಯನ್ನು ಹೊರುತ್ತಿದ್ದಳು. ಆದರೆ ಇಂದು ಬದಲಾದ ಸರ್ಕಾರದ ನೀತಿಗಳು ಅಭಿವೃದ್ಧಿ ಯೋಜನೆಗಳು ಕೈಗಾರೀಕಿಕರಣ ಮಹಿಳೆಯನ್ನು ಮರೆತು ಗುಡಿಕೈಗಾರಿಕೆಗಳ ವಲಯವನ್ನು ಸಂಪೂರ್ಣ ಕಡೆಗಣಿಸಿರುವ ಪರಿಸ್ಥಿತಿ ಇದೆ.

೧. ಮಾನವನ ವಿಕಾಸದ ಹಂತ

ಮಾನವ ಕುಲದ ವಿಕಾಸದ ಸೃಷ್ಟಿ ಪುರಾಣಗಳು ತಿಳಿಯ ಹೊರಟರೆ ಮಾನವನ ಇನ್ನು ತನ್ನ ಮೂಲ ನೆಲೆಯನ್ನು ತಿಳಿಯದೆ ಹತ್ತಿರದ ಕಾಡುಗಳಲ್ಲೆ ವಾಸಿಸುತ್ತಿದ್ದ. ಮರಗಳ ಮೇಲೆ ಕಾಡುಗಳಲ್ಲಿ ಬಾರಿ ಕ್ರೂರ ಮೃಗಗಳು ಎದುರು ಗಡ್ಡೆ ಗೆಣಸು ಕಾಯಿ ಹಣ್ಣುಗಳನ್ನು ತಿನ್ನುತ್ತಾ ಇನ್ನೊಬ್ಬರಿಗೆ ಕೇಳಿಸದಂತೆ ಜೀವಿಸುತ್ತಿದ್ದ. ಹಾಗಾಗಿ ಇತಿಹಾಸದ ಪುಟಗಳಿಂದ ನಾವು ತಿಳಿಯುವುದು ಮಾನವನು ಪ್ರಾಣಿಗಳ ಜಗತ್ತಿನಿಂದ ವಿಕಾಸಗೊಂಡು ಬಂದವನೆಂದು ಈ ಪರಿವರ್ತನೆಯನ್ನು ನಾವು ಒಪ್ಪಿಕೊಳ್ಳಬೇಕು. ಆದ್ದರಿಂದಲೇ ಮಾನವನ ಬೆಳವಣಿಗೆಯನ್ನು (ವಿಕಾಸವನ್ನು) ಎರಡೂ ಹಂತಗಳಲ್ಲಿ ಕಾಣಬಹುದು. ೧. ಕಿರಾತಾವಸ್ಥೆ, ೨. ಅನಾಗರಿಕವಸ್ಥೆ ಮಾನವನ ಮೊದಲನೆಯ ಹಂತದಲ್ಲಿ ೩ ಹಂತಗಳಿಂದ ವಿಕಾಸ ಕ್ರಿಯೆಯನ್ನು ಗುರುತಿಸಬಹುದು. ಆದಿಮಾನವನ ನಂತರ ಆಹಾರದ ಮೂಲವಾಗಿ ಪ್ರಕೃತಿಯಲ್ಲಿ ದೊರೆಯುತ್ತಿದ್ದ ವಿವಿಧ ಬಗೆಯ ಜಲ ಜೀವಿ, ಪ್ರಾಣಿಗಳನ್ನು ಆಹಾರವನ್ನಾಗಿ ಬಳಸುವುದರೊಂದಿಗೆ ಬೆಂಕಿಯ ಬಳಕೆಯನ್ನು ಪ್ರಾರಂಭ ಮಾಡಿದ ನಂತರದ ದಿನಗಳಲ್ಲಿ ನದಿ ತೀರಗಳನ್ನು ಹುಡುಕಿಕೊಂಡು ಹೋಗುತ್ತಾ ಜೀವನ ವ್ಯವಸ್ಥೆಯನ್ನು ಭೂಮಿಯ ಮೇಲೆ ಹರಡಿಕೊಂಡಿದ್ದನು. ಒರಟಾದ ಕಲ್ಲುಗಳನ್ನು ಉಜ್ಜಿ ಬೆಂಕಿ ಮಾಡುವ ಕಲೆಯನ್ನು ಕರಗತಮಾಡಿಕೊಂಡು ಬಿಸಿ ಬೂದಿಯಲ್ಲಿ ಬೇಯಿಸಿದ ಗಡ್ಡೆ ಗೆಣಸು ಹಾಗೂ ಆಹಾರ ಪದಾರ್ಥಗಳನ್ನು ಸೇವಿಸಲು ಪ್ರಾರಂಭಿಸಿದನು. ಆನಂತರದ ದಿನಗಳಲ್ಲಿ ಬೇಟೆ ಮಾನವನಿಗೆ ಆಹಾರದ ಜೊತೆಗೆ ಹವ್ಯಾಸವೂ ಆಯಿತು.

ಬಿಲ್ಲುಬಾಣಗಳನ್ನು ಕಂಡುಹಿಡಿಯುವುದರೊಂದಿಗೆ ಕಾಡುಪ್ರಾಣಿಗಳು ಮಾನವನ ನಿಯಮಿತ ಆಹಾರವಾಯಿತು. ಸಾಮಾನ್ಯವಾಗಿ ಬೇಟೆಯು ವೃತ್ತಿಯಾಗಿ ಪರಿಣಮಿಸಿತು. ಇದರಿಂದ ಸ್ವತಂತ್ರ್ಯವಾದ ಸಲಕರಣೆಗಳನ್ನು ಬಳಸಲು ಪ್ರಾರಂಭಿಸಿದನು. ಇದೆ ಕಾಲಘಟ್ಟದಲ್ಲಿಯೇ ಮಾನವನಿಗೆ ಅನೇಕ ಇತರೆ ಆವಿಷ್ಕಾರಗಳ ಪರಿಚಯವು ಆಯಿತು. ಬಿಲ್ಲು ಬಾಣ ಪರಿಚಯದ ನಂತರ ಜೀವನೋಪಾಯ ಸಾಧನಗಳಲ್ಲಿ ವಿಶೇಷ ಬದಲಾವಣೆಯಾಯಿತು. ಮರದ ಪಾತ್ರೆ, ಮಣ್ಣಿನಿಂದ ತಯಾರಾದ ಬುಟ್ಟಿಗಳು ನಯ ಮಾಡಿದ ಆಯುಧಗಳು ಇವುಗಳು ಪ್ರಾರಂಭದ ಹಂತದಲ್ಲಿ ಮಹಿಳೆಯ ಉತ್ಪಾದನೆಯ ಮೇಲೆ ಒಂದಿಷ್ಟು ಪ್ರಮಾಣದ ಪ್ರಭುತ್ವ

ಪಡೆದಿದ್ದಳು. ಆದುದರಿಂದಲೇ ಪೂರ್ವಕುಲದ ಕುಟುಂಬಗಳು ಮಾತ್ರ ಪ್ರಾಧಾನ್ಯತೆಯನ್ನು ಹೊಂದಿದ್ದು ಕಂಡು ಬರುತ್ತದೆ. ಎರಡನೆಯ ಹಂತದ ಬೆಳವಣಿಗೆಯಲ್ಲಿ ಮಾನವನು ವಿವಿಧ ಉತ್ಪಾದನೆಗಳೊಂದಿಗೆ ಆರಂಭ ಮಾಡುತ್ತಾನೆ. ಇದರಲ್ಲಿ ಮಣ್ಣಿನಿಂದ ವಸ್ತುಗಳನ್ನು ತಯಾರಿಕೆ ಮಾಡುವುದು ಕಲಿಯಲು ಪ್ರಾರಂಭಿಸಿದನು.

ಅನಾಗರಿಕ ವ್ಯವಸ್ಥೆಯ ಮುಖ್ಯ ಘಟ್ಟವೆಂದರೆ ಪ್ರಕೃತಿಯ ತಾಣದಲ್ಲಿ ತನಗೆ ಬೇಕಾದ ಪರಿಸರವನ್ನು ಹುಡುಕುತ್ತಾ ಹೊರಟ ಮಾನವ ತನ್ನ ಬದುಕಿನ ವಿವಿಧ ಅಂಗಗಳಿಗೆ ಸಹಾಯವಾಗುವ ಪ್ರಕೃತಿಯ ಸಂಪತ್ತನ್ನು ಅವಲಂಬಿಸಿ ಜೀವಿಸತೊಡಗಿದ. ಹಾಗಾಗಿ ಈ ಕಾಲಘಟ್ಟದಲ್ಲಿ ವಿಶಿಷ್ಟ ಲಕ್ಷಣಗಳು ಕಂಡು ಬರತೊಡಗಿದವು. ಬೇಟೆಗಾಗಿ ಪುರುಷರು ಕುಟುಂಬದಿಂದ ಹೊರಗೆ ದುಡಿಯುವವರಾದರು. ಇದರಿಂದ ಮಹಿಳೆಯು ಮನೆಯಲ್ಲಿಯೇ ದುಡಿಯುವ ಯಂತ್ರವಾದಳು. ಈ ಪರಿಸ್ಥಿತಿಯಿಂದಲೇ ಮಹಿಳೆ ಅನೇಕ ಹೊಸ ಪ್ರಯೋಗಗಳ ಕೇಂದ್ರಬಿಂದುವಾಗಿ ಕಂಡುಬರುತ್ತಾಳೆ.

ಪ್ರಾಣಿ ಪೋಷಣೆಯೊಂದಿಗೆ ಆರಂಭಗೊಂಡ ಈ ಹಂತದ ವಿಕಾಸದಲ್ಲಿ ಮನುಷ್ಯರು ನೀರಾವರಿಯ ಮೂಲಕ ಆಹಾರದ ಪ್ರದೇಶಗಳನ್ನು ಹಾಗೂ ಪ್ರಾಣಿಗಳ ಗುಂಪು ಹಿಂಡು ವಾಸಿಸುವ ಪ್ರದೇಶಗಳನ್ನು ವಿಶೇಷವಾಗಿ ಗುರುತಿಸತೊಡಗಿದರು. ಆಗ ಪ್ರಾಣಿಗಳ ಉಪಯುಕ್ತತೆಯನ್ನು ತಿಳಿದು ಮಂದೆಗಳಾಗಿ ಸಾಕುವುದನ್ನು ಪ್ರಾರಂಭಿಸಿದವಳು. ಮಹಿಳೆಯೇ ಇದಕ್ಕಾಗಿ ಸೂಕ್ತ ಸ್ಥಳಗಳಲ್ಲಿ ಜೀವಿಸಲು ಪ್ರಾರಂಭಿಸಿದ. ನಂತರವೇ ಪಶುಪಾಲನೆಯು ಹುಟ್ಟಿದ್ದು. ಅರಣ್ಯ ಸಂಪತ್ತಿನ ಪ್ರದೇಶದಲ್ಲಿ ವಾಸಿಸಲು ಅಸಾಧ್ಯವಾದ ಪರಿಸರದಲ್ಲಿ ಈ ಹಂತದ ಪಶುಗಳನ್ನು ಹಾಲು ಮತ್ತು ಮಾಂಸ ನೀಡುವ ಪ್ರಾಣಿಗಳಿಗೆ ವಿಶೇಷವಾದ ಗಮನ ನೀಡತೊಡಗಿದ್ದು ಮಹಿಳೆಯೇ ಆಗಿದ್ದಳು ಎಂದು ಇತಿಹಾಸದಿಂದ ತಿಳಿದು ಬರುತ್ತದೆ.

ಭಾರತದ ಬೆನ್ನೆಲುಬು ಎಂದರೆ ಕೃಷಿ ಮತ್ತು ಪಶುಪಾಲನೆ. ಇದರಲ್ಲಿ ಸಂಶಯದ ಮಾತೇ ಇಲ್ಲ. ಅದೇ ರೀತಿಯಾಗಿ ಇವುಗಳಲ್ಲಿ ಮಹಿಳೆಯ ಪಾತ್ರವೂ ಸಹ ಅಷ್ಟೇ ಪ್ರಾಮುಖ್ಯವಾದುದು. ನಮ್ಮ ಸಮಾಜದಲ್ಲಿ ಲಿಂಗಭೇದ ಹೆಚ್ಚಾಗಿರುವುದರಿಂದ ಕೃಷಿ ಮತ್ತು ಪಶುಪಾಲನೆ ಕ್ಷೇತ್ರದಲ್ಲಿ ಮಹಿಳೆಯನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಪುರಾಣಗಳಲ್ಲಿ ತಿಳಿಸಿರುವಂತೆ ಭೂಮಿಯ ನಂತರ ಮಹಿಳೆಗೆ ಹೆಚ್ಚಿನ ಸ್ಥಾನ ಪ್ರಸ್ತುತದವರೆಗೂ ನಮ್ಮ ಗಮನದಲ್ಲಿ ನಿಲ್ಲುವಂತದಾಗಿದೆ. ಭೂಮಿಗೆ ಹೇರುವ, ಹೊರುವ ರಕ್ಷಿಸುವ ಶಕ್ತಿಗಳಿರುವಂತೆಯೇ ಆಕೆಗೆ ಕೊಲ್ಲುವ ಕಟ್ಟಿ ಬೆಳೆಸುವ ಶಕ್ತಿಯು ಇದೆ. ಹಾಗಾಗಿ ಈ ಎಲ್ಲಾ ಪ್ರಕ್ರಿಯೆಗಳಿಗೆ ಭೂಮಿಯು ಸಾಕ್ಷಿಯಾಗಿರುವಂತೆ ಮಹಿಳೆಯು ಪ್ರೀತಿಸುವ ನೆಚ್ಚಿಕೊಳ್ಳುವ ಪ್ರೀತಿ ಪಾತ್ರದ ಬೆಳವಣಿಗೆಯ ದಾರಿದೀಪವಾಗುತ್ತಾಳೆ. ಎಲ್ಲಾ ಕುಟುಂಬದಲ್ಲಿ ಮಕ್ಕಳ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಅವಳ ಪಾತ್ರ ಯಾರು ಕಡೆಗಣಿಸುವಂತಿಲ್ಲ. ಹಾಗಾಗಿ ಜೀವನಕ್ರಮದಲ್ಲಿ ಕೃಷಿ ಕ್ಷೇತ್ರದಿಂದ ಬೆಳಕಿಗೆ ಬಂದವು. ಇದರಿಂದಲೇ

ಮನುಷ್ಯನ ಜೀವನ ಕ್ರಮದಲ್ಲಿಯೂ ಹೊಸ ಯುಗ ಆರಂಭವಾಯಿತು. ಈ ಸಮುದಾಯದಿಂದಲೇ ಮಹಿಳೆಯನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಹಾಗೆ ಕೃಷಿಯಲ್ಲಿ ಮಹಿಳೆಯ ಪಾತ್ರ ಇಂದಿಗೂ ಸ್ಮರಣೀಯ. ಕೃಷಿ ಮತ್ತು ಪಶುಪಾಲನೆ ಮಕ್ಕಳ ಲಾಲನೆ ಪಾಲನೆಯಲ್ಲಿ ತೊಡಗಿದ ನಂತರದ ದಿನಗಳಲ್ಲಿ ಅಲೆಮಾರಿ ಜೀವನ ತೊರೆದು ಸ್ಥಿರ ಜೀವನವನ್ನು ಕಂಡುಕೊಂಡರು. ಮುಂದೆ ಅನೇಕ ಜನಾಂಗಗಳು ವರ್ಗಗಳಾಗಿ ವಿಭಜಿತವಾಗಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಇದರಿಂದ ಮಹಿಳೆಯ ವೈವಿಧ್ಯಮಯವಾದ ಬದುಕನ್ನು ಕೃಷಿರಂಗ ಮತ್ತು ಪಶುಪಾಲನೆ ರಂಗದಲ್ಲಿ ತೊಡಗಿಸಿಕೊಂಡು ಪಾತ್ರವನ್ನು ಗುರುತಿಸಬಹುದಾಗಿದೆ.

೨. ಪಶುಪಾಲನೆಯಿಂದ ಕೃಷಿ ಹಂತದ ಬೆಳವಣಿಗೆ

ಮಾನವನ ಅನಾಗರಿಕಾವಸ್ಥೆಯಿಂದ ಮಧ್ಯಮ ಮಜಲು ಪ್ರಾರಂಭದೊಂದಿಗೆ ಹಲವಾರು ಬದಲಾವಣೆಗಳನ್ನು ಕಾಣತೊಡಗಿದ. ಇದು ಪೂರ್ವಕಾಲದಲ್ಲಿ ಪ್ರಾಣಿ ಪೋಷಣೆಯೊಂದಿಗೆ ಆರಂಭಗೊಂಡಿತ್ತು. ಈ ಹಂತದಿಂದಲೇ ಮನೆ ಕಟ್ಟಲು, ಇಟ್ಟಿಗೆಗಳನ್ನು, ಕಲ್ಲುಗಳನ್ನು ಉಪಯೋಗಿಸತೊಡಗಿದ. ನೀರಾವರಿಯ ಮೂಲಕ ಆಹಾರದ ಯೋಗ್ಯವಾದ ಬೆಳೆಗಳನ್ನು ಬೆಳೆಯುವುದರೊಂದಿಗೆ ಸ್ವಾತಂತ್ರ್ಯ ಬೆಳವಣಿಗೆಯನ್ನು ಕಂಡ. ಅನಾಗರಿಕ ವ್ಯವಸ್ಥೆಯ ಮಧ್ಯ ಮಜಲು ಹಾಲು ಮತ್ತು ಮಾಂಸ ನೀಡುವ ಪ್ರಾಣಿಗಳ ಸಾಕಾಣಿಕೆಯಿಂದ ಪ್ರಾರಂಭಗೊಂಡಿತ್ತು.

ಈ ಹಂತದಲ್ಲಿ ಸಸ್ಯಗಳು ಬೆಳೆಯಲು ತಿಳಿದಿರಲಿಲ್ಲ. ಪಶುಪಾಲನೆಯು ಈ ಕಾಲದ ಮುಖ್ಯ ಅನ್ವೇಷಣೆಗಳಲ್ಲೊಂದು. ಪಶುಗಳನ್ನು ಹಿಂಡು ಹಿಂಡಾಗಿ ಸಾಕುವುದು ಕಲಿತಿದ್ದರು. ಪ್ರಾಣಿ ಪೋಷಣೆಯು ಮೊದಲು ಹುಲ್ಲುಗಾವಲುಗಳ ಗಡಿಯಲ್ಲಿ ಆರಂಭಿಸಿದರು. ನಂತರ ಈ ಜನರು ತಮಗೆ ಸಾಧ್ಯವಾದ ಮಟ್ಟಿಗೆ ಹುಲ್ಲುಗಾವಲು ಪ್ರದೇಶವನ್ನು ಹುಡುಕಿಕೊಂಡು ನಡೆಯತೊಡಗಿದರು. ಹುಲ್ಲಿನಿಂದ ಕೂಡಿದ್ದ ನೀರಿನ ಸೌಲಭ್ಯವಿದ್ದ ಮೈದಾನ ಪ್ರದೇಶವನ್ನು ಸ್ವಂತ ಇಚ್ಛೆಯಿಂದ ಹುಡುಕುವವರಾದರು. ಅವರಿಗೆ ಅನುಕೂಲವಾದ ಪ್ರದೇಶದ ಭೂಮಿಯಲ್ಲಿ ಧಾನ್ಯಗಳನ್ನು ಬೆಳೆಯುವುದು ಕಲಿತು ದನಕರುಗಳಿಗೆ ಮೇವು ಒದಗಿಸುವುದಕ್ಕೆ ಮುಂದಾದರು. ಇದರಿಂದ ಮುಸುಕಿನ ಜೋಳದಲ್ಲಿ ಕ್ರಾಂತಿಕಾರಕ ಬೆಳವಣಿಗೆಯಾಯಿತು. ಈ ಪ್ರದೇಶದಲ್ಲಿ ಧಾನ್ಯಗಳನ್ನು ಪ್ರಾಣಿಗಳಿಗೆ ಬೆಳೆದವರು. ತಮ್ಮ ಉಪಯೋಗಕ್ಕೆ ಬರುತ್ತದೆ ಎಂದು ತಿಳಿದು ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಪ್ರಾರಂಭಿಸಿದರು. ಅನಂತರವೇ ತಿಳಿದದ್ದು ಧಾನ್ಯವು ಮಾನವರಿಗೆ ಪುಷ್ಟಿದಾಯಕ ಆಹಾರ ಎಂದು ಇದರಿಂದ ಧಾನ್ಯವೂ (ಕೃಷಿ) ಹಂತದ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು.

ಮಾನವನ ಕಿರಾತಾವಸ್ಥೆಯ ಅನಾಗರಿಕವಸ್ಥೆಗಳ ಮೂಲಕ ನಾಗರಿಕತೆಯ ಆರಂಭಘಟ್ಟಕ್ಕೆ ಬರುವ ವಿಕಾಸದ ಹಾದಿಯಲ್ಲಿ ಹಲವು ಬಗೆಯ ಬದಲಾವಣೆಗಳು ಕಂಡುಬಂದಿವೆಯಾದರೂ, ಇವೆಲ್ಲವುಗಳು ಉತ್ಪಾದನಾವಿಧಾನದಲ್ಲಿನ ಪರಿಕರಗಳ ಬೆಳವಣಿಗೆಯೊಂದಿಗೆ ಆರಂಭಗೊಂಡಿದೆ. ಆದಿಮಕಾಲದಲ್ಲಿ

ಶ್ರಮವಿಭಜನೆಯು ಮುಖ್ಯವಾಗಿ ಪಶು ಮತ್ತು ಭೂಮಿಯ ಸಾಗುವಳಿಯಿಂದ ಪಡೆದುಕೊಂಡ ಜ್ಞಾನದಿಂದ ಬೆಳೆದುಬಂದಿದೆ. ಮಾನವನ ಚಟುವಟಿಕೆಗಳು ನಿಸರ್ಗದ ಮೂಲಕ ಉತ್ಪಾದಕತೆಗಳನ್ನು ಹೆಚ್ಚಿಸುವ ವಿಧಾನಗಳು ಕೃಷಿ ಹಂತದ ಬೆಳವಣಿಗೆಯು ಪ್ರಮುಖ ಆಯುಧಗಳಾಗಿವೆ.

ಜೀವನೋಪಾಯ ಸಾಧನೆಗಳ ಉತ್ಪಾದನೆಯಲ್ಲಾದ ಪ್ರಗತಿಗನುಗುಣವಾಗಿ ಪರಿವರ್ತನೆಯನ್ನು ಎಂಗೆಲ್ಸ್‌ರವರು ಈ ರೀತಿ ಗುರುತಿಸುತ್ತಾರೆ. "ಮಾನವನ ಕೌಶಲ್ಯದ ಮೇಲೆಯ ಇಳೆಯ ಮೇಲೆ ಅವನ ಪಾರಮ್ಯದ ಪ್ರಶ್ನೆ ನಿಸರ್ಗದ ಮೇಲೆ ಅವನ ಅಧಿಪತ್ಯದ ಪ್ರಶ್ನೆ ಅವಲಂಬಿಸಿದ್ದು, ಜೀವನೋಪಾಯಕ್ಕಾಗಿ ಸಾಧನೆಗಳ ಮೂಲಗಳನ್ನು ವಿಸ್ತರಿಸಿದೆ. ಈ ಕಾಲಘಟ್ಟಗಳು ಹೆಚ್ಚು ಕಡಿಮೆ ಮಾನವನ ಪ್ರಗತಿಯ ಮಹೋನ್ನತ ಕಾಲಗಟ್ಟಗಳೇ ಆಗಿವೆ."[೧] ಕೃಷಿಯ ಹಂತದಲ್ಲಿನ ಉತ್ಪಾದನಾ ವಿಧಾನದ ಪರಿಕರಗಳು ಶ್ರಮದಲ್ಲಿನ ಬದಲಾವಣೆಯ ಮಾನವನನ್ನು ಅನೇಕ ಬಗೆಯ ಹೊಸ ಹೊಸ ಕ್ಷೇತ್ರಗಳ ಕಡೆಗೆ ನಡೆಯುವಂತೆ ಮಾಡಿದೆ.

ಕಾಡಿನಲ್ಲಿ ಇರುತ್ತಿದ್ದ ಅಸಂಖ್ಯಾತ ಪಶುಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಪ್ರಾರಂಭಿಸಿದ. ಆನಂತರದ ದಿನಗಳಲ್ಲಿ ಹೈನುಗಾರಿಕೆಯ ಮಹತ್ವ ಕಂಡುಹಿಡಿಯಲಾಯಿತು. ಮಹಿಳೆಯೇ ಕೃಷಿಯ ಉಪಯೋಗದಲ್ಲಿ ಪ್ರಧಾನ ಪಾತ್ರವಹಿಸಿದಂತೆ ಪಶುಪಾಲನೆಯಲ್ಲಿಯೂ ಕೂಡಾ ಮುಖ್ಯಪಾತ್ರವಹಿಸಿದಳು. ಆರಂಭದಲ್ಲಿ ಮನೆಯಲ್ಲಿ ಕಾಲ ಕಳೆಯುತ್ತಿದ್ದ ಮಹಿಳೆಯು ಅನೇಕ ಗಿಡಮರಗಳ ನೆರಳಿನಲ್ಲಿ ದಿನ ಕಳೆಯುತ್ತಿದ್ದ ಸಮಯದಲ್ಲಿ ಪಶುಗಳಿಗೆ ಆಹಾರದ ಸಲುವಾಗಿ ವಿವಿಧ ಬಗೆಯ ಗಿಡ ಮರಗಳ ಮೊರೆ ಹೋದಳು. ದಿನಕಳೆದಂತೆ ಈ ಮಹಿಳೆಯು ಗಿಡ ಮರಗಳ ಲಕ್ಷಣಗಳನ್ನು ಗಮನಿಸಿತೊಡಗಿದಳು. ಇದರಿಂದ ಮುಖ್ಯವಾಗಿ ಬೀಜಗಳಿಂದ ಮತ್ತೆ ಸಸಿ ನಂತರ ಗಿಡಮರ ಬೆಳವಣಿಗೆಯ ಹಂತವನ್ನು ಕಂಡು ತಾನು ಪ್ರಯತ್ನ ಮಾಡತೊಡಗಿದಳು. ಇದರಿಂದ ಮುಸಿಕನ ಜೋಳದಲ್ಲಿ ಬೆಳವಣಿಗೆಯನ್ನು ಕಂಡಳು. ಈ ಮುಸುಕಿನ ಜೋಳವು ಪಶುಗಳಿಗೆ ಆಹಾರವಾಗಿ ಪ್ರಾರಂಭವಾದದ್ದು. ನಂತರದ ದಿನಗಳಲ್ಲಿ ಮಹಿಳೆಯರಿಂದ ಮನುಷ್ಯನ ಆಹಾರದ ಮೂಲವಾಗಿ ಪರಿಣಮಿಸಿತು.

ಕೃಷಿಯನ್ನು ಪ್ರಾರಂಭಿಸಿದ ಮಹಿಳೆಯು ಆರಂಭದಲ್ಲಿ ಪ್ರಕೃತಿಯಲ್ಲಿದ್ದ ಗಿಡಮರಗಳ ರಂಬೆಕೊಂಬೆ ಕಲ್ಲುಗಳಿಂದ ಭೂಮಿಯನ್ನು ಅಗೆದು (ಕೊರೆದು) ಬೀಜ ಬಿತ್ತುವುದು ಪ್ರಾರಂಭಿಸಿದಳು. ಇದರಿಂದ ಉತ್ಪಾದನೆಯ ಹೆಚ್ಚು ಹೆಚ್ಚು ಆಗುತ್ತಾ ಬಂದಂತೆ, ಉತ್ಪಾದನೆಯಲ್ಲಿ ಬಳಸುವ ವಿವಿಧ ಪರಿಕರಗಳು ಬದಲಾಯಿಸಿಕೊಂಡು ಬರತೊಡಗಿದಳು. ಇದರಿಂದ ಅನೇಕ ವಿದವಾದ ವೃತ್ತಿಗಳು ಆರಂಭಗೊಂಡವು. ಈ ಎಲ್ಲಾ ವೃತ್ತಿಗಳ ಮೂಲ ಮಹಿಳೆಯಾಗಿದ್ದಳು. ಉತ್ಪಾದನೆಯು ದ್ವಿಗುಣಗೊಂಡಂತೆ ಮಹಿಳೆಯ ಸ್ಥಾನಮಾನಗಳು ಬದಲಾವಣೆಗೊಳ್ಳತೊಡಗಿತು. ಆರಂಭದಲ್ಲಿ ಮಹಿಳೆಯಿಂದಲೇ ಕೃಷಿ ಪ್ರಾರಂಭಗೊಂಡರು.

ಪುರುಷರು ಮಹಿಳೆಯನ್ನು ಮೂಲೆ ಗುಂಪು ಮಾಡಿದರು. ಇದರಿಂದ ಕೃಷಿಯಲ್ಲಿ ಪುರುಷರ ಪ್ರಾಬಲ್ಯವು ಹೆಚ್ಚಿತು. ಕೃಷಿಯ ಬೆಳವಣಿಗೆಯು ಪೂರಕವಾಗಿ ಹಲವಾರು ವೃತ್ತಿಗಳು ಪ್ರಚಲಿತಗೊಂಡವು.

ಪಶುಪಾಲನೆಯ ಹಂತದಿಂದ ಕೃಷಿ ಹಂತದ ಬೆಳವಣಿಗೆಯಲ್ಲಿನ ಪ್ರಮುಖ ಪಾತ್ರವೇ ಮಹಿಳೆಯಾದರೂ ಉತ್ಪಾದನಾವಿಧಾನ ಪರಿಕರಗಳ ಹಂಚಿಕೆಯಲ್ಲಿನ ಬದಲಾವಣೆಯಿಂದ ಉಳಿತಾಯ ಸೃಷ್ಟಿಗೊಂಡಿತು. ಉಳಿತಾಯದ ಕಲ್ಪನೆಯು ಮೂಡಿದ ನಂತರದ ದಿನಗಳಲ್ಲಿ ಮಹಿಳೆಯರ ಪ್ರಾಬಲ್ಯ ಕಡಿಮೆಯಾಗತೊಡಗಿತು. ಇದರಿಂದ ಪುರುಷರ ನೇರ ಆಡಳಿತ ಕೃಷಿಯ ಮೇಲೆ ಬೀರಿತು. ಹಾಗಾಗಿ ಗುಡಿಕೈಗಾರಿಕೆಗಳು ಮಾನವನ ಪೂರ್ವಕಾಲದಿಂದ ಸಂಸ್ಕೃತೀಕರಣಗೊಳ್ಳುತ್ತಾ ಬಂದಿವೆ. ಎಲ್ಲಾ ಹೊಸ ಬದಲಾವಣೆಗಳಿಗೆ ಮಹಿಳೆಯೇ ಮೂಲ ಕಾರಣ. ಅದಕ್ಕೆ ಆದಿಮಕಾಲದಲ್ಲಿ ಮಹಿಳೆಯರಿಗೆ ವಿಶೇಷ ಗೌರವ ಹಾಗೂ ಪ್ರಾಧಾನ್ಯತೆ ಹೊಂದಿದ್ದು. ಸಾಮಾನ್ಯವಾಗಿ ಸಂಬಂಧಗಳನ್ನು ಮಹಿಳೆಯಿಂದಲೇ ಗುರುತಿಸಲಾಗುತ್ತಿತ್ತು. ಇದರಿಂದ ಮಾತೃ ಪ್ರಧಾನ್ಯತೆಯು ಬೆಳವಣಿಗೆಗೆ ಕಂಡುಬರುತ್ತದೆ.

೩. ಗುಡಿಕೈಗಾರಿಕೆಗಳು ಬೆಳೆದು ಬಂದ ಹಿನ್ನೆಲೆ

ಪ್ರಾಚೀನ ಕಾಲದ ಬೆಳವಣಿಗೆಯ ಹಂತಗಳಲ್ಲಿ ಮಾನವನು ವಿವಿದ ಬಗೆಯ ಅವಿಷ್ಕಾರಗಳಲ್ಲಿ ತೊಡಗಿಸಿಕೊಂಡುದುರ ಪ್ರತಿಫಲವೇ ಅನೇಕ ಬಗೆಯ ವೃತ್ತಿಗಳ ಉಗಮಕ್ಕೆ ಕಾರಣವಾಯಿತು. ಕೃಷಿ ಹಂತದಲ್ಲಿನ ಬೆಳವಣಿಗೆಗಳು ಕೃಷಿಗೆ ಪೂರಕವಾದ ಸಾಮಾಗ್ರಿಗಳ ವಸ್ತುಗಳ ತಯಾರಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿತು. ಇದರಿಂದಲೇ ಹಲವಾರು ವೃತ್ತಿಗಳು ಬೆಳಕಿಗೆ ಬಂದವು. ಅಂತಹವುಗಳೆಲ್ಲವು ಸಹ ಮಾನವನ ಶ್ರಮ ಸಂಪತ್ತನ್ನು ಅವಲಂಬಿಸಿಯೇ ಉಗಮಗೊಂಡವುಗಳಾಗಿವೆ. ಹಾಗಾಗಿ ಪಶುಪಾಲನೆ ಮತ್ತು ಕೃಷಿಯು ಪ್ರಾರಂಭಗೊಂಡಾಗ ವಿವಿಧ ಬಗೆಯ ಸಲಕರಣೆಗಳಾದ ನೇಗಿಲು, ಗುದ್ದಲಿ, ಹಾರೆ ಮತ್ತು ಕಬ್ಬಿಣ ಮರದ ಹತ್ತು ಹಲವಾರು ವಸ್ತುಗಳ ಅವಶ್ಯಕತೆ ಪ್ರಾರಂಭವಾಯಿತು. ಹಾಗಾಗಿ ಕೃಷಿಯಲ್ಲಿ ಇವುಗಳ ಪಾತ್ರ ಮುಖ್ಯವಾಗಿ ಪರಿಗಣಿಸಿರುವುದರಿಂದ ಮುಂದೆ ಇವುಗಳಿಗೆ ಹೆಚ್ಚಿನ ಮಹತ್ವ ಬಂದು ಪ್ರತಿಯೊಂದು ಅಗತ್ಯವಸ್ತುಗಳಾಗಿ ಪರಿಣಮಿಸಿದವು. ಕೃಷಿಯಲ್ಲಿ ತೊಡಗಿಸಿಕೊಳ್ಳುವವರು ತಮಗೆ ಅಗತ್ಯ ವಸ್ತುಗಳ ತಯಾರಿಕೆಯಲ್ಲಿ ಶ್ರಮ ವ್ಯಯಿಸುವುದರಿಂದ, ತಪ್ಪಿಸಿ ಬೇರೊಬ್ಬರ ಸಹಾಯ ಪಡೆಯತೊಡಗಿದರು. ಇದರಿಂದ ಬೇರೆ ಬೇರೆ ಜನರು ಈ ವೃತ್ತಿಗಳನ್ನು ಆರಂಭಿಸಿದರು. ಇದರಿಂದ ವಿವಿಧ ವೃತ್ತಿಯಲ್ಲಿ ಪ್ರತಿಯೊಬ್ಬರು ಪ್ರತ್ಯೇಕವಾಗಿ ತೊಡಗಿಸಿಕೊಳ್ಳುವಂತಾಯಿತು. ಹಾಗೆ ವಿಶೇಷವಾಗಿ ತಯಾರಿಸುತ್ತಿದ್ದ ಸಲಕರಣೆಗಳು ಮುಂದೆ ವೃತ್ತಿಗುಂಪುಗಳಾಗಿ ಪರಿವರ್ತನೆಗೊಂಡವು. ಇದರಿಂದ ಈ ವೃತ್ತಿಗಳ ಪ್ರಾಬಲ್ಯತೆ ಹೆಚ್ಚಾಗತೊಡಗಿತು.

ಮೂಲಭೂತ ಅವಶ್ಯಕತೆಗಳ ವಸ್ತುಗಳಿಗಾಗಿ ಅಗತ್ಯವಾದ ಸಲಕರಣೆಗಳು ಬೇರೆ ಬೇರೆಯಾದರೂ ಆರಂಭ ಕಾಲದಲ್ಲಿ ಬೆಳಕಿಗೆ ಬಂದ ಈ ವೃತ್ತಿಗಳು ಪ್ರಮುಖವಾಗಿ ಕಂಡುಬಂದವು. ಅವುಗಳಲ್ಲಿ 'ಪಾಂಚಲರು'

ಪ್ರಮುಖರು ನಂತರ ಈ ವೃತ್ತಿಯ ಹಿನ್ನೆಲೆಯಲ್ಲಿಯೇ ಅನೇಕ ಬಗೆ ಬಗೆಯ ಹೊಸ ಉಪಕಸಬುಗಳು ವೃತ್ತಿಗಳಾಗಿ ಹುಟ್ಟಿಕೊಂಡವು. ಇವುಗಳು ಮುಂದೆ ಗ್ರಾಮೀಣ ಜನರಲ್ಲಿ ಮನೆಯ ಗುಡಿಕೈಗಾರಿಕೆಗಳಾಗಿ ವಂಶಪಾರಂಪರ್ಯವಾಗಿ ಬರತೊಡಗಿತು. ಇಂತಹ ವೃತ್ತಿಗಳ ಹುಟ್ಟು 'ಗುಡಿಕೈಗಾರಿಕೆಗಳು' ಎಂದು ಅರ್ಥಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು ಮತ್ತು ಇತಿಹಾಸಕಾರರು ಗುರುತಿಸಿದ್ದಾರೆ.

ಗುಡಿಕೈಗಾರಿಕೆ ಎಂದರೆ ಗುಡಿ ಗುಡಿಸಲು, ಮನೆ ಎಂದರ್ಥ ಎನ್ನುಬಹುದು. ಇಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಸ್ವಶಕ್ತಿ ಸಾಮಾರ್ಥ್ಯದಿಂದ ಉತ್ಪಾದನೆ ಮಾಡುವ ವಸ್ತುಗಳಾಗಿ ಪ್ರಾರಂಭಗೊಂಡಂತಹವುಗಳೇ ಆಗಿವೆ.

ಈ ಎಲ್ಲಾ ವೃತ್ತಿಗಳು ಮುಂದೆ ಜಾತಿ ವರ್ಗಗಳ ಮಾದರಿಯಲ್ಲಿ ಬೆಳಕಿಗೆ ಬಂದವು. ಇಂತಹ ಎಲ್ಲಾ ಗುಡಿಕೈಗಾರಿಕೆಗಳು ಪ್ರಸ್ತುತದಲ್ಲಿ ನಾವು ಕಾಣಬಹುದಾಗಿದೆ. ಇವುಗಳಲ್ಲಿ ಮುಖ್ಯವಾಗಿ ಜೀವನೋಪಾಯಕ್ಕೆ ಅಗತ್ಯವಾದ ಗುಡಿಕೈಗಾರಿಕೆಗಳು ಮತ್ತು ಇದರಲ್ಲಿ ಬಹುಮುಖ್ಯವಾಗಿ ಪಾತ್ರವಹಿಸಿದ ಮಹಿಳೆಯ ದೈನಂದಿನ ಜೀವನದಲ್ಲಿ ಉಪಯೋಗವಾಗುವ ಹಾಗೂ ಪ್ರಮುಖ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳಾಗಿದ್ದವು. ಇಂತಹ ಗುಡಿಕೈಗಾರಿಕೆಗಳಲ್ಲಿ ಪ್ರಮುಖವಾಗಿ ಈ ಹೆಸರಿಸಬಹುದು. ಅವುಗಳೆಂದರೆ

೧. ಕಮ್ಮಾರಿಕೆ

೨. ಬಡಗಿತನ

೩. ಕುಂಬಾರಿಕೆ

೪. ನೇಕಾರಿಕೆ

೫. ಬೀಡಿ ಕಟ್ಟುವುದು (ಉಪ ಕಸುಬು)

೧. ಕಮ್ಮಾರಿಕೆ : ಭೂಮಿಯ ಮೆಲೆ ಮಾನವ ಜೀವರಾಶಿ ಉಗಮದ ನಂತರ ನದಿಗಳು, ಬೆಟ್ಟಗಳು, ಕಾಡುಗಳು, ಕಣಿವೆಗಳು ಅವನ ವಾಸದ ನೆಲೆಗಳಾದವು. ಕಾಡು ಜನರೆಂದು ಕರೆಸಿಕೊಂಡ ಅವರು ತಮ್ಮ ಜೀವನದ ಉಪಯೋಗಕ್ಕಾಗಿ ಶಿಲೆಯನ್ನು ಬಳಸಲು ಪ್ರಾರಂಭಿಸಿದರು. ಶಿಲೆಯಿಂದ ಆಯುಧಗಳು ನಿರ್ಮಾಣಮಾಡಿ ಅವುಗಳಿಂದ ಆಹಾರ ಸಂಗ್ರಹಣೆ ಮತ್ತು ಜೀವರಕ್ಷಣೆ ಮಾಡಿಕೊಂಡರು. ನಂತರ ನಿತ್ಯ ಜೀವನದಲ್ಲಿ ಹಲವು ಘಟ್ಟಗಳನ್ನು ತಲುಪಿದಾಗ ಪಶುಪಾಲನೆ ಮತ್ತು ಕೃಷಿಯಲ್ಲಿ ತೊಡಗಿದರು. ಕೃಷಿ ಆರಂಭವಾದಾಗಿನಿಂದ ಅವರ ಕಾರ್ಯಚಟುವಟಿಕೆಗಳಲ್ಲಿ ಅನೇಕ ಬದಲಾವಣೆಗಳಾದವು. ಗುಂಪುಗೂಡಿ ಒಂದು ಕಡೆ ವಾಸಿಸಲು ಪ್ರಾರಂಭಿಸದರು. ವೈಜ್ಞಾನಿಕವಾಗಿ ಬೆಳವಣಿಗೆ ಹೊಂದುತ್ತಾ ಅದಿರಿನಿಂದ ಲೋಹವನ್ನು ಬೇರ್ಪಡಿಸುವ ತಂತ್ರವನ್ನು ಕಲಿತುಕೊಂಡರು. ಕಬ್ಬಿಣದಿಂದ ಕೃಷಿಗಾಗಿ ಅನೇಕ ಉಪಕರಣಗಳನ್ನು ತಯಾರಿಸತೊಡಗಿದರು. ಈ ಸ್ಥಿತಿಯಿಂದಲೇ ಈ ಕಮ್ಮಾರಿಕೆ ಹುಟ್ಟಿಕೊಂಡಿತು. ಇದಕ್ಕೆ 'ಕಬ್ಬಿಣಯುಗ' ಎಂದು ಹೆಸರು ಬಂದಿತು.

"ಶಿಲಾಯುಗದಿಂದ ಲೋಹ ಯುಗಕ್ಕೆ ಬರುವಷ್ಟರಲ್ಲಿ ಕಮ್ಮಾರಿಕೆ ವೃತ್ತಿ ಹೆಚ್ಚು ವ್ಯವಸ್ಥಿತವಾಗಿ ಬೆಳೆದು ಬಂದಿರುವ ಸಾಧ್ಯತೆಗಳಿವೆ. ಇದರಿಂದ ಕಮ್ಮಾರಿಕೆಯು ಪೂರ್ವಕಾಲದಿಂದಲೂ ಪ್ರಚಲಿತದಲ್ಲಿತ್ತು ಎಂಬ

ವಿಷಯ ಗೊತ್ತಾಗುತ್ತದೆ. ಶತಮಾನದಲ್ಲಿ ವಚನಕಾರರು ಕಮ್ಮಾರಿಕೆಯ ಬಗ್ಗೆ ಅನೇಕ ಕಡೆ ಪ್ರಸ್ತಾಪ ಮಾಡಿದ್ದಾರೆ. ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಎಂಬ ಉಲ್ಲೇಖಗಳು ಕಾಣಬರುತ್ತವೆ."[೨] ಹೀಗೆ ಪ್ರಾಚೀನ ಕಾಲದಿಂದಲೂ ಕಮ್ಮಾರಿಕೆಯು ಕುರುಹುಗಳು ಕಾಣುತ್ತವೆ.

ವಿವಿಧ ಲೋಹಗಳಿಗೆ ಸಂಬಂಧಪಟ್ಟ ಕೆಲಸ ಮಾಡುವವರನ್ನು ಹಾಗೂ ಹೆಚ್ಚಾಗಿ ಕಬ್ಬಿಣದ ಕೆಲಸ ಮಾಡುವವರನ್ನು ಕಮ್ಮಾರ ಎಂದು ಕರೆಯುತ್ತಾರೆ. ಇವರು ಪ್ರಾಚೀನ ಕಾಲದಲ್ಲಿ ವ್ಯವಸಾಯ ಹಾಗೂ ಗೃಹಪಯೋಗಿ ಸಲಕರಣೆಗಳ ಜೊತೆಗೆ ಯುದ್ಧೋಪಕರಣಗಳನ್ನು ತಯಾರಿಸುತ್ತಿದ್ದರು. ಮತ್ತು ಪ್ರಾಚೀನ ಜನ ಜೀವನದಲ್ಲಿ ಎಲ್ಲಾ ಕಡೆಗಳಿಂದಲೂ ಈ ಕಮ್ಮಾರಿಕೆಯೂ ಒಂದು ಜೀವನಾವಶ್ಯಕವಾದ ಪ್ರಬಲ ವೃತ್ತಿಯಾಗಿತ್ತು ಎಂದರೂ ತಪ್ಪಿಲ್ಲ. ಈ ಕಮ್ಮಾರಿಕೆಯಲ್ಲಿ ಆದಿಕಾಲದಿಂದಲೂ ಮಹಿಳೆ ಪ್ರತಿನಿಧಿಸಿದ್ದಾಳೆ. ಈಗಲೂ ಪ್ರಸ್ತುತವಾಗಿ ಕೆಲಸ ಮಾಡುತ್ತಿದ್ದಾಳೆ. ಮಹಿಳೆಯು ಕಮ್ಮಾರಿಕೆಯಲ್ಲಿ ಕುಲುಮೆಯಲ್ಲಿ ಬೆಂಕಿ ಹಾಯಿಸುವ ಹಾಗೂ ಕಬ್ಬಿಣ ಕಾಯ್ದು ಮೇಲೆ ಸುತ್ತಿಗೆಯಿಂದ ಈ ಕಬ್ಬಿಣದ ವಸ್ತುಗಳ ವಿವಿಧ ಆಕಾರಗಳು ಬರುವ ರೀತಿಯಲ್ಲಿ ಮಹಿಳೆಯು ಬಡಿಯುತ್ತಾಳೆ. ಕಮ್ಮಾರಿಕೆಯಲ್ಲಿ ಪುರುಷನು ಪ್ರಬಲವಾಗಿದ್ದರು. ದುರ್ಬಲ ಕೆಲಸಗಳನ್ನು ಮಾಡುತ್ತಾನೆ. ಮುಖ್ಯವಾದ ಈ ಕಾರ್ಯಕ್ಕೆ ಕೇಂದ್ರ ಸ್ವರೂಪಿಯಾದ ಮಹಿಳೆ ಶ್ರೇಷ್ಠ ಮತ್ತು ಅಧಿಕ ಕಾರ್ಯ ನೈಪುಣ್ಯತೆಯನ್ನು ಪುರುಷನಿಗಿಂತ ಮೇಲ್ಮಟ್ಟದಲ್ಲಿ ವಿಸ್ತರಿಸಿರುತ್ತದೆ. ಆದರೂ ಆ ಕಾರ್ಯದ ಪ್ರತಿಫಲದ ಪ್ರತಿಬಿಂಬವು ಪುರುಷನದೇ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದರಿಂದ ಸಮಾಜದಲ್ಲಿ ಪುರುಷನು ತನ್ನ ಸಾಮಾಜಿಕ ಪ್ರತಿಷ್ಠೆಯನ್ನು ಇದರಿಂದ ಹೆಚ್ಚಾಗುವಂತೆ ಮಾಡಿಕೊಂಡಿದ್ದಾನೆ.

ಹಾಗಾಗಿ ಕಮ್ಮಾರಿಕೆಯ ವಸ್ತುಗಳ ತಯಾರಿಕೆಯ ಹಂತದಲ್ಲಿ ಮಹಿಳೆ ಭಾಗವಹಿಸುವಿಕೆ ವಿಶಾಲವಾಗಿದ್ದರೂ, ಮೂಲ ಹಿಡಿತ ಪುರುಷನ ಕೈಯಲ್ಲಿರುತ್ತದೆ. ಆರ್ಥಿಕ ವ್ಯವಹಾರಗಳಲ್ಲಿ ಯಜಮಾನಿಕೆ ಸ್ವರೂಪ ಸಮಾಜ ಮನ್ನಣೆ ಪುರುಷನಿಗೆ ಸಿಗುತ್ತದೆ. ಉತ್ಪಾದಿಸಿದ ವಸ್ತುಗಳ ವಿನಿಮಯಕ್ಕಾಗಿ ಮೂಲ ಸ್ವರೂಪದ ಶಕ್ತಿಯ ಕೇಂದ್ರವನ್ನು ತನ್ನದಾಗಿಸಿಕೊಂಡಿರುತ್ತಾನೆ. ಅದರಿಂದ ಒಂದಿರತಕ್ಕಂತಹ ಬಂಡವಾಳ ಅವನ ಹತೋಟಿಯಲ್ಲಿರುತ್ತದೆ. ಇದರಿಂದ ಮಹಿಳೆಯ ವಸ್ತುಗಳ ಉತ್ಪಾದನೆಯ ಕಾರ್ಯಕ್ಷೇತ್ರಕ್ಕೆ ಅಷ್ಟೇ ಸೀಮಿತಳಾಗಿರುತ್ತಾಳೆ.

೨. ಬಡಗಿತನ : ಬಡಗಿತನದ ಉಗಮವನ್ನು ಆದಿಮಾನವನ ಕಾಲದಿಂದಲೂ ಗುರುತಿಸಬಹುದು. ಮಾನವನ ಆರ್ಥಿಕ ಬೆಳವಣಿಗೆಯೊಂದಿಗೆ ಅಂದರೆ ಕೃಷಿ ಉತ್ಪನ್ನದೊಂದಿಗೆ ಮಾನವನ ಬಡಿಗಾರಿಕೆಯ ಚರಿತ್ರೆ ಆರಂಭವಾಗುತ್ತದೆ. ಪ್ರಾರಂಭದ ಹಂತದಲ್ಲಿ ಗುಹೆಗಳಲ್ಲಿ ವಾಸಿಸುತ್ತಿದ್ದ ಮಾನವ ತಾನು ಕೆಲಸ ನಿರ್ವಹಿಸುವ ಸ್ಥಳದಲ್ಲಿಯೇ ವಸತಿ ಇದ್ದರೆ ಹೆಚ್ಚು ಉಪಯುಕ್ತ ಎಂದು ಮನಗಂಡು ನೈಸರ್ಗಿಕ ಸಂಪನ್ಮೂಲಗಳ ಸಹಾಯದಿಂದ ಗುಹೆಗಳನ್ನು ಅನುಕರಿಸಿ ವಾಸಕ್ಕೆ ವಸತಿಯನ್ನು ನಿರ್ಮಿಸಿಕೊಂಡ ಆ ಆರಂಭದ ಮನೆಗಳು

ಮರದಿಂದ ನಿರ್ಮಿತವಾದವು. ಅಂಥ ಮರಗಳಿಗೆ ರೂಪಕೊಟ್ಟವನು. ಬಡಗಿತನದ ವೃತ್ತಿ ಪ್ರಾರಂಭವಾಗತೊಡಗಿದೆ ಎನ್ನಬಹುದು.

"ಬಡಗಿಯ ಬಗ್ಗೆಯಾಗಲಿ, ಅವನ ಕೃತಿಗಳ ಬಗ್ಗೆಯಾಗಲಿ, ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಕೆಲವೇ ಕೆಲವು ಶಾಸನಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದ ಬಡಗಿಗೆ ನೀಡಿದ ದಾನ ಮಾನ್ಯಗಳ ಉಲ್ಲೇಖವಿದೆ. ಆದರೆ ಅಂದಿನ ಮರದ ರಚನೆಯ ಬಗ್ಗೆ ಅಥವಾ ತಾಂತ್ರಿಕತೆಯ ಬಗ್ಗೆ ಯಾವುದೇ ವಿವರಣೆ ಸಿಗುವುದಿಲ್ಲ."[೩]

"ಕ್ರಿ.ಶ. ೧೫೪೪ ರಲ್ಲಿ ಒಬ್ಬ ಬಡಗಿ ದಾರಮಯ ಬಸದಿಯನ್ನು ಕಟ್ಟಿದ ಉಲ್ಲೇಖ ಶಾಸನಗಳಲ್ಲಿದೆ."[೪] ಅಂದರೆ ಬಡಿಗಾರಿಕೆಯು ಪ್ರಾಚೀನ ಕಾಲದಿಂದಲೂ ಬೆಳವಣಿಗೆ ಹೊಂದುತ್ತಾ ಬಂದಿದೆ ಎಂದು ಗೊತ್ತಾಗುತ್ತದೆ.

ಕಟ್ಟಿಗೆ ಅಥವಾ ಮರದ ಕೆತ್ತನೆಯ ಕಲೆಗಾರಿಕೆ ತುಂಬಾ ಪ್ರಾಚೀನವಾದುದಾಗಿದೆ. ಈ ಸಾಮಗ್ರಿಯನ್ನು ಬಳಸಿಕೊಂಡು ವಿವಿಧ ವಸ್ತುಗಳನ್ನು ತಯಾರಿಸುವವರಿಗೆ ಬಡಿಗ, ಬಡಿಗಾರ, ಕಾಷ್ಠಶಿಲ್ಪ ಅಥವಾ ಸೂತ್ರದಾರ ಎಂದು ಕರೆಯುತ್ತಿದ್ದರು. ಇದರಿಂದ ಇವರುಗಳು ಕೂಡ ಜಾತಿಯ ರೂಪದಲ್ಲಿ ಗುರುತಿಸಿಕೊಂಡರು.

ಬಹು ಹಿಂದಿನಿಂದಲೂ ಬಡಗಿಗಳನ್ನು ಗ್ರಾಮದ ಆಯಗಾರರಲ್ಲಿ ಒಬ್ಬರು ಎಂದು ಗುರುತಿಸಿ ಅವರ ಜೀವನೋಪಾಯಕ್ಕೆ ದವಸ ಧಾನ್ಯ ರೂಪದಲ್ಲಿಯಾಗಲಿ ಅಥವಾ ಹಣದ ರೂಪದಲ್ಲಾಗಲಿ ಶ್ರಮಕ್ಕೆ ಪ್ರತಿಫಲವಾಗಿ ಕೊಡುತ್ತಿದ್ದಾರೆ. ಈ ಬಡಗಿಗಳು ಕುಶಲಿಗಳು ಹಾಗೂ ಸೂಕ್ಷ್ಮಜ್ಞಾನವನ್ನು ಹೊಂದಿದವರು ಆಗಿದ್ದರು. ಇವರ ಜ್ಞಾನವು ವಂಶಪಾರಂಪರ್ಯವಾಗಿ ಬೆಳೆದು ಬಂದಿದೆ. ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಯಾವುದೇ ಸಾಕ್ಷಿಗಳು ನಮ್ಮ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಇದು ಅವರ ದೈವದತ್ತ ಜ್ಞಾನ ಎಂಬುದು ಅವರ ಅಭಿಪ್ರಾಯ.

ಸಾಮಾನ್ಯವಾಗಿ ಈ ವೃತ್ತಿಯಲ್ಲಿ ಮಹಿಳೆಗೆ ಪ್ರವೇಶವಿಲ್ಲ. ಆದರೂ ಕೆಲವಷ್ಟು ಕೆಲಸಗಳಲ್ಲಿ ಮಹಿಳೆಯು ಕಂಡುಬರುತ್ತಾಳೆ. ಕೊನೆಯ ಹಂತದಲ್ಲಿ ಕಟ್ಟಿಗೆಯನ್ನು ನುಣುಪು ಮಾಡುವಾಗ ಮಹಿಳೆಯರು ಗಿಮಮಿಡನಿಂದ ಅದಕ್ಕೆ ರಂಧ್ರ ಹಾಕುವಲ್ಲಿ ಮತ್ತು ಹಿಡಿ ಸುಳಿಯಿಂದ ರಂಧ್ರ ಹಾಕುವಾಗ ಹಗ್ಗದಿಂದ ಮಜ್ಜಿಗೆ ಮಯುವಂತೆ ಕಡೆದು ರಂಧ್ರ ಮಾಡುತ್ತಾರೆ. ಹೀಗೆ ಬಡಿಗಾರಿಕೆಯ ಕೆಲವೇ ಕೆಲವು ಕೆಲಸಗಳಲ್ಲಿ, ಮಹಿಳೆಯ ಭಾಗವಹಿಸುವಿಕೆ ಕಂಡುಬರುತ್ತದೆ.

೩. ಕುಂಬಾರಿಕೆ : ಪಂಚಭೂತಗಳಲ್ಲಿ ಭೂಮಿಯ ಒಂದು. ಅದರ ಪ್ರಾಕೃತಿಕ ಕೊಡುಗೆಯಾದ ಮಣ್ಣು ವಿಶಿಷ್ಟತೆಯಿಂದ ಕೂಡಿದೆ. ವೈವಿಧ್ಯಮಯವಾದ ಮಣ್ಣಿನಿಂದ ಹಲವಾರು ಕೊಡುಗೆ ನೀಡಿರುವುದು ಪ್ರಸ್ತುತವರೆಗೂ ಕಾಣಬಹದು. ಇಂತಹ ಕಲಾವಂತಿಕೆಯನ್ನು ಇಂದು ಕೂಡ ಗುರುತಿಸಬಹುದು. ಇಂತಹ ಕಲೆಯು ಅಂತರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದೆ.

ಮಣ್ಣಿನ ಕಾರ್ಯ ಶ್ಲಾಘನೀಯವಾದದ್ದು, ಪ್ರತಿ ಜೀವಿಗೆ ಭೂ ಮಣ್ಣಿನ ಆಧಾರದಿಂದಲೇ ಬದುಕುವುದನ್ನು ಅವಲಂಬಿಸಿವೆ. ಮನುಷ್ಯನ ಜೀವನಕ್ಕೆ ಅವಶ್ಯವಿರುವ ಎಲ್ಲಾ ವಸ್ತುಗಳ ಮೂಲ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿರತಕ್ಕಂತಹ, ಮಾನವನ ಜೀವನ ಎತ್ತಿ ಹಿಡಿದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಇದು ಒಂದಾಗಿದೆ. ಇದರಿಂದ ವಿವಿಧ ಗುಡಿಕೈಗಾರಿಕೆಗಳ ಉತ್ಪನ್ನಕ್ಕೆ ಮೂಲ ತಳಪಾಯವಾಗಿದೆ. ಅದರಲ್ಲಿ ಮಾನವನ ಬುದ್ಧಿ ವಿಕಾಸವಾದಾಗ ಮಣ್ಣಿನ ಉಪಯೋಗವನ್ನು ವಿಧ ವಿಧವಾಗಿ ಬಳಸಿಕೊಳ್ಳುತ್ತಾ ತನ್ನ ತಿಳುವಳಿಕೆಯಿಂದ ಕಂಡು ಕೊಂಡ ಕಲೆ ಕುಂಬಾರಿಕೆಯಾಗಿದೆ. ಮಣ್ಣಿನ ವಿಶೇಷತೆಯನ್ನು ಸುಟ್ಟು ವಿವಿಧ ಮಾದರಿಯ ವಸ್ತುಗಳನ್ನು ಉತ್ಪಾದಿಸುವುದೇ ಕುಂಬಾರಿಕೆಯಾಗಿದೆ. ಈ ಕುಂಬಾರಿಕೆಯ ಪ್ರಾಚೀನ ಶ್ರೇಷ್ಠರ ಕಲೆಗಳ ಸಾಲಿನಲ್ಲಿ ನಿಲ್ಲುತ್ತದೆ. ಮಣ್ಣಿನಿಂದ ಕೆಸರು ಮಾಡಿ ಚಕ್ರದಿಂದ ಆ ಮಣ್ಣಿಗೆ ವಿವಿಧ ರೂಪಗಳನ್ನು ನೀಡುವವರಿಗೆ ಕುಂಬಾರರು ಎನ್ನುತ್ತಾರೆ.

ಪ್ರಾಚೀನ ಕಾಲದಲ್ಲಿ ಇತಿಹಾಸದ ಪುರಾವೆಗಳನ್ನು ತಿರುವು ನೋಡಿದಾಗ ಸುಟ್ಟ ಮಣ್ಣಿನಿಂದ ಮಾಡಲಾದ ಮಾತೃ ದೇವತೆಯ ಮೂರ್ತಿ ಶಿಲ್ಪ, ಸೈಂದವಶೇಷ ಸಂಸ್ಕೃತಿಗಳಲ್ಲಿ ಸಹ ದೊರೆತಿದೆ. ಈ ದಾಖಲೆಯಿಂದ ಮಣ್ಣಿನಲ್ಲಿ ತಯಾರಾದ, ಪ್ರಾಚ್ಯವಸ್ತುಗಳ ಕುಂಬಾರಿಕೆ ಕಲೆಯ, ಕುರುಹು ತೋರಿಸುತ್ತದೆ. ಪ್ರಾಚೀನ ಕಾಲದ ಈ ಕುಂಬಾರಿಕೆಯ ಕಲಾ ಪರಂಪರೆಯನ್ನು ನೈಲ್ ನದಿಯ ತೀರ ಪ್ರದೇಶದಲ್ಲಿ ಕಂಡುಬರುವ ಪ್ರತಿಮೆಗಳು ಹಾಗೂ ಅನೇಕ ಬಗೆಯ ವಿಗ್ರಹಗಳಿಂದ ತಿಳಿಯಬಹುದು. ಇಂತಹ ಎಲ್ಲಾ ದಾಖಲೆಗಳು ಮಣ್ಣಿನಿಂದ ನಿರ್ಮಾಣಗೊಂಡಿದೆ. ವ್ಯವಸ್ಥೆಯೂ ಬದಲಾವಣೆಗೊಳ್ಳುತ್ತಾ ಬಂದರೂ ಕಂಬಾರಿಕೆಯು ವಿಶೇಷ ಮೆರುಗು ಗಳಿಸಿ ಖ್ಯಾತಿ ಪಡೆಯುತ್ತಾ ಉಳಿದು ಬಂದಿದೆ. ಈ ಕಲಾವಂತಿಕೆಯನ್ನು ಇಂದಿಗೂ ನಾವು ಕಾಣಬಹುದು. ಆಧುನಿಕ ಸಮಾಜದಲ್ಲಿ ಹೆಣ್ಣನ್ನು ಕಡೆಗಣಿಸಿರುವುದು ಸ್ಪಷ್ಟ ಸಂಗತಿ." ಆದಿಮ ಹಂತದ ಕುಂಬಾರಿಕೆ ಕಲೆಯು ಜನಸಾಮಾನ್ಯ ವರ್ಗದ ಹೆಣ್ಣು ಮಕ್ಕಳಿಂದಲೇ ಪ್ರಾರಂಭವಾಯಿತು ಎಂಬುವುದರಲ್ಲಿ ಸಂದೇಹವಿಲ್ಲ."

ಕುಂಬಾರಿಕೆಯು ಮಹಿಳೆಯರಿಂದಲೇ ಪ್ರಾರಂಭವಾದ ಕಾಲದಲ್ಲಿ ಉತ್ಪಾದನೆಯ ಪರಿಕರಗಳು ಬದಲಾವಣೆಗೊಂಡು ತಕ್ಷಣ ಇದರಲ್ಲಿ ಪುರುಷನ ಭಾಗವಹಿಸುವಿಕೆ ಕಂಡುಬರುತ್ತದೆ. ಅಂದರೆ ವಿನಿಮಯದ ಮುಖಾಂತರ ಹಣದ ಚಲಾವಣೆಗೆ ಬಂದ ತಕ್ಷಣ ಪುರುಷನ ಇದರ ಮೇಲೆ ಹಿಡಿತ ಸಾಧಿಸಲು ಪ್ರಾರಂಭಿಸಿದ್ದಾನೆ.

ಕುಂಬಾರಿಕೆಯಲ್ಲಿ ವಿಶೇಷವಾಗಿ ಮಣ್ಣು ಪ್ರಮುಖ ಪಾತ್ರವಹಿಸುತ್ತದೆ. ಈ ಮಣ್ಣು ಎಲ್ಲಾ ಕಡಗಳಲ್ಲಿಯೂ ದೊರೆಯುವುದಿಲ್ಲ. ಹಾಗಾಗಿ ಕೆಲವು ಸೀಮಿತ ಪ್ರದೇಶದಲ್ಲಿ ಅದನ್ನು ಗುರುತಿಸಿ ದೂರದ ಪ್ರದೇಶದಿಂದ ಹೊತ್ತು ತರುವ ಕಾರ್ಯ ವಿಶೇಷವಾಗಿ ಮಹಿಳೆಯರದೆ. ಅದನ್ನು ತಂದು ನೀರಿನಿಂದ ಮೆಂದು, ಕಲಸಿ ಹದಗೊಳಿಸಿ ತುಳಿದು ಮಣ್ಣನ್ನು ತನ್ನ ಹದಕ್ಕೆ ತರುವವಳು ಮಹಿಳೆಯೇ ಆಮೇಲೆ ಹೊತ್ತು ಒಯ್ದು

ಸಂಪೂರ್ಣ ಮಾಗಿದ ಮಣ್ಣು ಪುರುಷನಿಗೆ ದೊರೆಯುವಂತೆ ಮಾಡುತ್ತಾಳೆ. ನಂತರ ಮಣ್ಣಿನಿಂದ ವಿವಿಧ ಬಗೆಯ ಆಕಾರ ನೀಡುವವನು ಪುರುಷ ಹಾಗಾಗಿ ಪುರುಷರು ತಮ್ಮ ಶ್ರಮಶಕ್ತಿಯನ್ನು ಕಡಿಮೆ ವ್ಯಯಿಸಿ ಕುಂಬಾರಿಕೆಯಲ್ಲಿ ಗುರುತಿಸಿಕೊಂಡಿದ್ದಾನೆ. ಹೆಚ್ಚು ಶ್ರಮವನ್ನು ವಹಿಸಿದ ಮಹಿಳೆಯನ್ನು ಮೂಲೆ ಗುಂಪು ಸೇರುವಂತೆ ಸಮಾಜ ವ್ಯವಸ್ಥೆ ಮಾಡಿದೆ.

೪. ನೇಕಾರಿಕೆ : ಮಾನವನ ಇತಿಹಾಸದೊಡನೆ ಜೀವನಾವಶ್ಯಕವಾದ ವಸ್ತುಗಳ ಇತಿಹಾಸವು ಆರಂಭವಾಗುವುದು ಮಾನವನ ಜೀವನಕ್ಕೆ ಅತ್ಯವಶ್ಯಕವಾದ ಬೇಡಿಕೆಗಳೆಂದರೆ ಆಹಾರ, ಆಶ್ರಯ, ಬಟ್ಟೆ, ಈ ಬಟ್ಟೆಯ ನೇಯ್ಗೆ ಎಂದಿನಿಂದ ಪ್ರಾರಂಭವಾಯಿತೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಆಧಾರಗಳಿಲ್ಲ. ತೀರ ಪ್ರಾಚೀನ ಕಾಲದಲ್ಲಿ ವಸ್ತ್ರವಿಲ್ಲದೆ ತಿರುಗುತ್ತಿದ್ದ ಮಾನವನು ತನ್ನ ತಿಳುವಳಿಕೆಯ ಅರಿವು ತನಗೆ ಆದಂತೆ ಗಿಡದ ಹರವಾದ ಎಲೆ ತೋಗಟೆ ಮುಂತಾದವುಗಳಿಂದ ತನ್ನ ದೇಹ ಮುಚ್ಚಿಕೊಳ್ಳಲು ಪ್ರಾರಂಭಮಾಡಿದನು. ಚಳಿ, ಬಿಸಿಲು, ಮಳೆ ಗಾಳಿ, ಇವುಗಳಿಂದ ತನ್ನ ದೇಹವನ್ನು ರಕ್ಷಿಸಿಕೊಳ್ಳಲಿಕ್ಕೆ ಪ್ರಾಣಿಗಳ ಚರ್ಮವನ್ನು ಧರಿಸ ಹತ್ತಿದನು. ಪ್ರಾಣಿಗಳನ್ನು ಹಿಡಿಯಲು ಆತನು ಉಪಯೋಗಿಸುತ್ತಿದ್ದ. ಬಲೆಯು ಬರಬರುತ್ತಾ ಬಟ್ಟೆಗಳ ಕಲ್ಪನೆಗೆ ಮೂಲವಾಗಿತ್ತು.

ಮಾನವನು ತನ್ನ ಸುಧಾರಣೆಯ ಶಿಖರವನ್ನು ಮುಟ್ಟಿದ ಯುಗದಲ್ಲೂ ಬೇರೆ ಬೇರೆ ತಂತ್ರಗಳಿಂದ ಅಂದ ಚೆಂದವಾದ ತರ ತರಹದ ಅರಿವೆಗಳನ್ನು ತಯಾರಿಸಹತ್ತಿದನು. ಇದೇ ಮುಂದೆ ನೇಯ್ಗೆಯ ರೂಪದಲ್ಲಿ ಬೆಳಕಿಗೆ ಬಂದಿತು. ಮೃದುವಾದ ಹತ್ತಿಯಿಂದ ಎಳೆ ತೆಗೆದು ವಸ್ತ್ರ ತಯಾರಿಸುವುದು ವಾಡಿಕೆಯಾಯಿತು. ಆಗಿನಿಂದಲೇ ನೇಕಾರಿಕೆ ಪ್ರಾರಂಭವಾಗಿದೆ. ನೇಕಾರಿಕೆ ಹಲವಾರು ಐತಿಹ್ಯ ಪುರಾಣ ದೇವಾಂಗನ ಕಥೆಗಳು ಇನ್ನು ಪ್ರಚಲಿತದಲ್ಲಿ ಇರುವ ಅನೇಕ ಬಗೆಯ ವಿಶೇಷತೆಗಳು ಇಂದಿಗೂ ನಾವು ನೋಡಬಹುದಾಗಿದೆ.

ನೇಕಾರಿಕೆ ಇದು ಒಂದು ವೃತ್ತಿ. ಈ ವೃತ್ತಿಯ ಗುಂಪುಗಳು ಭಾರತದಲ್ಲಿ ಜಾತಿಯಾಗಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಭಾರತದಲ್ಲಿ ನೇಕಾರಿಕೆ ಕಲೆ ಅತ್ಯಂತ ಪ್ರಾಚೀನವಾದದ್ದು ಎಂಬುದಕ್ಕೆ ಸಿಂದೂ ನಾಗರಿಕತೆಯಲ್ಲಿ ಕಂಡು ಬರುವ ಪ್ರಮುಖ ನಗರಗಳಾದ ಹರಪ್ಪ ಮತ್ತು ಮಹೆಂಜೋದಾರದಲ್ಲಿ ದೊರೆತ ಅವಶೇಷಗಳೇ ಸಾಕ್ಷಿಯಾಗಿವೆ. ಅಲ್ಲಿ ದೊರೆತ ನೇಕಾರಿಕೆ ಪರಿಕರಗಳು ಇಲ್ಲಿ ದೊರೆತಿವೆ. ಇದರಿಂದ ನಮಗೆ ಅಲ್ಲಿ ಸಹ ನೇಕಾರರು ಇದ್ದರು ಎಂಬ ವಿಷಯ ನಮಗೆ ಪ್ರಾಪ್ತವಾಗುತ್ತವೆ. ಪ್ರಾಚೀನ ಭಾರತದ ಕೈಮಗ್ಗದ ಉದ್ದಿಮೆಯ ಬಗ್ಗೆ ಪ್ರಾಚೀನ ವಿದೇಶಿ ಪ್ರವಾಸಿಗರಾದ ಪಾಹಿಯಾನ, ಹುಯೆನ್‌ತ್ಸಾಂಗ್ ಮುಂತಾದವರು ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾರೆ.

ಆದಿಮ ಕಾಲದಿಂದಲೂ ನೇಯ್ಗೆಯ ವಿವಿಧ ಬಗೆಯ ಬೆಳವಣಿಗೆಯನ್ನು ಕಾಣುತ್ತಾ ಬಂದಿದೆ. ಇದರ ಬೆಳವಣಿಗೆಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾಗಿ ಕಂಡುಬರುತ್ತದೆ. ಮಹಿಳೆಯ ನೇಕಾರಿಕೆಯಲ್ಲಿ ಹಾಸು

ಹಣಿಗೆಗೆ ಕಟ್ಟಿ ಮಗ್ಗ ವರಿಸುವುದು, ಮಗ್ಗದ ತೆಗ್ಗಿನ ಕುಣಿಯಲ್ಲಿ ಅಣಿ ಎತ್ತಿ ವಿವಿಧ ಬಣ್ಣದ ಲಾಳಿ ಬಿಡಿಸುವದು. ಹಾಗೂ ನೇಯುವುದು ಅತ್ಯಂತ ನಾಜುಕಿನ ಕೆಲಸವಾದ ಅಣಿ ಹಾಕುವುದು. ಹೀಗೆ ಹಲವಾರು ಸೂಕ್ಷ್ಮ ಕೆಲಸ ಮಹಿಳೆಯು ಮಾಡುತ್ತಾಳೆ. ನೇಕಾರಿಕೆಯಲ್ಲಿ ಕೈಮಗ್ಗ ಸ್ವಚ್ಛ ಮಾಡುವುದರಿಂದ ಹಿಡಿದು ನೂಲುನಿಂದ ಆ ವಸ್ತು ತಯಾರಾಗುವವರೆಗೆ ಮಹಿಳೆ ಅದರಲ್ಲಿ ಅವಿರತವಾಗಿ ದುಡಿಯುತ್ತಾರೆ. ದುಡಿದರೂ ಕೂಡ ಅವಳಿಗೆ ಇದರಲ್ಲಿ ಯಾವುದೇ ರೀತಿಯ ಅನುಕೂಲಗಳು ಇಲ್ಲ ಬರೀ ಶ್ರಮ ಮಾತ್ರ ಆಕೆಯ ಪಾಲಿಗೆ ಉತ್ಪಾದನೆ ವಸ್ತುಗಳೆಲ್ಲವೂ ಪುರುಷನ ಪಾಲಿಗೆ.

೫. ಬೀಡಿ ಕಟ್ಟುವುದು : ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಹೆಚ್ಚಿನ ಮಹಿಳೆಯರು ಗುಡಿಕೈಗಾರಿಕೆಯ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವುಗಳಲ್ಲಿ ಬೀಡಿಕಟ್ಟುವುದು ಒಂದು. ಈ ಬೀಡಿ ಕಟ್ಟುವ ಉದ್ಯಮವು ಮನುಷ್ಯನ ಬುದ್ಧಿಶಕ್ತಿಯ ಉಗಮವಾದ ನಂತರ ತನ್ನ ಹವ್ಯಾಸಕ್ಕಾಗಿ ಬೆಳಸಿಕೊಂಡ ಧೂಮಪಾನದ ಚಟದಿಂದ ಈ ಉದ್ಯಮವು ಬೆಳೆಯಲು ಪ್ರಾರಂಭವಾಗಿದೆ ಎಂದು ಇತಿಹಾಸದಿಂದ ತಿಳಿದುಬರುತ್ತದೆ.

ಸಾಮಾನ್ಯವಾಗಿ ಈ ಬೀಡಿ ತಯಾರಿಕೆಯ ಸುಮಾರು ಮೂರು ಹಂತಗಳಲ್ಲಿ ನಡೆಯುತ್ತಿದೆ. ಎಲೆ ಕತ್ತರಿಸುವುದರಿಂದ ಹಿಡಿದು ದಾರಹಾಕುವುದು ಬೀಡಿಗಳ ಅಂಚು ಮಡಿಚುವುದು ನಂತರ ಮತ್ತೆ ಎಣಿಸಿ ಮತ್ತೊಂದು ಕಟ್ಟುಗಳನ್ನಾಗಿ ಮಾಡುವುದು. ಹೀಗೆ ಪ್ರತಿಕುಟುಂಬಗಳಲ್ಲಿ ಮಹಿಳೆಯರು ಕೆಲಸವನ್ನು ಹಂತಹಂತವಾಗಿ ಹಂಚಿಕೊಂಡು ಬೀಡಿ ತಯಾರಿಸುತ್ತಾರೆ. ತಯಾರಾದ ಬೀಡಿಗಳು ಏಜೆಂಟರುಗಳಿಗೆ ಅಥವಾ ಅಂಗಡಿಗಳಿಗೆ ಕೊಡೊಯ್ದು ಅವರಿಗೆ ಕೊಟ್ಟು ಪುನಃ ಬೀಡಿ ತಯಾರಿಸಲು ಬೇಕಾಗುವ ಕಚ್ಛಾವಸ್ತುಗಳನ್ನು ಪಡೆದುಕೊಂಡು ಮನೆಗೆ ಬರುತ್ತಾರೆ. ಈ ಎಲ್ಲಾ ಕೆಲಸವು ಪ್ರಮುಖವಾಗಿ ಮಹಿಳೆಯರಿಂದಲೇ ನಡೆಯುತ್ತದೆ. ಅದರಲ್ಲೂ ಪ್ರಮುಖವಾಗಿ ಯುವತಿಯರ ಪಾತ್ರ ಅತ್ಯಂತ ಹೆಚ್ಚು ಎಂದು ಹೇಳಬೇಕಾಗುತ್ತದೆ. ಈ ಉದ್ಯೋಗಕ್ಕೆ ಅಕ್ಷರಜ್ಞಾನದ ಅವಶ್ಯಕತೆಯಿಲ್ಲದಿದ್ದರೂ ಕೌಶಲ್ಯದ ಅವಶ್ಯಕತೆ ಅತ್ಯಂತ ಮುಖ್ಯವಾಗಿರುವುದು ಕಂಡುಬರುತ್ತದೆ.

ಈ ಬಿಡಿ ಉದ್ಯಮವು ವರ್ಷದ ಎಲ್ಲಾ ಕಾಲದಲ್ಲಿ ಮಾಡುವಂತಹದು ಹಾಗೂ ಹೊರಗೆ ಹೋಗದೆ ಮನೆಯಲ್ಲಿ ಕುಳಿತು ಮಾಡುವುದರಿಂದ ಹೆಚ್ಚಾಗಿ ಮುಸ್ಲಿಂ ಹೆಣ್ಣುಮಕ್ಕಳು ಈ ವೃತ್ತಿಯಲ್ಲಿ ಕಂಡುಬರುತ್ತಾರೆ. ಎಷ್ಟೋ ಕುಟುಂಬದಲ್ಲಿನ ಮಹಿಳೆಯರ ಜೀವನವೂ ಈ ಆದಾಯದಿಂದಲೇ ನಿರ್ವಹಿಸಲ್ಪಡುತ್ತಿದೆ. ಒಟ್ಟಾರೆ ಬೀಡಿ ಉದ್ಯಮವು ಒಂದು ರೀತಿಯಲ್ಲಿ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡುವಂತಹ ಉದ್ಯೋಗವಾಗಿದ್ದು ವರ್ಷದ ಎಲ್ಲಾ ಕಾಲದಲ್ಲೂ ಇರುವ ಜಾಗದಲ್ಲಿ ಸಂಪಾದಿಸಿ ಜೀವನ ನಡೆಸುವಂತಹ ವೃತ್ತಿಯಾಗಿದೆ.

ಉಪಕಸುಬುಗಳ ಹಂತ

ಬದಲಾವಣೆಯನ್ನು ಸದಾ ಬಯಸುವ ಮಾನವ ತನ್ನ ಜೀವನದಲ್ಲಿ ಸಂಪತ್ತು ಸಮೃದ್ಧಿಗಳನ್ನು ಹೆಚ್ಚಿಸಿಕೊಂಡಿದ್ದಾನೆ. ಹೆಚ್ಚು ಹೆಚ್ಚು ಸುಖ ಸೌಕರ್ಯಗಳನ್ನು ಪಡೆಯಲು ಹವಣಿಸಿದ್ದಾನೆ. ಇಂಥ ಜೀವನದ ವೈವಿಧ್ಯತೆಗೆ ಕಾರಣವಾಗಿ ಈ ಗುಡಿಕೈಗಾರಿಕೆಗಳು ಸೌಂದರ್ಯಭಿರುಚಿಯನ್ನು ಒಳಗೊಂಡು ವಿಕಾಸಗೊಳ್ಳುತ್ತಾ ಅವರ ಕುಶಲತೆಗಳು ಬೆಳೆದು ಬಂದವು. ಇದಕ್ಕೆ ಒಂದೆಡೆ ಬೆಳೆಯುತ್ತಿದ್ದ ಜನಸಂಖ್ಯೆಯು ಕಾರಣವಾಗಿರಬೇಕು. ಇನ್ನೊಂದೆಡೆ ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರ ಆಶ್ರಯ ಹಾಗೂ ಜನಸಮುದಾಯದ ಬೇಡಿಕೆಗಳು ಮತ್ತು ಇಂತಹ ಗುಡಿಕೈಗಾರಿಕೆಗಳಿಗೆ ಜನರ ಪ್ರೋತ್ಸಾಹ ಹೆಚ್ಚಾಗಿರಬೇಕು. ಹಾಗೂ ಪ್ರಾಚೀನ ಕಾಲದ ಮಹಿಳೆಯರಿಂದ ಹೆಚ್ಚಿನ ಒಲವಿನ ಜೊತೆಗೆ ಇವರ ಆಸಕ್ತಿಯ ಅಭಿರುಚಿಗೆ ಕಾರಣವಾಗಿರಬೇಕು. ಇವುಗಳಲ್ಲಿ ಪ್ರಮುಖವಾಗಿ ಮಹಿಳೆಯರೆ ಉತ್ಪಾದಿಸುವ ಹಲವಾರು ಉಪಕಸಬುಗಳು ಬೆಳವಣಿಗೆ ಹೊಂದಿದವು. ಇವುಗಳಲ್ಲಿ ಪ್ರಮುಖವಾಗಿ ೧. ಕಸೂತಿ ೨. ಕೌದಿಕಲೆಗಳನ್ನು ೩. ಬೀಡಿ ಕಟ್ಟುವುದು ಗುರುತಿಸಬಹುದು. ಇವುಗಳಲ್ಲಿ ಮುಖ್ಯವಾಗಿ ಮಹಿಳೆಯರೆ ಮೂಲಾಧಾರವಾಗಿದ್ದಾರೆ ಹಾಗೂ ಈ ಗುಡಿಕೈಗಾರಿಕೆಗಳು ಮಹಿಳೆಯರೇ ಜೀವಾಳವಾಗಿದ್ದರು.

ಕಸೂತಿ

ಮಾನವನು ಅನಾಗರಿಕ ಸ್ಥಿತಿಯಿಂದ ಕಾಲಕ್ರಮದಲ್ಲಿ ವಿಶೇಷವಾದ ಹಲವು ಬದಲಾವಣೆಗಳು ಪ್ರಕೃತಿಯಲ್ಲಿ ಕಂಡು ಅವುಗಳ ಅರಿವಿನಿಂದ ತನ್ನ ದೇಹದ ಅಂಗಗಳನ್ನು ಮುಚ್ಚುವ ವಿವಿಧತೆಯನ್ನು ಪ್ರಕೃತಿ ನೀಡಿದ ಸಂಪತ್ತಿನಿಂದ ಪ್ರಾರಂಭಿಸಿದ ಬೇಟೆ ಸಂಸ್ಕೃತಿಯಲ್ಲಿ ಮನುಷ್ಯ ತಾನು ಬೇಟೆಯಾಡಿ ತಂದ ಪ್ರಾಣಿ ಮಾಂಸವನ್ನು ಹಸಿವು ನೀಗಿಸಲು ಆಹಾರವಾಗಿ ಉಪಯೋಗಿಸಿದರೆ ಪ್ರಾಣಿಯ ಚರ್ಮವನ್ನು ದೇಹಕ್ಕೆ ವಸ್ತ್ರವಾಗಿ ಉಪಯೋಗಿಸತೊಡಗಿದ ಮುಂದೆ ಮರದ ತೊಗಟೆ ಎಲೆಗಳಿಂದ ಮಳೆ ಗಾಳಿ ಚಳಿಯಿಂದ ರಕ್ಷಣೆ ಪಡೆಯಲು ಬಳಸಿಕೊಳ್ಳತೊಡಗಿದನು. ನಂತರದ ದಿನಗಳಲ್ಲಿ ಕೃಷಿ ಸಂಸ್ಕೃತಿಗೆ ಬದಲಾವಣೆಗೆ ನೂಲಿನ ಬಟ್ಟೆಯ ಶೋಧದಿಂದ ಹೆಚ್ಚು ಸಂಸ್ಕೃತಿಕರಣಗೊಳ್ಳುತ್ತಾ ನಡೆಯತೊಡಗಿದ. ಮನುಷ್ಯ ಇದರಿಂದ ತಾನು ಧರಿಸುವ ವಸ್ತ್ರದಲ್ಲಿ ವೈವಿಧ್ಯತೆಯನ್ನು ಬಯಸಿದ ಸೌಂದರ್ಯದೃಷ್ಟಿ ಜಾಗೃತವಾದಂತೆ ತಾನು ತೊಡುವ ಉಡುಪು ಅಲಂಕಾರಿಕವಾಗಿ ಇರಬೇಕೆಂದು ಬಯಸಿದನು. ಪ್ರಕೃತಿಯ ಬಣ್ಣಗಳನ್ನು ಕಂಡ ನಂತರ ಎಲೆ ಹೂಗಳ ಬಣ್ಣ ಬೆಡಗಿನ ಆಕರ್ಷಣೆಗಳು ತನಗೆ ಬೇಕೆಂದು ದೈನಿಂದಿನ ಜೀವನದಲ್ಲಿ ವಿಶೇಷ ಪ್ರಾಶಸ್ತ್ಯ ಕೊಡತೊಡಗಿದ. ವಿಶೇಷವಾಗಿ ಗಮನ ಹರಿಸತೊಡಿಗದ ಇದರಿಂದಾಗಿ ಕಸೂತಿಯು ಪ್ರಕೃತಿಯ ಅನುಕರಣೆಯೊಂದಿಗೆ ರೂಪಗೊಂಡಿತು. ಕ್ರಮೇಣ ಈ ಕಲೆಯು ಹೊಸದಾಗಿ ವೃತ್ತಿಯ ಮೂಲವಾಗಿ ಜೀವಿಸಲು ಬೇಕಾದ ಬಟ್ಟೆಯ ರೂಪದ ಆಧಾರವಾಗಿ ಅಂದಿನಿಂದ ಇಂದಿನವರೆಗೂ ಉಳಿದುಕೊಂಡು ಬಂದಿದೆ.

ಪ್ರಸ್ತುತದಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಕಸೂತಿ ಕಲೆಗೆ ಮಹತ್ತರ ಸ್ಥಾನವಿದೆ. ಭಾರತದ ನಾಗರಿಕತೆಯ ತೊಟ್ಟಿಲು ಎಂದು ಕರೆಯಲ್ಪಡುವ ಸಿಂಧೂ ನಾಗರಿಕತೆಯ ಕಣಿವೆಯ ಮಾಹೆಂಜೊದಾರ ನಗರದ ಅವಶೇಷಗಳಿಂದಲೂ ಇದು ಕಂಡು ಬಂದಿದೆ. ಇದು ವಿಶ್ವದ ಎಲ್ಲಾ ರಾಷ್ಟ್ರಗಳಿಗೆ ವಿವಿಧ ಬಗೆಯ ಕಸೂತಿ ವಸ್ತುಗಳನ್ನು ದೊರಕಿಸಿಕೊಡುತ್ತಿದ್ದ ತಾಣವಾಗಿತ್ತು.

ಈ ಕಲೆಯು ಪ್ರಾಚೀನ ಕಾಲದಿಂದಲೂ ವಿಶೇಷವಾಗಿ ಮಹಿಳೆಯರು ಮಾಡುತ್ತಾ ಬಂದಿದ್ದಾರೆ. ಪ್ರಸ್ತುತವಾಗಿಯೂ ಮಾಡುತ್ತಿದ್ದಾರೆ. ಈ ಕಲೆಗೂ ಗ್ರಾಮೀಣ ಪ್ರದೇಶದ ಮಹಿಳೆಯರಿಗೂ ಅವಿನಾಭಾವ ಸಂಬಂಧವಿದೆ. ಹೆಚ್ಚಿನ ಉತ್ಪಾದನೆಗೆ ಮಹಿಳೆಯರೇ ಕಾರಣಕರ್ತರು ಹಾಗಾಗಿ ಈ ವೃತ್ತಿಯು ಗ್ರಾಮೀಣ ಭಾಗದ ಗುಡಿ ಕೈಗಾರಿಕೆಯಾಗಿ ಪ್ರಮುಖ್ಯತೆ ಇಂದಿಗೂ ಗಳಿಸಿದೆ.

ಈ ಕಸೂತಿ ಕಲೆಯು ಮಹಿಳೆಯರಿಗೆ ಬಹುಪಯೋಗಿ ಸಾಧನವಾಗಿ ಬೆಳೆದುಬಂದಿದೆ. ವಿರಾಮ ವೇಳೆಯ ಲಾಭವನ್ನು ಪಡೆಯಲು ಕಸೂತಿ ಕಲೆಯಲ್ಲಿ ಕಲಾತ್ಮಕತೆ ಸೃಷ್ಟಿಸುವುದು ಮಹಿಳೆಯರ ಕೆಲಸವಾಗಿದೆ. ಈ ಕಸೂತಿಯಲ್ಲಿ ವಿವಿಧ ನಮೂನೆಗಳಿವೆ. ಎಳೆ, ಹೊಲಿಗೆ, ಕಾಶ್ಮೀರ ಹೊಲಿಗೆ, ಕಂಬಳಿ ಹೊಳಿಗೆ, ಅಂಬೇನ ಹೊಲಿಗೆ, ಇತ್ಯಾದಿ ನಮೂನೆಗಳಿವೆ. ಇಂತಹ ಕಸೂತಿಯನ್ನು ಹೆಣಿಗೆಯ ಕಸೂತಿಯ ದಾರದಲ್ಲಿ ದಾರವನ್ನು ಅಥವಾ ರೇಷ್ಮೆಯ ನೂಲನ್ನು ತೆಗೆದುಕೊಂಡು ಕೊಕ್ಕೆ ಸೂಜಿಯಿಂದ ದಾರವನ್ನು ಹೆಣೆಯುತ್ತಾ ಕಸೂತಿ ಚಿತ್ರ ವಿನ್ಯಾಸ ಬಿಡಿಸುತ್ತಾರೆ. ಹೀಗೆ ಕಸೂತಿ ಕಲೆಯನ್ನು ಹೆಣೆಯುತ್ತಾರೆ. ಕಸೂತಿಯು ಇತರೆ ಹೊಲಿಗೆಗಳಂತಲ್ಲ ಅದು ಸೂಕ್ಷ್ಮವು ಕಣ್ಣಿಗೆ ಹೆಚ್ಚು ಶ್ರಮವನ್ನುಂಟುಮಾಡುವ ಹೆಚ್ಚು ಸಮಯದ ಅವಶ್ಯಕತೆ ಇರುವಂತಹದು ಸಾಂಪ್ರದಾಯಿಕ ಹಾಗೂ ವಂಶ ಪರಂಪರಾಗತವಾಗಿ ಅಜ್ಜಿಯಿಂದ ಮಗಳಿಗೆ ಮೊಮ್ಮಗಳಿಗೆ ಮುಂದುವರೆಸಿಕೊಂಡು ಹೋಗುವ ವಿಶಿಷ್ಟ ಕಲೆಯಾಗಿದೆ.

ಕೌದಿ

ಗುಡಿಕೈಗಾರಿಕೆ ಕಲೆಗಳಲ್ಲಿ ಅತ್ಯಂತ ಹೆಚ್ಚು ಪ್ರಸಿದ್ಧಿ ಪಡೆದ ಕೌದಿ ಕಲೆಯು ಶ್ರೀಮಂತರು ಮತ್ತು ಬಡವರು ಎರಡು ವರ್ಗದವರು. ಭೇದವಿಲ್ಲದೆ, ಬಳಸುತ್ತಾರೆ. ಆದರೆ ಬಳಸುವ ವಸ್ತುಗಳ ಗುಣಮಟ್ಟದಲ್ಲಿ ವ್ಯತ್ಯಾಸವಿದೆ. ಗ್ರಾಮೀಣ ಪ್ರದೇಶದ ಜನರು ಕೌದಿ ಕಲೆಯನ್ನು ತಮ್ಮ ಕೈಗಳ ಸಹಾಯದಿಂದಲೇ ಮಾಡುವವರಾಗಿದ್ದಾರೆ. ಕೌದಿಯ ಸೃಷ್ಟಿಯ ಬಗ್ಗೆ ಹೇಳಬೇಕಾದರೆ ಬಟ್ಟೆಯು ಹಳೆಯದಾದ ನಂತರ ಅದನ್ನು ಬಿಸಾಡದೇ ಉಪಯೋಗಿಸುವ ಪ್ರಯತ್ನವೆ ಕೌದಿಯ ಹುಟ್ಟಿಗೆ ಪ್ರೇರಣೆ. ಆದರೆ ಇದಕ್ಕೆ ಕೌದಿ ಎಂಬ ಹೆಸರು ಏಕೆ ಬಂತು ಎಂಬುದಕ್ಕೆ ಸರಿಯಾದ ಅರ್ಥ ಸಿಕ್ಕುತ್ತಿಲ್ಲ.

"ಆಯುರ್ವೇದ ಶಾಸ್ತ್ರ ಗ್ರಂಥವಾದ ಚರಕ ಸಂಹಿತದಲ್ಲಿ ೨ನೇಯ ಶತಮಾನದ ಹೊತ್ತಿಗೆ ಇದರ ಉಲ್ಲೇಖ ಕಂಡು ಬಂದಿದೆ. ಅಲ್ಲಿ ಇದಕ್ಕೆ ಕಂಥಾ ಎಂದು ಕರೆಯಲಾಗಿದೆ."[೬] ಇದೇ ಕೌದಿಯ ಕುರಿತಾದ

ಪ್ರಾಚೀನ ದಾಖಲೆಯಾಗಿದೆ. ಇದರಿಂದಾಗಿ ಪ್ರಾಚೀನ ಕಾಲದಿಂದಲೂ ಕೌದಿಯ ಬಳಕೆ ಇತ್ತೆಂಬುದು ಗೊತ್ತಾಗುತ್ತದೆ.

ಕೌದಿಯನ್ನು ಹೊಲಿಯುವವರು ಸಾಮಾನ್ಯವಾಗಿ ಮಹಿಳೆಯರು ಅವರು ಬಿಡುವಿನ ವೇಳೆಯನ್ನು ಸದುಪಯೋಗದ ಹಿನ್ನೆಲೆಯಲ್ಲಿ ಕೌದಿಗಳು ಸಿದ್ಧವಾಗುತ್ತವೆ. ದೋತರ ಅಥವಾ ಸೀರೆಯ ತುಂಡನ್ನು ತಮಗೆ ಬೇಕಾದ ಅಳತೆಯಲ್ಲಿ ಕತ್ತರಿಸಿ ಅದನ್ನು ಒದ್ದೆ ಮಾಡಿ ನೆಲದ ಮೇಲೆ ಹಾಸುತ್ತಾರೆ. ನಂತರ ಉಳಿದ ಅರಿವೆ ತುಂಡುಗಳನ್ನು ಚಿಕ್ಕ ಅಳತೆಯಲ್ಲಿ ಆರು ಅಥವಾ ಎಂಟು ಅಂಗಲದ ಆಕಾರದಲ್ಲಿ ಕತ್ತರಿಸಿ ತಯಾರಿಸಿಕೊಂಡು ಒದ್ದಿ ಬಟ್ಟೆಯ ಮೇಲೆ ಜೋಡಿಸಿ ಉದ್ದವಾದ ಹೊಲಿಗೆ ಹಾಕುತ್ತಾರೆ. ಈ ಹಂತಕ್ಕೆ ಉವಿ ಎನ್ನುತ್ತಾರೆ. ನಂತರ ಬಿಸಿಲಿನಲ್ಲಿ ಒಣಗಿಸಿ ಹೊಲಿಗೆ ಹಾಕಿದ ಕೌದಿಯ ಸಿದ್ಧವಾಗುತ್ತದೆ. ಇಷ್ಟೆಲ್ಲಾ ಕೆಲಸವನ್ನು ಮಹಿಳೆಯರೇ ಮಾಡುತ್ತಾರೆ. ಇದರ ಪೂರ್ಣ ಲಾಭವು ಮಹಿಳೆಯ ಪಡೆಯುತ್ತಾಳೆ. ಗ್ರಾಮೀಣ ಭಾಗಗಳಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಇದರ ಬಳಕೆಯು ಹೆಚ್ಚಾಗಿ ಕಂಡುಬರುತ್ತದೆ.

೪. ಗುಡಿಕೈಗಾರಿಕೆಗಳಲ್ಲಿ ಮಹಿಳೆ ಮತ್ತು ಪುರುಷರ ಭಾಗವಹಿಸುವಿಕೆ

ಸಮಾಜ ದೈನಂದಿನ ಆರ್ಥಿಕ ಕ್ರಿಯೆ ಪ್ರಕ್ರಿಯೆಗಳಲ್ಲಿ ಮಹಿಳೆ ತನ್ನ ಸತತ ಕೊಡುಗೆಯಿಂದ ಸಮಾಜದ ಆರ್ಥಿಕ ತಳಹದಿಯನ್ನು ಕ್ರಮಬದ್ಧವಾಗಿ ಇರುವಂತೆ ಮಾಡಿದ್ದಾಳೆ. ಪುರುಷರ ಹೆಗಲಿಗೆ, ಹೆಗಲು ಕೊಟ್ಟು ದುಡಿದಿದ್ದಾಳೆ. ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯ ಪಾಲುದಾರಿಕೆ ಕಂಡುಬರುತ್ತದೆ. ಇವುಗಳಲ್ಲಿ ಗುಡಿಕೈಗಾರಿಕೆ ಒಂದು. ಈ ವೃತ್ತಿಗಳೊಡನೆ ಜೀವನಕ್ರಮವನ್ನು ಆರಂಭಿಸಿದ ಮಹಿಳೆ. ಅನೇಕ ರೀತಿಯ ಸಮಾಜಗಳ ನಿರ್ಮಾಣಕ್ಕೆ ಕಾರಣಳಾಗಿದ್ದಾಳೆ. ಇಂದಿಗೂ ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಶ್ರಮ, ದುಡಿಮೆ, ಹೊಣೆಗಾರಿಕೆ ಗಂಡಸರಿಗಿಂತ ಪ್ರಧಾನವಾಗಿ ನಿರಂತರವಾಗಿ ಮುಂದುವರೆದಿದೆ.

ಸಾಮಾನ್ಯವಾಗಿ ಜೀವನೋಪಾಯಕ್ಕನುಗುಣವಾಗಿ ಬೆಳೆದುಬಂದಿರುವ ಗುಡಿಕೈಗಾರಿಕೆಗಳು ಮಹಿಳೆ, ಪುರುಷ, ಭಾಗವಹಿಸುವಿಕೆ ಒಳಗೊಂಡಿರುತ್ತದೆ. ತಮ್ಮ ಜೀವನ ನಿರ್ವಹಣೆಗೆ ಮಾಡಲೇಬೇಕಾದ ಕಾರ್ಯವು ಪುರುಷ ಮಹಿಳೆಯ ಜವಾಬ್ದಾರಿಗಳಿಂದ ನಿರ್ವಹಿಸಬೇಗುತ್ತದೆ.

ಪಾಲ್ಗೊಳ್ಳುವಿಕೆಯಲ್ಲಿ ಕಾರ್ಯದಕ್ಷತೆಗೆ ಅನುಗುಣವಾಗಿ ಭಿನ್ನವಾಗಿರುತ್ತದೆ. ಪುರುಷನಿಗೆ ಸಂಬಂಧಿಸಿದಂತೆ ಕಾರ್ಯವು ಮಹಿಳೆಗೆ ಬಿಟ್ಟುಕೊಡುವುದಿಲ್ಲ. ಮಹಿಳೆ ಮಾಡತಕ್ಕಂತಹ ಕೆಲಸ ಸಾಮಾನ್ಯವಾಗಿ ಪುರುಷ ಮಾಡುತ್ತಾನೆ. ಇದರ ಹಿನ್ನೆಲೆಯ ರೂಪವೆಂದರೆ ಪುರುಷನ ಕಾರ್ಯವು ಸರಳ ಚಾಣಕ್ಯ ಬುದ್ಧಿವಂತಿಕೆ. ಬಂಡವಾಳ ಲಾಭದ ರೂಪವಾಗಿ ಪಡೆದುಕೊಳ್ಳುತ್ತಿದ್ದರೆ ಮಹಿಳೆಯು ಬೇಸರ ಅನಿವಾರ್ಯ ಆಧೀನ ಜವಾಬ್ದಾರಿ ಹೆಚ್ಚಾಗಿರುವಂತ ಕಾರ್ಯದಲ್ಲಿ ಭಾಗಿಯಾಗಿರುತ್ತಾಳೆ.

ಈ ವೃತ್ತಿಗಳಲ್ಲಿ ಮಹಿಳೆಯರನ್ನು ದುಡಿಮೆ ಮತ್ತು ಉತ್ಪಾದನಾ ವಲಯಕ್ಕೆ ಮಾತ್ರ ಸ್ಥಿಮಿತಗೊಳಿಸಿದ್ದಾನೆ. ವಸ್ತುಗಳ ಉತ್ಪಾದನೆಯ ಹಂತದಲ್ಲಿ ಮಹಿಳೆಯ ಶ್ರಮವನ್ನು ಎಲ್ಲಾ ವಿಬಾಗಗಳಲ್ಲಿ ಬಳಸಿಕೊಳ್ಳುತ್ತಾನೆ. ನಂತರ ವಸ್ತುಗಳಿಗೆ ಒಂದು ರೂಪ ಬಂದು ಅವು ಮಾರಾಟದ ಬೆಲೆಗೆ ಸಿದ್ಧವಾದಾಗ ಅಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ನಿಲ್ಲಿಸುತ್ತಾನೆ. ಏಕೆಂದರೆ ವಸ್ತುಗಳು ಸಿದ್ಧವಾದಾಗ ಅವುಗಳಿಗೆ ಆರ್ಥಿಕ ಸ್ವರೂಪ ಬರುತ್ತದೆ. ಈ ಆರ್ಥಿಕ ವ್ಯವಸ್ಥೆಯನ್ನು ಪುರುಷನು ಯಾವಾಗಲು ತನ್ನ ವ್ಯಾಪ್ತಿಯಲ್ಲಿ ಇರುವ ಹಾಗೆ ವ್ಯವಸ್ಥೆಗಳನ್ನು ನಿರ್ಮಾಣ ಮಾಡಿಕೊಂಡಿದ್ದಾನೆ. ಇದರಿಂದ ಮಹಿಳೆಯರನ್ನು ಬರಿ ಉತ್ಪಾದನಾ ದುಡಿಮೆ ವಲಯದಲ್ಲಿ ಇರುವ ಹಾಗೆ ನಿಯಮಗಳನ್ನು ಮಾಡಿಕೊಂಡಿದ್ದಾನೆ. ಹೀಗೆ ಮಹಿಳೆಯರು ದಿನವಿಡಿ ದುಡಿದರು ಅವರ ದುಡಿಮೆಗೆ ಸಿಗುವ ಪ್ರತಿಫಲ ಕಡಿಮೆ. ಮಹಿಳೆ ಪುರುಷರು ಒಂದೆ ರೀತಿಯ ಸಮಾನ ಕೆಲಸ ನಿರ್ವಹಿಸಿದರು ಮಹಿಳೆಯರ ಕಾರ್ಯಕ್ಷೇತ್ರವು ಯಾರ ಕಣ್ಣಿಗೂ ಗೋಚರಿಸುವುದಿಲ್ಲ.

ಈ ಗುಡಿಕೈಗಾರಿಕೆಗಳಲ್ಲಿ ಪುರುಷ ದೈಹಿಕವಾಗಿ ಎಷ್ಟೇ ಪ್ರಬಲನಾಗಿದ್ದರೂ, ಅವನು ಸರಳ ಬೇಸರ ತರಿಸದ ಕೆಲಸಗಳನ್ನು ಮಾಡುತ್ತಾನೆ. ಮಹಿಳೆ ದೈಹಿಕವಾಗಿ ಸ್ವಲ್ಪ ದುರ್ಬಲವಾಗಿದ್ದರು. ಯಾವ ಪುರುಷನಿಗೂ ಕಡಿಮೆಯಲ್ಲದಂತಹ ಕೆಲಸಗಳನ್ನು ನಿರ್ವಹಿಸಿದ್ದಳು. ಈಗಲೂ ನಿರ್ವಹಿಸುತ್ತಿದ್ದಾಳೆ. ಪುರುಷನು ಈ ಗುಡಿಕೈಗಾರಿಕೆಗಳಲ್ಲಿ ಉತ್ಪಾದಿಸಿದ ವಸ್ತುಗಳ ಮೂಲಸ್ವರೂಪ ಶಕ್ತಿಯ ಕೇಂದ್ರವನ್ನು ತನ್ನದಾಗಿರಿಸಿಕೊಂಡಿರುತ್ತಾನೆ. ಅದರಿಂದ ಬಂಡವಾಳವು ಅವನ ಹತೋಟಿಯಲ್ಲಿರುತ್ತದೆ. ಮಹಿಳೆ ಅದನ್ನು ಕೈಯೊಡ್ಡಿ ಬೇಡಲೇ ಬೇಕಾಗುತ್ತದೆ. ಅಂತಹ ಹಿನ್ನಲೆಯಲ್ಲಿ ಪುರುಷನು ಆದೇಶಾತ್ಮಕ ಭಾಷೆಗಳಿಂದ ಬಯ್ಯಲುಬಹುದು, ನಿರಾಕರಿಸಬಹುದು, ಕೊಡದೇ ಹೋಗಬಹುದು ಇಂತಹ ಸಮಯದಲ್ಲಿ ಮಹಿಳೆ ಎದುರುತ್ತರ ನೀಡುವ ಹಾಗಿಲ್ಲ. ಯಾಕೆಂದರೆ ಜೀವನದ ಅವಲಂಬನೆ ಅವನ ಹಿಡಿತದಲ್ಲಿರುತ್ತದೆ.

ಈ ವೃತ್ತಿಗಳೆಲ್ಲವು ಅಧಿಕ ಮಟ್ಟದಲ್ಲಿ ಮಹಿಳೆಯರಿಂದಲೇ ನಡೆಯುತ್ತಿವೆ. ಆದರೆ ಈ ವೃತ್ತಿಗಳ ಹೊಣೆಯನ್ನು ಪುರುಷನೇ ನಿಭಾಯಿಸಿಕೊಂಡಿದ್ದಾನೆ. ಅದು ಹೆಸರಿಗೆ ಮಾತ್ರ ಆಗಿರುತ್ತದೆ. ಉಳಿದ ಕೆಲಸವೆಲ್ಲವೂ ಮಹಿಳೆಯರದೇ ಆಗಿರುತ್ತದೆ.

ಈ ಗುಡಿಕೈಗಾರಿಕೆಗಳು ಉತ್ಪಾದನೆ ಮಾಡುವ ವಸ್ತುಗಳಲ್ಲಿ ಪುರುಷ ಮಾಡತಕ್ಕಂತಹ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಮತ್ತು ಮೌಲ್ಯವನ್ನು ಒಳಗೊಂಡಿರುತ್ತದೆ. ಆದರೆ ಮಹಿಳೆ ಮಾಡತಕ್ಕಂತಹ ಕೆಲಸಗಳಿಗೆ ಹೆಚ್ಚಿನ ಮೌಲ್ಯ ಇರುವುದಿಲ್ಲ. ಹಾಗೂ ಬೇಡಿಕೆ ಕೂಡ ಕಡಿಮೆ ಇರುತ್ತದೆ. ಉದಾ ಬಡಿಗಿತನ ಪುರುಷನಾದರೆ, ಕೌದಿ ಮಹಿಳೆಯರದು

ಮಹಿಳೆಯ ಕಾರ್ಯಕ್ಷೇತ್ರವು ಗುಡಿಕೈಗಾರಿಕೆಗಳಲ್ಲದೆ ಮನೆಯ ವಲಯಕ್ಕೂ ವಿವಿಧ ರೀತಿಯ ಕೆಲಸವು ಮಹಿಳೆಯ ಮೇಲೆ ಅವಲಂಬಿಸಿರುತ್ತದೆ. ಹೀಗಾಗಿ ಈ ಒತ್ತಡಗಳನ್ನು ಸಹಿಸಿಕೊಂಡು ಜೊತೆಗೆ ಗುಡಿಕೈಗಾರಿಕೆ

ಕ್ಷೇತ್ರದಲ್ಲಿಯೂ ದ್ವಿಮುಖ ಪಾತ್ರದಲ್ಲಿ ಅವಿರತವಾಗಿ ಕಾರ್ಯವೆಸಗುತ್ತಾ ಇರುತ್ತಾರೆ. ಮನೆಯ ಕೆಲಸದಲ್ಲಿ ಉದಾ ಮನೆಯ ಅಡಿಗೆ ಕೆಲಸ, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಹಿರಿಯರ ಯೋಗಕ್ಷೇಮ ನೋಡಿಕೊಳ್ಳುವುದು, ಮನೆಯನ್ನು ಸ್ವಚ್ಛಗೊಳಿಸುವುದು ಅಲ್ಲದೆ ಪುರುಷನ ಅಡಿಯಲ್ಲಿ ಗುಡಿಕೈಗಾರಿಕೆಗಳಿಗೆ ಸಂಬಂಧಿಸಿದಂತೆ ವಿಳಂಬವಿಲ್ಲದೆ ಕೆಲಸ ಮಾಡುವುದು. ಹೊರ ಪ್ರಪಂಚವನ್ನು ಗೋಚರಿಸಿದೆ ಈ ಗುಡಿಕೈಗಾರಿಕೆಯ ವೃತ್ತಿಗಳಲ್ಲಿ ಕಷ್ಟ ಕೋಟಲೆಗಳನ್ನು ಸಹಿಸುತ್ತಾ ತಾಳ್ಮೆಯಿಂದ ಬದುಕುತ್ತಿರುವುದು ಮಹಿಳೆಯ ಸಹನಾಶಕ್ತಿ ಪುರುಷನು ದುರುಪಯೋಗಪಡಿಸಿ ಕೊಳ್ಳುತ್ತಿದ್ದಾನೆ.

೫. ಅರ್ಥವ್ಯವಸ್ಥೆಯ ನಿರ್ವಹಣೆಯಲ್ಲಿ ಸಮಾಜ ಸ್ತ್ರೀಯರನ್ನು ಪರಿಗಣಿಸಿರುವುದು

ಶತ ಶತಮಾನಗಳಿಂದಲೂ ಮಹಿಳೆ ಪುರುಷನ ಆದೀನದಲ್ಲೆ ಅಡಕವಾಗಿರುವುದರಿಂದ ಪ್ರತಿಕಾರ್ಯದ ಜವಾಬ್ದಾರಿಗಳು ಸಹ ಪುರುಷನ ಹಿಡಿತದಲ್ಲಿರುವುದು ಕಾಣುತ್ತೇವೆ. ಶ್ರಮ ವಿಭಜನೆಯ ತಾತ್ವಿಕ ನೆಲೆಯಿಂದಲೇ ಪಶು ಪಕ್ಷಿಗಳು ಪಳಗಿಸಿದ ಹಾಗೆ ಮಹಿಳೆಯು ಆರ್ಥಿಕ ಹಿಡಿತದ ಮೇಲೆ ಹತೋಟಿ ಸಾಧಿಸಿದಳು. ಮಾನವನ ಜೀವನದ ಸ್ಥಿತ್ಯಂತರ ಹಂತಗಳಲ್ಲಿ ಶ್ರಮ ವಿಭಜನೆಯ ಕೆಲಸ ಕಾರ್ಯಗಳಲ್ಲಿ ಮನೆಯ ಮಕ್ಕಳ ಪಾಲನೆ, ಪೋಷಣೆ ಕೌಟುಂಬಿಕ ವಲಯದ ಕಾರ್ಯ ಮಹಿಳೆಗೆ ಸೀಮಿತವಾದವು. ಪುರುಷನು ಹೊರಗಿನ ಉತ್ಪಾದಿತ ಸಂಪಾದನೆಯ ಮುಖ್ಯ ಜವಬ್ದಾರಿಯ ಆರ್ಥಿಕ ಹಿಡಿತವನ್ನು ಪುರುಷ ಸಾಧಿಸಿಕೊಂಡನು. ಈ ಹಿನ್ನೆಲೆಯಲ್ಲಿ ಮಹಿಳೆಯ ಕಾರ್ಯ ಅಪ್ರಸ್ತುತ ಗಟ್ಟಿ ಇಲ್ಲದ್ದು ಎನ್ನುವಂತೆ ರೂಪಗೊಂಡಿತ್ತು.

ಗುಡಿಕೈಗಾರಿಕೆಗಳ ಕಾರ್ಯದಲ್ಲಿ ಮಹಿಳೆಯ ಮನೆಯ ನಿರ್ವಹಣೆಯ ಜೊತೆ ತಮ್ಮ ವೃತ್ತಿಗಳಲ್ಲಿಯೇ ಭಾಗವಹಿಸುತ್ತಿದ್ದಳು. ಎರಡರಲ್ಲಿ ಸತತ ಶ್ರಮವಹಿಸಬೇಕಾಗುತ್ತಿತ್ತು. ಕೌಟುಂಬಿಕ ಯಜಮಾನಿಕೆಯ ಮುಖ್ಯ ಜವಾಬ್ದಾರಿಯ ಕಾರ್ಯದ ಜೊತೆ ಅನುಕೂಲದ ಅವಕಾಶವನ್ನು ಪುರುಷನು ತನ್ನ ಕುತಂತ್ರದಿಂದ ಪ್ರಭುತ್ವ ಸಾಧಿಸಿದನು. ಈ ಗುಡಿಕೈಗಾರಿಕೆಗಳಿಂದ ಕಾರ್ಯದ ಪ್ರತಿಫಲವಾಗಿ ಧವಸ ಧಾನ್ಯಗಳು ನೀಡುತ್ತಿದ್ದರು. ಜೀವನ ನಿರ್ವಹಣೆಗೆ ಇದು ಅವಶ್ಯಕ ಇದ್ದುದರಿಂದ ದವಸ ಧಾನ್ಯ ಸಂಗ್ರಹಣೆಯಲ್ಲಿ ಪುರುಷನೇ ಮುಖಂಡತ್ವ ವಹಿಸುತ್ತಿದ್ದನು. ಮತ್ತು ಅದಕ್ಕೆ ಅವನ ಹಿಡತವು ಇದ್ದಿತು. ಇದರಿಂದ ಹೆಣ್ಣು ಅದನ್ನು ಕೈಯೊಡ್ಡಿ ಪಡೆಯಬೇಕಾದ ಸ್ಥಿತಿ ಒದಗಿ ಬರುತ್ತಿದೆ. ಈ ಆರ್ಥಿಕ ಅವಲಂಬನೆಯೇ ಹೆಣ್ಣನ್ನು ಸಿಲುಕಿಸಿದ ಮೊದಲ ಸಾಧನ ಆರ್ಥಿಕ ಸಂಪನ್ಮೂಲಗಳು ಪುರುಷನ ಹಿಡಿತದಿಂದ ಮಹಿಳೆಯರ ಕಾರ್ಯ ಸೀಮಿತಗೊಂಡು ಆಧೀನ ಸ್ಥಿತಿ ಒದಗಿ ಬಂದಿತು. ಹೀಗಾಗಿ ಪುರುಷರೆ ಪ್ರಧಾನರು ಮಹಿಳೆಯರು ಅಡಿಯಾಳುಗಳು ಮಾತ್ರವೆಂದು ಮಹಿಳೆಯರ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಗೊಂಡಿತು. ಎಲ್ಲಿಯವರೆಗೆ ಅಡಿಯಾಳಾಗಿ ಕೆಲಸ ನಿರ್ವಹಿಸಲು ಸಾಧ್ಯವಾಯಿತು. ಅಲ್ಲಿಂದಲೇ ಪುರುಷರ ವರ್ಗ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜ್ಞೆಯಂತೆ ಕೆಲಸಕ್ಕೆ ಇಳ್ಳಿದವಳು ಎಂಬಂತೆ ಪರಿಗಣಿಸಿ ಸಮಯಕ್ಕೆ ಸಂದರ್ಭಕ್ಕನುಸಾರವಾಗಿ ಆಕೆಯನ್ನು ಉಪಯೋಗಿಸಬಹುದೆಂದು

ಅರಿಕೆ ಮಾಡಿಕೊಂಡಿರು. ಈ ವ್ಯವಸ್ಥೆಗೆ ಪುರುಷ ವರ್ಗವು ಸತತ ಯಥಾಸ್ಥಿತಿಯನ್ನು ಕಾಯ್ದುಕೊಂಡು ಬರುತ್ತಿರುವುದು ಇಂದಿನವರೆಗೂ ಕಾಣಬಹುದು.

ಆರ್ಥಿಕವಾಗಿ, ಸಾಮಾಜಿಕವಾಗಿ ಯಾವುದೇ ಬದಲಾವಣೆ ಕಂಡರೂ ಮನೆಯ ಕಾರ್ಯ ಮಾತ್ರ ಮಹಿಳೆಗೆ ನಿರ್ಧಿಷ್ಟ ಪಡಿಸಿರುವುದು. ಅದು ಪ್ರಕೃತಿದತ್ತವಾದದು ಎನ್ನುವಷ್ಟರ ಮಟ್ಟಿಗೆ ಜಾಡ್ಯತೆಯನ್ನು ಸಮಾಜ ಬಿತ್ತಿ ಬಿಟ್ಟಿದೆ. ಯಾವುದೇ ವರಮಾನ, ವಿಮೆ ಯೋಜನೆ, ಮಹಿಳೆಗೆ ನೀಡಲು ಸಮಾಜ ಸಿದ್ಧವಿಲ್ಲ. ಕುಟುಂಬಕ್ಕಾಗಿ ಸತತ ಶ್ರಮವಹಿಸಿದರೂ ವಿಮೆ ಯೋಜನೆಗೆ ಮಾತ್ರ ಯಾವುದೇ ಹಕ್ಕು ನೀಡುವುದಿಲ್ಲ. ಈ ಕೆಲಸ ಕಾರ್ಯ ವೃತ್ತಿಗಳಿಂದ ಮನೆಯ ಜವಾಬ್ದಾರಿಯಲ್ಲಿ ಆರ್ಥಿಕವಾಗಿ ಉಳಿತಾಯ ಮಾಡಲು ಎರುವುಲು ಕಟ್ಟಿಗೆ ಮೇವು ನೀರುಸಂಗ್ರಹ ಮನೆಯ ಜೀವನ ನಿರ್ವಹಣೆಗೆ ಉಚಿತವಾಗಿ ಪ್ರಕೃತಿಯಲ್ಲಿ ಸಿಗುವುದನ್ನು ಸಂಗ್ರಹಿಸಿ ಪುರುಷನಿಗೆ ಅನುಕೂಲವಾಗುವಂತೆ ಮಾಡುತ್ತಾಳೆ. ಮಹಿಳೆಗೆ ಯಾವುದೇ ರೀತಿಯ ವೃತ್ತಿ ಖರ್ಚು ವೆಚ್ಚಗಳಿರುವುದಿಲ್ಲ. ಅದು ಇದ್ದರೂ ಜೀವನದ ಮಟ್ಟಿಗೆ ಅನುಗುಣವಾಗಿಯೇ ಬಳಸಿಕೊಳ್ಳುತ್ತಾಳೆ. ಪುರುಷನು ಆದಾಯವು ಆಕಾಶದಿಂದ ಬೀಳುವ ಹಾಗೆ ವೃತ್ತಾ ಖರ್ಚು ವೆಚ್ಚಗಳನ್ನು ಮಾಡುತ್ತಿರುತ್ತಾನೆ. ಸಾಮಾನ್ಯವಾಗಿ ತನ್ನ ವೈಯಕ್ತಿಕ ಖರ್ಚಿಗೆ ಹೆಚ್ಚಿನ ಬಂಡವಾಳವನ್ನು ವ್ಯಯ ಮಾಡಿ ಸ್ವತಂತ್ರದಿಂದ ಹೊರಗಿನ ಪ್ರಪಂಚದಲ್ಲಿ ವಿಹರಿಸುತ್ತಾನೆ. ಮಹಿಳೆ ನಾಲ್ಕು ಗೋಡೆಗಳ ಮಧ್ಯದಲ್ಲಿ ಅತಿ ಆಸೆ ಗತಿಗೇಡು ಎನ್ನುವುದನ್ನು ರೂಢಿಸಿ ಇದ್ದ ಪರಿಸ್ಥಿತಿಯ ಬವಣೆಯಲ್ಲಿ ಅಪೌಷ್ಟಿಕ ಆಹಾರವನ್ನು ಸೇವಿಸುತ್ತಾ ಜೀವನ ನಿರ್ವಹಿಸುತ್ತಿರುತ್ತಾಳೆ.

ಉದಾ : ಸಾಮಾನ್ಯವಾಗಿ ಮನೆಯಲ್ಲಿ ಪುರುಷರೆಲ್ಲರೂ ಊಟ ಮಾಡಿದ ಬಳಿಕ ಉಳಿದದ್ದನ್ನು ಮಹಿಳೆ ಊಟ ಮಾಡುತ್ತಾಳೆ. ಇಲ್ಲದಿದ್ದರೆ ತಂಗಳದ್ದು, ತಿಂದು ನೀರು ಕುಡಿದು ಮಲಗುತ್ತಾಳೆ. ಪುರುಷರೇ ಊಟ ಮಾಡಿದರೆ ಸಂತೋಷಪಡುವ ತ್ಯಾಗಮಯಿ, ಅನುಕಂಪದ ಹೃದಯ ಸದಾ ಪುರುಷರಿಗಾಗಿ ಮಿಡಿಯುತ್ತಿರುತ್ತದೆ. ಇಷ್ಟಾದರೂ ಮಹಿಳೆಯ ಕಷ್ಟ ಕೋಟಲೆಗಳು ಆರ್ಥಿಕವಾಗಿ ಪುರುಷ ಸೂಕ್ಷ್ಮವಾಗಿ ಅವಲೋಕಿಸಲು ಲೆಕ್ಕಿಸಲು ಹೋಗುವುದಿಲ್ಲ. ಆರ್ಥಿಕ ಹಿಡಿತ ಪುರುಷನಲ್ಲಿರುವುದರಿಂದ ಮಹಿಳೆ ಅವನ ಅಧೀನಕ್ಕೆ ಒಳಪಡಬೇಕಾದಂತ ಒತ್ತಡಗಳಿಂದ ಪುರುಷನ ನಿರ್ಣಯವೇ ಆಕೇಯ ಕಾರ್ಯವ್ಯಾಪ್ತಿಯಾಗಿರುತ್ತದೆ. ಬಡತನ ಬವಣೆಯಲ್ಲಿ ಬಳಲುತ್ತಾ ಸಾಗುತ್ತಿರುವ ಮಹಿಳೆಯರ ಜೀವನದಲ್ಲಿ ಗುಡಿಕೈಗಾರಿಕೆಯು ಆರ್ಥಿಕ ಜವಬ್ದಾರಿಯ ಸ್ವಾಯತ್ತಾ ಪುರುಷ ಪ್ರಧಾನ ಸಮಾಜ ತನ್ನ ವ್ಯಾಪ್ತಿಯಲ್ಲಿ ಇರಿಸಿಕೊಂಡಿದೆ.

೬. ಗಾಂಧೀಜಿ ಮತ್ತು ಗುಡಿಕೈಗಾರಿಕೆ ಚಿಂತನೆ

ಪ್ರಾಚೀನ ಕಾಲದಿಂದಲೂ ನಮ್ಮ ಗುಡಿಕೈಗಾರಿಕೆಗಳಿಗೆ ವಿಶೇಷವಾದ ಮಹತ್ವದ ಸ್ಥಾನ ನೀಡಲಾಗಿತ್ತು. ಪ್ರಾಚೀನ ಜನರ ಅವಶ್ಯಕತೆಗಳಿಗೆ ಸ್ಪಂದಿಸುತ್ತಿದ್ದ ಗುಡಿಕೈಗಾರಿಕೆಗಳು ನಂತರದ ದಿನಗಳಲ್ಲಿ ಕಾಲದ ಹೊಡೆತಕ್ಕೆ ಸಿಕ್ಕು ಅವನತಿಯ ಅಂಚಿಗೆ ಬಂದು ತಲುಪುತ್ತಿದ್ದವು. ಮತ್ತೆ ಬ್ರಿಟಿಷರ ಆಗಮನದಿಂದ ಮತ್ತಷ್ಟು

ಕ್ಷೀಣಿಸತೊಡಗಿದವು. ಆಗ ಗುಡಿಕೈಗಾರಿಕೆಗಳಿಗೆ ಹೊಸ ಆಯಾಮವನ್ನು ನೀಡುವರಂತೆ ಪ್ರೇರೇಪಿಸಿದವರು ಮಹಾತ್ಮ ಗಾಂಧೀಜಿ.

ಹಳ್ಳಿಗಳ ಬೀಡಾದ ನಮ್ಮ ದೇಶದಲ್ಲಿ ಬಹುಪಾಲು ಜನರು ನಿತ್ಯದ ಬದುಕು ಸಾಗಿಸಲು ಹೆಚ್ಚಾಗಿ ಗುಡಿಕೈಗಾರಿಕೆಗಳಲ್ಲಿ ತಯಾರಿಸಿದ ವಸ್ತುಗಳನ್ನು ಬಳಸುತ್ತಿದ್ದರು. ಗುಡಿಕೈಗಾರಿಕೆಯ ವಸ್ತುಗಳನ್ನು ಬಹುವಾಗಿ ಇಷ್ಟಪಡುತ್ತಿದ್ದ. ಮಹಾತ್ಮ ಗಾಂಧೀಜಿಯವರು ಗುಡಿಕೈಗಾರಿಕೆಯಿಂದ ನಮ್ಮ ದೇಶ ಹೆಚ್ಚಿನ ಅಭಿವೃದ್ಧಿ ಕಾಣಲು ಸಾಧ್ಯ ಎಂದು ಪ್ರತಿಪಾದಿಸಿದರು.

ಮಹಾತ್ಮರವರು ಗುಡಿಕೈಗಾರಿಕೆಗಳು ನಮ್ಮ ದೇಶಕ್ಕೆ ಸೂಕ್ತವಾದವು ಎಂದು ತಮ್ಮ ಹೇಳಿಕೆಗಳಲ್ಲಿ ಸಾಕಷ್ಟು ಸಲ ವ್ಯಕ್ತಪಡಿಸಿದ್ದಾರೆ. "ಭಾರತದ ಆರ್ಥಿಕ ನೈತಿಕ ಪುನರುತ್ಥಾನಕ್ಕೆ ಕೈಯಲ್ಲಿ ನೂಲುವುದು, ನೇಯುವುದು ಅತಿದೊಡ್ಡ ಕಾಣಿಕೆ ಸಲ್ಲಿಸತೆಂಬಲ್ಲಿ ನನಗೆ ನಿಸ್ಸಂಶಯ ಅರ್ಧ ಬೇಸಾಯಕ್ಕೆ ಪೂರಕವಾಗಬಲ್ಲ ಸರಳ ಉದ್ಯೋಗವೊಂದು ನಮ್ಮ ಜನ ಕೋಟಿಗೆ ಬೇಕು."[೩] ಅದು ಗುಡಿಕೈಗಾರಿಕೆಗಳಿಂದಲೇ ಸಾಧ್ಯ ಎಂಬ ಸತ್ಯವನ್ನು ನಾವು ತಿಳಿದುಕೊಳ್ಳಬೇಕು ಎಂದು ಹೇಳಿದ್ದರು.

ಗಾಂಧೀಜಿಯವರು ತಮ್ಮ ಚಿಂತನೆಯಲ್ಲಿ ಗುಡಿಕೈಗಾರಿಕೆಗಳಿಗೆ ಹಾಗೂ ಮಹಿಳೆಯಯರಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಅವರು ತಮ್ಮ ಎಲ್ಲಾ ಬಾಷಣ ಹೇಳಿಕೆಗಳಲ್ಲಿ ಮುಖ್ಯವಾಗಿ ಚರ್ಚೆ ಮಾಡುವ ವಿಷಯಗಳೆಂದರೆ ಇವೆ ಆಗಿದ್ದವು.

ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿಯವರು ಗುಡಿಕೈಗಾರಿಕೆಗಳಿಗೆ ಕಾಯಕಲ್ಪ ನೀಡಿದ್ದಾರೆ. ವಿಶೇಷವಾಗಿ ಮಹಿಳೆಯರಲ್ಲಿ ಈ ಗುಡಿಕೈಗಾರಿಕೆಗಳ ಮಹತ್ವದ ಬಗ್ಗೆ ಆಂದೋಲನವನ್ನು ಹಮ್ಮಿಕೊಂಡಿದ್ದರು. ಮಹಿಳೆಯರಲ್ಲಿ ಈ ವೃತ್ತಿಯ ಸದುಪಯೋಗದ ಬಗ್ಗೆ ಹೇಳಿ ಬ್ರಿಟಿಷರ ವಸ್ತುಗಳ ವಿರುದ್ಧ ಅಹಿಂಸೆ ಸಮರವನ್ನು ಸಾರಿದರು. "ಸ್ವದೇಶಿವಸ್ತುಗಳನ್ನು ಬಳಸಿ, ವಿದೇಶಿ ವಸ್ತುಗಳನ್ನು ದಿಕ್ಕರಿಸಿ ಎಂಬ ಘೋಷಣೆಯನ್ನು ಹೊರಡಿಸಿದರು."[೪] ಇದಕ್ಕಾಗಿ ಗಾಂಧೀಜಿಯವರು ಗುಡಿಕೈಗಾರಿಕೆಯ ಪ್ರತಿರೂಪವಾದ ನೂಲುವ ಚಕ್ರವನ್ನು ಸ್ವಾತಂತ್ರ್ಯ ಧ್ವಜದಲ್ಲಿ ಸ್ಥಾಪಿಸಿ ಗುಡಿಕೈಗಾರಿಕೆಯ ಮಹತ್ವವನ್ನು ಜಗತ್ತಿಗೆ ಸಾರಿದರು. ಗಾಂಧೀಜಿಯವರು ಭಾರತದ ಸ್ವಾತಂತ್ರಕ್ಕಾಗಿ ಅಷ್ಟೇ ಹೋರಾಟ ಮಾಡಲಿಲ್ಲ. ಈ ಗುಡಿಕೈಗಾರಿಕೆಗಳ ಸ್ವಾತಂತ್ರ್ಯಕ್ಕಾಗಿ ಕೂಡ ಹೋರಾಟ ಮಾಡಿದ್ದಾರೆ.

ಸ್ವಾತಂತ್ರ್ಯಪೂರ್ವ ಗುಡಿಕೈಗಾರಿಕೆಗಳ ಸ್ಥಿತಿ ಕಂಡು ನೊಂದ ಮನಸ್ಸಿನಿಂದ ರಾಜಕೀಯ ಸ್ವಾತಂತ್ರ್ಯಕ್ಕೆ ಆರ್ಥಿಕ ಸ್ವಾತಂತ್ರ್ಯವೇ ತಳಹದಿ. ಆರ್ಥಿಕ ಸ್ವಾತಂತ್ರ್ಯಕ್ಕೆ ನಮ್ಮ ದೇಶದ ಸ್ಥಿತಿಗನುಸರಿಸಿ ಮುಖ್ಯವಾಗಿ ಈ ಗುಡಿಕೈಗಾರಿಕೆಗಳ ಮೂಲವೆಂದು ಜನತೆಯಲ್ಲಿ ಬಿತ್ತರಿಸಿದರು. ಗುಡಿಕೈಗಾರಿಕೆಗಳ ಪಾವಿತ್ರ್ಯತೆಯನ್ನು ಬಾಪೂಜಿಯವರು ದೇಶದ ತುಂಬಾ ಪಸರಿಸಿ ಇದರ ಮಹತ್ವಗಳನ್ನು ಸಾರಿ ಹೇಳಿದರು.

ಭಾರತದ ಆರ್ಥಿಕ ತಳಹದಿಯ ಹಬ್ಬಿಕೊಳ್ಳಬೇಕೆಂದರೆ, ಈ ಗುಡಿಕೈಗಾರಿಕೆಗಳು ಅವಶ್ಯವಾಗಿಬೇಕು. ಭಾರತದ ಬೆನ್ನೆಲುಬು ಆದ ಕೃಷಿಯು ಮುಂದುವರೆಯಲು ವೃತ್ತಿಗಳು ಬೇಕು. ಈ ವೃತ್ತಿಗಳಿಂದಲೇ ಕೃಷಿ ನಡೆಯಲು ಸಾಧ್ಯ. ಈ ಕೃಷಿಯಿಂದಲೇ ನಾವು ಇಂದು ಬದುಕುತ್ತಿದ್ದೇವೆ.

ವರ್ಷದಲ್ಲಿ ನಾಲ್ಕು ತಿಂಗಳು ನಮ್ಮ ಕೃಷಿ ದುಡಿಮೆ ಜನಕೋಟಿಗೆ. ಕೆಲಸವಿಲ್ಲದ ಕಾರಣ ನಿರುದ್ಯೋಗದಿಂದ ನರಳುತ್ತಿದ್ದಾರೆ. ಆ ಕೋಟಿಗಟ್ಟಲೆ ಜನರಿಗೆ ಅವರ ಬಿಡುವಿನ ವೇಳೆಯನ್ನು ಸದುಪಯೋಗಗೊಳಿಸುವ ನಿಟ್ಟಿನಲ್ಲಿ ಕೆಲಸ ನೀಡುವುದರಲ್ಲಿ ಈ ಗುಡಿಕೈಗಾರಿಕೆಗಳು ಮುಖ್ಯವಾಗಿ ಬೇಕು ಎಂಬ ಇಂಗಿತವನ್ನು ಗಾಂಧೀಜಿಯವರು ಹೊಂದಿದ್ದಾರೆ. ಮಹಿಳೆಯಾಗಲಿ ಪುರುಷನಾಗಲಿ ಲಕ್ಷಾಂತರ ಹಳ್ಳಿಗಳ ಹದಿಹರೆಯದ ವಯೋಮಿತದವರು ಗುಡಿಕೈಗಾರಿಕೆಗಳಲ್ಲಿ ದುಡಿಯಬೇಕು. ಇದರಿಂದ ದೇಶದ ಆರ್ಥಿಕಾಭಿವೃದ್ಧಿ ಪ್ರಗತಿ ಹೊಂದಲು ಸಾಧ್ಯವೆಂದು ಹೇಳಿದ್ದರು.

ಭಾರತವು ಸಂಪ್ರದಾಯಿಕ ಸಂಸ್ಕೃತಿಯನ್ನು ಹೊಂದಿರುವುದರಿಂದ ಬಹಳಷ್ಟು ಹೆಣ್ಣುಮಕ್ಕಳು ಕೆಲಸವಿಲ್ಲದೇ ಮನೆಯಲ್ಲಿ ಕಾಲ ಕಳೆಯುತ್ತಾರೆ. ಅಂತಹ ಸಮಯವನ್ನು ಸದುಪಯೋಗ ಮಾಡಿಕೊಳ್ಳುವ ಚಿಂತನೆಯನ್ನು ಗಾಂಧೀಜಿಯವರು ಹಲವಾರು ಭಾಷಣ ಹೇಳಿಕೆಗಳಲ್ಲಿ ವ್ಯಕ್ತಪಡಿಸಿದ್ದು, ಇಂದಿಗೂ ನಾವು ಅವರ ಬರಹಗಳಲ್ಲಿ ಗುರುತಿಸಬಹುದು.

ಗಾಂಧೀಜಿಯವರ ತಾತ್ವಿಕತೆ ದಾಖಲಾಗಿರುವ ಹಿಂದೆ ಸ್ವರಾಜ್ಯದಲ್ಲಿ ಯಂತ್ರಸಂಸ್ಕೃತಿಯನ್ನು ವಿರೋಧಿಸುತ್ತಾ ಗುಡಿಕೈಗಾರಿಕೆಗಳನ್ನು ಎಲ್ಲಾ ಹಳ್ಳಿನಗರಗಳಲ್ಲಿ ಸ್ಥಾಪಿಸುವುದು. ಎಲ್ಲಾ ದೃಷ್ಟಿಯಿಂದಲೂ ಅಗತ್ಯತೆಯಿಂದ ಎಂದು ಒತ್ತಿ ಹೇಳಿದ್ದರು. ಭಾರತದಲ್ಲಿ ಯಂತ್ರಗಳು ಹುಟ್ಟುಹಾಕುವ ಸಾಮಾಜಿಕ, ರಾಜಕೀಯ ಪ್ರಭಾವ ಪರಿಣಾಮವನ್ನು ಕುರಿತು ಹೇಳುವ ಗಾಂಧೀಜಿಯ ಮಾತುಗಳು ಸ್ವಾಗತಾರ್ಹವೆನಿಸಿದರೂ ಯಂತ್ರಗಳನ್ನು ವಿರೋಧಿಸುವುದನ್ನು ಒಪ್ಪಿಕೊಳ್ಳುವುದು. ಪುಸ್ತಕ ವಿದ್ಯಮಾನದ ಜನಜೀವನದಲ್ಲಿ ಕಷ್ಟವೆನಿಸುತ್ತದೆ. ಕೈಗಾರಿಕೆಗಳು ಸೃಷ್ಟಿಸುವ ಶೋಷಣೆಯ ಸ್ವರೂಪವನ್ನು ವಿರೋಧಿಸಬೇಕೆ ವಿನಃ ಯಂತ್ರಗಳನ್ನೆಲ್ಲಾ ಯಾಂತ್ರಿಕರಣವಾಗುವ ಮನಃಸ್ಥಿತಿಗಳನ್ನು ಬಂಡವಾಳ ಶಕ್ತಿಗಳನ್ನು ಪಟ್ಟಭದ್ರಾಹಿತಾ ಶಕ್ತಿಗಳು ವಿರೋಧಿಸಬೇಕೆ ಹೊರತು ಯಂತ್ರಗಳಿಂದ ಮಾನವ ಸಮಾಜಕ್ಕೆ ಆಗುವ ಒಳಿತನ್ನೆಲ್ಲಾ ಕಾರ್ಖಾನೆಗಳಲ್ಲಿ ಸಾಮೂಹಿಕವಾಗಿ ಉತ್ಪಾದಕ ಚಟುವಟಿಕೆಗಳು ನಡೆಯುತ್ತಿರುತ್ತದೆ. ಬಂಡವಾಳಗಾರ ವರ್ಗವು ಉತ್ಪಾದನೆಯ ಮೇಲೆ ವೈಯಕ್ತಿಕ ಒಡೆತನವನ್ನು ಹೊಂದಿರುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ಸಂಬಂಧ ಬಾಹುಗಳ ಉತ್ಪತ್ತಿ ಮಾಡುವ ಕ್ರೂರ ವ್ಯವಸ್ಥೆಯನ್ನು ಮನುಷ್ಯ ಪರವಿರುವ ಯಾರಾದರೂ ಖಂಡಿಸಲೇಬೇಕು ಈ ಹಿನ್ನೆಲೆಯಲ್ಲಿ ಗಾಂಧೀಜಿಯ ಸಂವೇದನಾಯಂತ್ರ ನಾಗರಿಕತೆಯನ್ನು ವಿರೋಧಿಸಿದ್ದೆಂಬುದನ್ನು ಮನಗಾಣಬೇಕು.

ಮಹಾತ್ಮ ಗಾಂಧೀಜಿಯವರು ಯಾಂತ್ರಿಕರಣವನ್ನು ವಿರೋಧಿಸುತ್ತಿರಲಿಲ್ಲ. ಅವು ಎಲ್ಲಿ ಬಳಕೆಯಾಗಬೇಕು, ಅಲ್ಲಿ ಮಾತ್ರ ಆಗಬೇಕು. ಮಾನವ ಸಂಪನ್ಮೂಲದ ಶ್ರಮ ಶಕ್ತಿಯನ್ನು ಅವನ ಉದ್ಯೋಗವನ್ನು ಈ

ಯಂತ್ರಗಳು ಕಸಿದುಕೊಳ್ಳಬಾರದು ಎಂಬ ಚಿಂತನೆಯನ್ನು ಗಾಂಧೀಜಿಯವರು ಹೊಂದಿದ್ದರು. ಮಾಡಬೇಕೆಂದಿರುವ ಕೆಲಸಕ್ಕೆ ತೀರಾ ಕೆಲವೇ ಕೈಗಳಿರುವಾಗ ಯಾಂತ್ರಿಕರಣ ಒಳ್ಳೆಯದು ಭಾರತದಲ್ಲಿ ಮಾಡಬೇಕಾದ ಕೆಲಸಕ್ಕೆ ಬೇಕಿರುವುದಕ್ಕಿಂತ ಹೆಚ್ಚು ಕೈಗಳಿರುವಾಗ ಅದೊಂದು ಅನಿಷ್ಟ ಎಂಬ ಚಿಂತನೆಯನ್ನು ಕೂಡ ಹೊಂದಿದ್ದರು.

ಯಾಂತ್ರಿಕರಣದಲ್ಲಿ ಒಬ್ಬ ಮಾಡುವ ಕೆಲಸ ಗುಡಿಕೈಗಾರಿಕೆಗಳಲ್ಲಿ ಮಾಡುವ ಹತ್ತು ಮಂದಿಯ ಕೆಲಸವನ್ನು ಬಲಿ ತೆಗೆದುಕೊಳ್ಳುತ್ತದೆ. ಬದುಕಿನ ಬಾರಿ ಸಾಧನವನ್ನು ಕಸಿದುಕೊಳ್ಳುತ್ತದೆ. ಹೀಗಾಗಿ ಹೆಚ್ಚಿನ ಜನಸಂಖ್ಯೆಯುಳ್ಳ ಭಾರತ ದೇಶಕ್ಕೆ ಕಡಿಮೆ ಬಂಡವಾಳ ಹೊಂದಿರುವ ಗುಡಿಕೈಗಾರಿಕೆಗಳು ಸೂಕ್ತವಾಗುತ್ತವೆ ಎಂಬ ಚಿಂತನೆಯನ್ನು ಹೊಂದಿದ್ದರು.

ಈ ಗುಡಿಕೈಗಾರಿಕೆಗಳಲ್ಲಿ ಯಾರೂ ಶ್ರಮವಹಿಸಿ ದುಡಿಯುತ್ತಾರೆ. ಅವರಿಗೆ ಅದರ ಪ್ರತಿಫಲ ಸಿಗುತ್ತದೆ. ಆದರೆ ಕಾರ್ಖಾನೆಗಳಲ್ಲಿ ಬಂಡವಾಳ ಹಾಕುವರು. ಶ್ರೀಮಂತರು ಅದರ ಲಾಭ ಪಡೆದುಕೊಳ್ಳುವರು. ಶ್ರೀಮಂತರೇ ಇದರಲ್ಲಿ ನಷ್ಟವಾಗುವುದು ಬಡವರಿಗೆ. ಇದರಿಂದ ಬಡವರು ಇನ್ನಷ್ಟು ಬಡವರಾಗುತ್ತಾರೆ. ಆಗ ಅಂತರ್ ಸಮಸ್ಯೆಗಳು ತಲೆದೂರಿ ವರ್ಗ ಸಂಘರ್ಷ ಪ್ರಾರಂಭವಾಗಬಹುದೆಂದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಗುಡಿಕೈಗಾರಿಕೆಗಳು ಇದ್ದರೆ ಸುಲಭವಾಗಿ ಎಲ್ಲರಿಗೂ ಕೆಲಸವೂ ಇರುತ್ತದೆ. ಆಗ ಬಂಡವಾಳಶಾಹಿಯ ನೆರಳು ಭಾರತದಲ್ಲಿ ನೆಲೆಗೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಗಾಂಧೀಜಿಯವರ ಅನಿಸಿಕೆಯಾಗಿತ್ತು.

೭. ಕೈಗಾರೀಕಿಕರಣ ಮತ್ತು ಗುಡಿಕೈಗಾರಿಕೆ

ನಿಸರ್ಗದ ಸಹಚರನಾಗಿದ್ದ ಮಾನವ ಆರಂಭದಲ್ಲಿ ತನ್ನ ಅಗತ್ಯಗಳನ್ನು ಸ್ವಶಕ್ತಿಯಿಂದಲೇ ಪೂರೈಸಿಕೊಳ್ಳುತ್ತಿದ್ದನು. ತಮಗೆ ಅಗತ್ಯವಿದ್ದ ಜೀವನೋಪಯೋಗಿ ಪರಿಕರಗಳನ್ನು ತನ್ನ ಕಲಾತ್ಮಕತೆಯಿಂದ, ನೈಪುಣ್ಯತೆಯಿಂದ ತಯಾರಿಸಿಕೊಳ್ಳುತ್ತಿದ್ದನು. ಅಲ್ಲದೆ ನೆರೆಹೊರೆಯವರ ಬೇಡಿಕೆಗಳನ್ನು ಪೂರೈಸುತ್ತಿದ್ದನು. ಆಗ ತಯಾರಿಕರ ಮತ್ತು ಬೇಡಿಕೆದಾರರ ಗುಂಪುಗಳು ತಲೆ ಎತ್ತಿದ್ದವು. ಬೇಡಿಕೆದಾರ ಅಪೇಕ್ಷೆಗನುಗುಣವಾಗಿ ತಯಾರಿಕರ ಕೌಶಲ್ಯ, ಸಾಮರ್ಥ್ಯಗಳು, ಪೂರಕವಾಗಿ ಗುಡಿಕೈಗಾರಿಕೆಗಳು ಹುಟ್ಟಿಕೊಂಡವು. ಬೇಡಿಕೆದಾರರ ಅಗತ್ಯ ಅಭಿರುಚಿ ಹಾಗೂ ತಯಾರಿಕರ ಸಾಮರ್ಥ್ಯ ಮತ್ತು ಚಾಣ್ಮೆ ಸೇರಿ ಶ್ರೇಷ್ಠ ಮಟ್ಟದ ಉತ್ಪನ್ನಗಳಿಗೆ ನಾಂದಿಯಾಯಿತು. ಆದರೆ ಆ ಉತ್ಪನ್ನಗಳು ಸಮಾಜದ ಎಲ್ಲಾ ಜನರಿಗೆ ಕೈಗೆ ನಿಲುಕುವಂತಿರಲಿಲ್ಲ. ಉತ್ಪನ್ನಗಳ ತಯಾರಿಕೆಯ ಕಾಲ ದೀರ್ಘವಾಗಿರುತ್ತಿತ್ತು. ಆಗ ಸ್ಥಳೀಯ ಬೇಡಿಕೆಗಳ ಪೂರೈಕೆಗನುಗುಣವಾಗಿ ಉತ್ಪಾದನೆಯನ್ನು ಅಧಿಕಗೊಳಿಸುವ ಹಲವು ಸರಳ ಯಂತ್ರೋಪಕರಣಗಳೂ ರೂಪಗೊಂಡು ಬೆಳಕಿಗೆ ಬಂದವು. ಆದರೆ ಅವನ್ನು ಮಾನವನಶಕ್ತಿ ಅಥವಾ ಪಶುಶಕ್ತಿ ಬಳಕೆಯಿಲ್ಲದೆ ನಡೆಸಲು ಸಾಧ್ಯವಾಗುವಂತಹ ಅನ್ಯಶಕ್ತಿಗಳ ಮೂಲಗಳು ಬಹಳ ವರ್ಷಗಳವರೆಗೂ ಶೋಧವಾಗಿರಲಿಲ್ಲ. ಆದರೆ ದಿನಗಳುರುಳಿದಂತೆ

ಉಗಿಶಕ್ತಿ, ಅಂತರ್ದಹನಶಕ್ತಿ ಮತ್ತು ವಿದ್ಯುಚ್ಛಕ್ತಿ ಇವುಗಳ ಶೋಧದ ನಂತರ ಗುಡಿಕೈಗಾರಿಕೆಗಳನ್ನು ಮೂಲೆಗುಂಪುಮಾಡಿ ಬಂಡವಾಳಶಾಹಿ ಕಾರ್ಖಾನೆ ಕೈಗಾರಿಕೆಗಳಿಗೆ ನಾಂದಿ ಮಾಡಿ ಕೊಟ್ಟಿತು.

೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಬ್ರಿಟನ್ನಿನ ಕೈಗಾರಿಕ ನೀತಿಯು ಶೀಘ್ರ ಬೆಳವಣಿಗೆ ಪಡೆದುದರ ಫಲವಾಗಿ ಕೈಗಾರಿಕ ಆರ್ಥಿಕ ಹಾಗೂ ರಾಜಕೀಯ ನೆಲೆಗಳು ಧೃಡಗೊಂಡವು.

ಭಾರತವನ್ನು ಮೊಟ್ಟಮೊದಲನೆಯದಾಗಿ ಬ್ರಿಟನ್ನಿನ ಕೈಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆಯನ್ನಾಗಿ ಹಾಗೂ ಬ್ರಿಟನ್ನಿನ ಕೈಗಾರಿಕೆಗಳಿಗಾಗಿ ಕಚ್ಚಾ ಪದಾರ್ಥಗಳ ಆಕರವನ್ನಾಗಿ ಎಲ್ಲಾ ರೀತಿಯಿಂದ ಅನುಕೂಲಕರ ವ್ಯವಸ್ಥೆಯನ್ನು ನಿರ್ಮಾಣ ಮಾಡಿಕೊಂಡರು. ಈ ಕೈಗಾರಿಕ ಬಂಡವಾಳವು ಭಾರತದ ಜನತೆಗಳ ವಸಾಹತು ಶೋಷಣೆಯ ಪದ್ಧತಿಯಲ್ಲಿ ಹೊಸ ಅಂಶಗಳನ್ನು ಜಾರಿಗೆ ತಂದಿತು.

ಇಡೀ ಜಗತ್ತಿಗೆ ಹತ್ತಿ ಬಟ್ಟೆಗಳನ್ನು ಮತ್ತು ಗುಡಿಕೈಗಾರಿಕೆ ವಸ್ತುಗಳನ್ನು ರಫ್ತು ಮಾಡುತ್ತಿದ್ದ ಭಾರತ ೧೯ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ವಸ್ತುಗಳ ಆಮದು ರಾಷ್ಟ್ರವಾಗಿ ಪರಿವರ್ತಿತವಾಯಿತು. ಮತ್ತು ಬ್ರಿಟಿಷ್ ಕೈಗಾರೀಕಿಕರಣ ರಫ್ತುಗಳನ್ನು ಗಣನೀಯವಾಗಿ ಸ್ವೀಕರಿಸತೊಡಗಿತು.

ಉದಾ ಗುಡಿಕೈಗಾರಿಕೆಗಳಲ್ಲಿ ಹತ್ತಿಬಟ್ಟೆಗಳ ಮೋಹಕ ತಯಾರಿಕೆ ಕರ್ಮಗಾರ ಎಂದು ಕರೆದಂತೆ ಭಾರತ ನಂತರ ಬ್ರಿಟಿಷ್ ಕೈಗಾರಿಕರಣದ ಹತ್ತಿಬಟ್ಟೆಗಳ ಮಹಾಪುರದಿಂದ ತುಂಬಿತು. ಇದರಿಂದ ಭಾರತದ ನಗರ ಹಾಗೂ ಗ್ರಾಮೀಣ ಗುಡಿಕೈಗಾರಿಕೆಗಳ ಉತ್ಪಾದನೆಯು ನಾಶವಾಗತೊಡಗಿತು. ಆದರೆ ಅದರ ಸ್ಥಳದಲ್ಲಿ ಬೇರೆ ಹೊಸ ಉತ್ಪಾದನಾ ರೂಪಗಳು ಅಸ್ಥಿತ್ವದಲ್ಲಿರಲಿಲ್ಲ. ಹಾಗಾಗಿ ಭಾರತವು ಬ್ರಿಟನ್ನಿನ ಕೈಗಾರೀಕಿಕರಣದ ತಯಾರಿಕಾ ವಸ್ತುಗಳಿಗೆ ಮಾರುಕಟ್ಟೆಯಾಗಿ ಪರಿವರ್ತಿತವಾಯಿತು.

ಕೈಗಾರೀಕಿಕರಣ ವಸಾಹತು ಸ್ವಾಮ್ಯ ದೇಶಕ್ಕೆ ಕಚ್ಚಾ ಸಾಮಗ್ರಿಗಳನ್ನು ಸರಬರಾಜು ಮಾಡುವ ದೇಶವಾಗಿ ಕ್ರಮೇಣ ಪರಿವರ್ತಿತವಾಗುತ್ತಿದ್ದಿತು. ಈ ಪ್ರಕ್ರಿಯೆಯು ದೇಶವನ್ನು ಕೊನೆಯದಾಗಿ ಕೈಗಾರಿಕಾ ಬಂಡವಾಳಕ್ಕೆ ಪೂರ್ಣಗೊಳಿಸಿತು.

ಕೈಗಾರೀಕಿಕರಣ ವಸ್ತುಗಳಿಗೆ ಮಾರುಕಟ್ಟೆಯನ್ನಾಗಿ ಮಾಡುವ ಮೂಲಕ ಬ್ರಿಟಿಷರು ಗ್ರಾಮಸಮುದಾಯಗಳಲ್ಲಿದ್ದ ಗುಡಿಕೈಗಾರಿಕೆಗಳ ಮತ್ತು ಕೃಷಿ ನಡುವೆ ಅಸ್ಥಿತ್ವದಲ್ಲಿದ್ದ ಸಾವಯವ ಸಂಬಂಧವನ್ನು ಶಿಥಲಗೊಳಿಸಿದರು. ಇದಕ್ಕೆ ಮೊದಲು ಈಸ್ಟ್ ಇಂಡಿಯಾ ಕಂಪನಿಯು ವಸಾಹತುಶಾಹಿಗಳ ಆಕ್ರಮಣದ ಕಾಲದಲ್ಲಿ ನಗರಗಳಲ್ಲಿದ್ದ ಗುಡಿಕೈಗಾರಿಕೆಗಳ ಪಾರಂಪರಿಕ ಮಾರುಕಟ್ಟೆಯನ್ನು ಕಸಿದುಕೊಳ್ಳಲಾಗಿತ್ತು. ಮತ್ತು ಅಗ್ಗದ ಕೈಗಾರಿಕೆ ವಸ್ತುಗಳನ್ನು ಆಮದು ಮಾಡಿಕೊಳ್ಳತೊಡಗಿದರಿಂದ ನಗರಗಳ ಗುಡಿಕೈಗಾರಿಕೆ ಉತ್ಪಾದನೆಯು ಕುಗ್ಗಿತು. ಹಾಗಾಗಿ ನಗರ ಹಾಗೂ ಗ್ರಾಮೀಣದಲ್ಲಿ ಗುಡಿಕೈಗಾರಿಕೆಗಳು ನಶಿಸತೊಡಗಿದವು. ಅದಕ್ಕನುಗುಣವಾಗಿ ಗುಡಿಕೈಗಾರಿಕೆಗಳ ಉತ್ಪಾದನೆ ಪೂರ್ಣ ಕುಂಠಿತಗೊಳ್ಳತೊಡಗಿದವು. ಇದರಿಂದ

ಗ್ರಾಮಾಂತರ ಜನಸಂಖ್ಯೆ ಅತಿಯಾಗಿ ಹೆಚ್ಚುವುದಕ್ಕೆ ಅಡಿಪಾಯ ಹಾಕಿಕೊಟ್ಟಂತಾಯಿತು. ಇದೇ ಜನಸಂಖ್ಯೆ ಅನಂತರ ದೇಶದ ಆರ್ಥಿಕೊನ್ನೋತಿಗೆ ಮುಖ್ಯ ಅಡಚಣೆಗಳಲ್ಲೊಂದಾಯಿತು.

ಸ್ವಾತಂತ್ರ್ಯನಂತರ ಭಾರತವು ಕೈಗಾರಿಕಾನೀತಿ ಅಳವಡಿಸಿಕೊಳ್ಳಲು ಪ್ರಾರಂಭಮಾಡಿತು. ಅಭಿವೃದ್ಧಿಯ ಕನಸು ಹೊತ್ತು ರಾಷ್ಟ್ರನಾಯಕರುಗಳು. ಕೈಗಾರೀಕಿಕರಣಕ್ಕೆ ವಿಶೇಷ ಮಹತ್ವವನ್ನು ನೀಡತೊಡಗಿದರು. ಇದಕ್ಕೆ ರೂಪ ನೀಡಿದವರು ಕೈಗಾರಿಕ ಶಿಲ್ಪಿಯಾದ ಸರ್.ಎಂ. ವಿಶ್ವೇಶ್ವರಯ್ಯನವರು ಭಾರತ ಮುಂದುವರೆದ ರಾಷ್ಟ್ರವಾಗಬೇಕಾದರೆ, ಕೈಗಾರಿಕಾನೀತಿಯನ್ನು ಅಳವಡಿಸಿಕೊಳ್ಳಲೇಬೇಕು ಎಂಬ ನಿಲುವನ್ನು ತಾಳಿದ್ದರು. ಇದಕ್ಕೆ ಪ್ರೋತ್ಸಾಹಿಸಿದವರು. ಭಾರತದ ಪ್ರಥಮ ಪ್ರಧಾನಮಂತ್ರಿಯಾದ ಜವಹಾರಲಾಲ್ ನೆಹರುರವರು ವಿಶೇಷ ಮಹತ್ವವನ್ನು ನೀಡಿದರು.

ಕೈಗಾರೀಕರಣದ ಪ್ರಾಬಲ್ಯದಿಂದ ಯೋಜನೆಗಳು ಸೃಷ್ಟಿಗೊಂಡವು. ರಷ್ಯಾ ದೇಶದ ಮಾದರಿಯಲ್ಲಿ ಈ ಯೋಜನೆಗಳ ಮುಖಾಂತರ ಕೈಗಾರಿಕಾ ನೀತಿಯನ್ನು ಅಳವಡಿಸಿಕೊಂಡರು ಮತ್ತು ಅದರ ಸ್ಥಾಪನೆಗೆ ಚಾಲನೆ ನೀಡಿದರು. ಇದರಿಂದ ಮೊದಲೇ ಬಳಲಿ ಬೆಂಡಾಗಿದ್ದ ಗುಡಿಕೈಗಾರಿಕೆಗಳು ಅವಸ್ಥೆ ಹೇಳುವಂತಿರಲಿಲ್ಲ. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯ ಬಲವಾದ ಪೆಟ್ಟನ್ನು ಎದುರಿಸಲಾರದೆ ತೊಳಲಾಡುತ್ತಿದ್ದ ಗುಡಿಕೈಗಾರಿಕೆಗಳಿಗೆ ಸ್ವದೇಶದಲ್ಲಿ ನಿರ್ಮಿಸುವ ಕೈಗಾರಿಕೆಗಳು ನುಂಗಲಾರದ ಬಿಸಿತುಪ್ಪವಾಗಿ ಪರಿಣಮಿಸಿದವು. ಕೈಗಾರೀಕರಣ ಪ್ರಾರಂಭವಾದಂತೆ ಕಾರ್ಖಾನೆಗಳಲ್ಲಿ ಒಂದೊಂದು ವಸ್ತುಗಳು ಉತ್ಪಾದನೆಯಾದ ಹಾಗೆ ಒಂದೊಂದು ಗುಡಿಕೈಗಾರಿಕೆಗಳು ಸ್ಥಗಿತಗೊಳ್ಳಲು ಪ್ರಾರಂಭಿಸಿದವು. ಅಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಪುರುಷಾ ವೃತ್ತಿ ಪರರು ತಮ್ಮ ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾದರು. ಇದರಿಂದ ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನಗಳು ಅರ್ಥ ಕಳೆದು ಕೊಳ್ಳತೊಡಗಿದವು. ಈ ವೃತ್ತಿಯನ್ನೇ ನಂಬಿದ್ದ ಕುಟುಂಬಗಳು ಬೀದಿ ಪಾಲಾದವು. ಬಹಳಷ್ಟು ವೃತ್ತಿಪರರು ಒಂದು ಹೊತ್ತಿನ ಊಟಕ್ಕೆ ಆಶ್ರಯವಿಲ್ಲದೆ ಉಪವಾಸ ಬೀಳಬೇಕಾಯಿತು.

ಕೈಗಾರಿಕರಣದಿಂದ ಗುಡಿಕೈಗಾರಿಕೆಗಳು ನಶಿಸುವುದರಿಂದ ಜನರು ವಲಸೆ ಹೋಗಲು ಪ್ರಾರಂಭಿಸಿದರು. ಆದರೆ ಮಹಿಳೆ ಮನೆಯಲ್ಲಿ ಇದ್ದು ಕುಟುಂಬದ ಜವಬ್ದಾರಿ ಹೊತ್ತು ಆಗುಹೋಗುಗಳು ನೋಡಿಕೊಳ್ಳಬೇಕು. ಇದರಿಂದ ಮಹಿಳೆಯು ಹಲವಾರು ಕಷ್ಟ ಕೋಟಲೆಗಳನ್ನು ಎದುರಿಸಬೇಕಾಗುತ್ತದೆ. ಆದರೆ ಇದೆ ಮಹಿಳೆಯರು ಕಾರ್ಖಾನೆಗಳಲ್ಲಿ ಕೆಲಸ ಮಾಡಬೇಕೆಂದರೆ ತಾಂತ್ರಿಕ ತರಬೇತಿ ಇಲ್ಲ, ನೈಪುಣ್ಯತೆ ಇಲ್ಲ. ಹಾಗೂ ರಾತ್ರಿ ಸಮಯದಲ್ಲಿ ಕಾರ್ಖಾನೆಗಳಲ್ಲಿ ಉತ್ಪಾದನಾಕ್ರಿಯೆಯು ನಿರಂತರವಾಗಿ ನಡೆಯುವುದರಿಂದ ಅದರಲ್ಲಿ ಮಹಿಳೆಯರಿಗೆ ಕಾರ್ಖಾನೆಗಳಲ್ಲಿ ಉದ್ಯೋಗವನ್ನು ನಿಷೇಧಿಸಿದ.

ಯಾಂತ್ರಿಕ ಯುಗದಿಂದ ಜೀವನ ವೃತ್ತಿ ಕಳೆದುಕೊಂಡ ಗುಡಿಕೈಗಾರಿಕೆಗಳ ವೃತ್ತಿಪರರು. ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಹೋಗುತ್ತಾರೆ. ಅಲ್ಲಿ ಕೆಲಸ ಸಿಗುವುದು ಕಷ್ಟವಾದದ್ದೆ, ಸಿಕ್ಕರು ಅವರಿಗೆ ಸಿಗುವ ವೇತನ

ಬಹಳ ಕಡಿಮೆ. ಇದರಿಂದ ಅವರ ಜೀವನ ಮಟ್ಟ ಕುಸಿಯುತ್ತದೆ. ಹಾಗಾಗಿ ಅನೇಕ ಸಲ ದುಷ್ಟಟಗಳಿಗೆ ಬಲಿಯಾಗಬಹುದು. ಇದರಿಂದ ಅವರ ಜೀವನ ಅನೇಕ ರೀತಿಯಲ್ಲಿ ತೊಂದರೆಗೆ ಒಳಗಾಗುತ್ತಿದೆ. ಹಾಗಾಗಿ ನೆಮ್ಮದಿ ಕಳೆದುಕೊಂಡು ಅತಂತ್ರ ಸ್ಥಿತಿಯಲ್ಲಿ ಬದುಕು ದುರ್ಬಲವಾಗುತ್ತದೆ. ಆದರೆ ಇದೇ ಬಡವರ ತಮ್ಮ ಸ್ವಂತ ಗುಡಿಕೈಗಾರಿಕೆಗಳಲ್ಲಿ ದುಡಿಯುವಾಗ ಸ್ವಂತ ಸಂಪಾದನೆಯಿಂದ ಸ್ವಲ್ಪ ಮಟ್ಟಿಗೆ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರು. ಅವರ ದೈನಂದಿನ ಜೀವನ ಅಗತ್ಯದ ಆಧಾರವಾದ ಗುಡಿಕೈಗಾರಿಕೆಗಳಿಂದ ಬಂದಷ್ಟರಲ್ಲಿಯೇ ತೃಪ್ತಿಯಿಂದ ಜೀವನ ನಡೆಸುತ್ತಿದ್ದರು. ಆದರೆ ಕೈಗಾರಿಕಣವು ಎಲ್ಲವನ್ನು ಹದೆಗಡಿಸಲು ಪ್ರಾರಂಭಿಸಿತು. ಗಾಯದ ಮೇಲೆ ಉಪ್ಪು ಸವರಿದಂತೆ ೧೯೯೧ ರ ನಂತರ ಕೈಗಾರೀಕರಣ ಬೆಳವಣಿಗೆಯಲ್ಲಿ ಹೊಸ ಕ್ರಾಂತಿಯನ್ನು ಮಾಡತೊಡಗಿತು. ಇದರಲ್ಲಿ ಜಾಗತೀಕರಣದಿಂದ ಉಗಮಗೊಂಡ ಹಲವಾರು ಕೈಗಾರಿಕೆಗಳು ಇನ್ನು ಅಳಿದುಳಿದ ಗುಡಿಕೈಗಾರಿಕೆಗಳನ್ನು ಅವಿನಾಶದಡೆಗೆ ತಳ್ಳುತ್ತಿವೆ.

ಕೈಗಾರೀಕಿರಣದಿಂದ ಉತ್ಪಾದನೆ ಹೆಚ್ಚಾಗುತ್ತದೆ. ಆದರೆ, ಬಡತನ ಹೋಗುವುದು ಸಾಧ್ಯವಿಲ್ಲ. ಬಡವರು ಮತ್ತಷ್ಟು ಬಡವರಾಗುತ್ತಾರೆ. ವಿನಃ ಮತ್ತೇನು ಆಗುವುದಿಲ್ಲ. ಆದರೆ ಗುಡಿಕೈಗಾರಿಕೆಗಳು ಇದ್ದರೆ ತಮ್ಮ ಕೆಲಸವನ್ನು ತಾವು ಮಾಡಿಕೊಂಡು ಶ್ರೀಮಂತರಾಗದಿದ್ದರೂ ಆದಷ್ಟು ಮಟ್ಟಿಗೆ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರು. ಒಂದು ಹೊತ್ತಿನ ಊಟವಾದರೂ ಬಡಜನರು ನೆಮ್ಮದಿಯಿಂದ ಮಾಡುವರು.

ಸಮಾಜದಲ್ಲಿ ಕೈಗಾರೀಕರಣ ಖಾಸಗೀಕರಣ, ಉದಾರಿಕೀಕರಣ, ಜಾಗತೀಕರಣ ಹಾಗೂ ಯಾವುದೇ ಹೊಸ ತಂತ್ರಜ್ಞಾನವಾಗಲಿ ಅದು ಮೊದಲು ನೇರ ಪರಿಣಾಮ ಬೀರುವುದು ಮಹಿಳೆಯ ಮೇಲೆಯ.

ಕೈಗಾರೀಕಿಕರಣ ಮತ್ತು ಯಾಂತ್ರಿಕರಣ ವಿಭಿನ್ನ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳು ಮಹಿಳೆಯ ಗುಡಿಕೈಗಾರಿಕೆ ವೃತ್ತಿಪರರ ಮೇಲೆ ತೀವ್ರಪರವಾದ ಪರಿಣಾಮವನ್ನುಂಟುಮಾಡುತ್ತಿದೆ. ಅಷ್ಟೇ ಅಲ್ಲ ಆರ್ಥಿಕವಾಗಿ ಅವರ ಬದುಕಿನಲ್ಲಿ ಗಂಭೀರವಾದ ಸುಳಿಗಳನ್ನುಂಟುಮಾಡುತ್ತಿದೆ. ಬದಲಾವಣೆಗಳಿಂದ ಕಂಡುಬರುವ ಮುಖ್ಯ ಅಂಶವೆಂದರೆ ಹಿಂದೆ ಅವರಿಗಿದ್ದ ಅಲ್ಪ ಸ್ವಲ್ಪ ಸವಲತ್ತುಗಳ ಇಲ್ಲವಾಗುತ್ತಿವೆ. ಅಷ್ಟೆ ಅಲ್ಲದೆ ಇಂದು ಅವರು ಎದುರಿಸುತ್ತಿದ್ದ ಸಮಸ್ಯೆಗಳ ಜೊತೆಗ ಹೊಸ ಸಮಸ್ಯೆಗಳು ಸೇರಿಕೊಂಡು ಅವರ ಬದುಕು ಮತ್ತಷ್ಟು ಕಷ್ಟದಾಯಕವಾಗುತ್ತಿದೆ.

ಇಂದು ಕೈಗಾರೀಕಿಕರಣವು ಅಭಿವೃದ್ಧಿಯ. ಹೆಸರಿನಲ್ಲಿ ದೊಡ್ಡ ದೊಡ್ಡ ಬೃಹತ್ ಕಂಪನಿಗಳನ್ನು ಬೆಳೆಸುವುದೇ ಆಗಿದೆ. ಹಾಗೂ ಶ್ರೀಮಂತರನ್ನು ಮೇಲ್ ವರ್ಗದವರನ್ನು ಮೇಲೆತ್ತುವುದು. ಅವರಿಗೆ ಬೇಕಾದ ಸರಕುಗಳನ್ನು ಉತ್ಪಾದಿಸುವುದು ಹಾಗೂ ಕೈಗಾರೀಕರಣವನ್ನು ಮುನ್ನಡೆಸುವುದು ಇಂದು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿದೆ. ಈ ಅಭಿವೃದ್ಧಿಯ ವ್ಯಾಖ್ಯೆಯಲ್ಲಿ ವೃತ್ತಿಪರ ಕಾರ್ಯಕ್ರಮಗಳಿಗೆ ಸರಕಾರವು ಮಹಿಳೆಯನ್ನು ಉತ್ತಮಗೊಳಿಸುವ ಕಾರ್ಯಕ್ರಮಗಳಿಗೆ ಸರಕಾರವು ಯಾವುದೇ ರೀತಿಯಿಂದ ಹೆಚ್ಚಿನ ಮಟ್ಟಿಗೆ ಪ್ರೋತ್ಸಾಹ ಕಂಡುಬರುವುದಿಲ್ಲ.

ಕೈಗಾರೀಕಿಕರಣದ ವಸ್ತುಗಳು ಬಂದ ಮೇಲೆ ಎಲ್ಲಾ ಪ್ರದೇಶಗಳಲ್ಲಿ ಗುಡಿಕೈಗಾರಿಕೆಗಳು ಅವಿನಾಶದ ಅಂಚಿಗೆ ಬಂದು ನಿಂತಿವೆ. ಕಡಿಮೆ ಬೆಲೆಗೆ ಸಿಗುವ ಕಾರ್ಖಾನೆ ವಸ್ತುಗಳ ಮುಂದೆ ಗುಡಿಕೈಗಾರಿಕೆ ವಸ್ತುಗಳು ಸಾಟಿಯಿಲ್ಲದಂತಾದವು. ಆದರೆ ಗುಣಮಟ್ಟದಲ್ಲಿ ತಮ್ಮ ಶ್ರೇಷ್ಠತೆಯನ್ನು ಉಳಿಸಿಕೊಂಡು ಬಂದಿವೆಯಾದರೂ ಅಧಿಕ ಬೆಲೆಯಿಂದ ಅವುಗಳ ಬೇಡಿಕೆ ಕಡಿಮೆಯಾದದ್ದರಿಂದ ಮಹಿಳೆಯರು ಉತ್ಪಾದಿಸುವ ಗುಡಿಕೈಗಾರಿಕೆಗಳೆಲ್ಲವು ನಷ್ಟವನ್ನೆದುರಿಸುತ್ತಿದ್ದಾರೆ. ವಂಶಪಾರಂಪರ್ಯವಾಗಿ ಕುಟುಂಬಗಳಲ್ಲಿಯ ಮಹಿಳೆಯರು ಈ ಗುಡಿಕೈಗಾರಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಕಾರ್ಖಾನೆ ವಸ್ತುಗಳ ಬರತೊಡಗಿದಾಗ ಮಹಿಳೆಯರು ಪಾಲ್ಗೊಳ್ಳುವ ಈ ಗುಡಿಕೈಗಾರಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಕಾರ್ಖಾನೆ ವಸ್ತುಗಳು ಬರತೊಡಗಿದಾಗ ಮಹಿಳೆಯರು ಪಾಲ್ಗೊಳ್ಳುವ ಈ ಗುಡಿಕೈಗಾರಿಕೆಗಳು ಮೂಲೆ ಗುಂಪಾಗತೊಡಗಿವೆ. ದೇಶದ ಅಭಿವೃದ್ಧಿ ಸಾಧಿಸುವ ಅವಸರದಲ್ಲಿ ಕೈಗಾರೀಕಿರಣ ಉದಾರೀಕಿರಣಗಳ ಪರಿಣಾಮದಿಂದ ಇಂದು ಗುಡಿಕೈಗಾರಿಕೆಗಳ ವೃತ್ತಿ ಕಳೆದುಕೊಂಡು ಜನರು ಕಂಗಾಲಾಗಿದ್ದಾರೆ. ಆದರೂ ದೇಶದ ಆರ್ಥಿಕ ಬೆಳವಣಿಗೆಯನ್ನು ಹೊಂದಲು ಈ ಗುಡಿಕೈಗಾರಿಕೆಗಳು ಎಲ್ಲಕ್ಕಿಂತ ಸೂಕ್ತವಾಗಿ ಹೊಂದಿಕೆ ಆಗುತ್ತವೆ. ಈ ಕೆಳಗಿನ ಅಂಶದಿಂದ ನೋಡಬಹುದು.

ಇದು ಬಂಡವಾಳವನ್ನು ಸಂಪನ್ಮೂಲಗಳನ್ನು ಒಂದುಗೂಡಿ ಬಳಸುತ್ತದೆ. ಅಂದರೆ ಅದು ಒಂದು ಕಡೆ ನಿರುದ್ಯೋಗವನ್ನು ಅರೆ ಉದ್ಯೋಗವನ್ನು ತೊಡೆದು ಹಾಕಲು ನೇರವಾಗುತ್ತದೆ. ಮತ್ತೊಂದು ಕಡೆ ವಸ್ತುಗಳ ಕೊರತೆಯನ್ನು ನೀಗಿಸುತ್ತಿದ್ದರು. ತತ್ಪಲವಾಗಿ ಪುಸ್ತಕ ಘಟ್ಟದಲ್ಲಿ ಈ ಗುಡಿಕೈಗಾರಿಕೆಗಳನ್ನು ವಿಸ್ತರಿಸುವ ಮೂಲಕ ಭಾರತೀಯ ಆರ್ಥಿಕತೆಯನ್ನು ವಿಸ್ತೃತವಾಗಿ ವಿಕಾಸಗೊಳಿಸುವುದು ಅತ್ಯಗತ್ಯ ಅವಶ್ಯಕತೆಯಾಗಿದೆ. ರಾಷ್ಟ್ರೀಯ ಆರ್ಥಿಕತೆಯ ದೃಷ್ಟಿಯಿಂದ ಇದು ಒಳ್ಳೆಯದು.

ಅಡಿಟಿಪ್ಪಣೆಗಳು

೧. ಫ್ರೆಡೆರಿಕ್ ಎಂಗಲ್ಸ್, ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ, ಇವುಗಳ ಉಗಮ, ಪುಟ: ೩೩

೨. ಕರೀಗೌಡ ಬೀಚನಹಳ್ಳಿ, ಸಂ, ಕರಕುಶಲ ಕಲೆಗಳ ವಿಶ್ವಕೋಶ, ಪುಟ: ೩೫೪, ೨೦೦೦

೩. ಅದೇ. ಪುಟ: ೧೩೨

೪. ಅದೇ. ಪುಟ: ೧೧

೫. ಅದೇ. ಪುಟ: ೨೬೦

೬. ಅದೇ. ಪುಟ: ೧೦೨

೭. ಮೊ.ಕ. ಗಾಂಧಿ, ಅರ್ಥ ವಿಚಾರ, ಪುಟ: ೮೧

*****

ಅಧ್ಯಾಯ ೨

ಗುಡಿಕೈಗಾರಿಕೆಗಳ ಉತ್ಪಾದನೆಯಲ್ಲಿ ಮಹಿಳೆಯ ಸ್ಥಾನಮಾನ

ಅಧ್ಯಾಯ ೩

ಗುಡಿಕೈಗಾರಿಕೆಗಳ ಉತ್ಪಾದನೆಯಲ್ಲಿ ಮಹಿಳೆಯ ಸ್ಥಾನಮಾನ

೧. ದುಡಿಮೆಯಲ್ಲಿ ಮಹಿಳೆ

ಬಂಡವಾಳಶಾಹಿಯ ವ್ಯವಸ್ಥೆಯ ಉಗಮಕ್ಕಿಂತ ಮುಂಚೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪುರುಷರು ಕುಟುಂಬದೊಳಗಿನ ದುಡಿಮೆ ನಿಯಂತ್ರಿಸುವುದನ್ನು ಆರಂಭಿಸಿದ. ಇದಕ್ಕಾಗಿ ಪ್ರಭುತ್ವಕ್ಕೆ ಖಾಸಗಿ ಸಾರ್ವಜನಿಕ ವಿಂಗಡನೆಯನ್ನು ಮಾಡಿದ ನಂತರ ವ್ಯಾಪಕವಾದ ವಿನಿಮಯ ಮತ್ತು ಉತ್ಪಾದನಾ ಪರಿಕರಗಳ ಘಟಕಗಳಿಂದಾಗಿ ಮಹಿಳೆಯ ಶ್ರಮಶಕ್ತಿಯ ಮೇಲೆ ನಿಯಂತ್ರಣ ಸಾಧಿಸುವುದನ್ನು ಕಲಿತ. ಪುರುಷ ಮಹಿಳೆಯ ಮೇಲೆ ಸಾಧಿಸಿದ್ದ ನಿಯಂತ್ರಣವು ವೈಯಕ್ತಿಕ ನೆಲೆಯಿಂದ ಸಾಮಾಜಿಕ ನೆಲೆಗೆ, ಸಾಮಾಜಿಕ ಸಂಸ್ಥೆಗಳ ಮೂಲಕ ವ್ಯಾಪಿಸಿತ್ತು. ಈ ಕಾರ್ಯಕ್ಕಾಗಿ ಪುರುಷನು ಅನುಸರಿಸುತ್ತಿದ್ದ ತಂತ್ರವೆಂದರೆ ಲಿಂಗಾಧಾರಿತ ಶ್ರಮವಿಭಜನೆಯ ದುಡಿಮೆಯಾಗಿತ್ತು.

"ದುಡಿಮೆ ದುಡಿಮೆಗಾರ ಎಂಬ ಪದವು ಪುರುಷವಾಚಕ ಶಬ್ದವಾಗಿದೆ."[೧] ಏಕೆಂದರೆ ದುಡಿಮೆಯನ್ನು ಪುರುಷಶಾಹಿ ನೆಲೆಯಿಂದ ಪರಿಭಾವಿಸಿಕೊಂಡು ಬರಲಾಗಿದೆ. ಸಮಾಜಶಾಸ್ತ್ರಜ್ಞರು, ವಿಜ್ಞಾನಿಗಳು ದುಡಿಮೆಯನ್ನು ಪುರುಷಶಾಹಿ ನೆಲೆಯಿಂದ ರೂಪಿಸಿಕೊಂಡು ಬಂದಿರುವ ಹಿನ್ನೆಲೆಯಲ್ಲಿ ಇದು ಮಹಿಳೆಯನ್ನು ಒಳಗೊಳ್ಳುವುದು ಸಾಧ್ಯವೆ ಇಲ್ಲವಾಗಿದೆ. ಇದರಿಂದ ಮಹಿಳೆಯರಿಗೆ ಬಹಳಷ್ಟು ಅನ್ಯಾಯವಾಗಿದೆ. ಸಮಾಜ ಪರಿಭಾವಿಸಿಕೊಂಡು ಬಂದ ರೀತಿಯಲ್ಲಿ ಸಂತಾನೋತ್ಪತ್ತಿ ಕೌಟುಂಬಿಕ ಈ ದುಡಿಮೆಯನ್ನು ಮಹಿಳೆಯರಿಗೆ ಹುಟ್ಟಿನಿಂದಲೇ ರೂಪಿಸಿಕೊಳ್ಳುವ ಹಾಗೂ ಸಮಾಜೀಕರಣ ಪ್ರಕ್ರಿಯೆ ಕುಟುಂಬದಲ್ಲಿ ಜಾಗೃತವಾಗಿರುತ್ತದೆ. ಸಾಮಾಜಿಕವಾಗಿ ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಸಾಕಷ್ಟು ಬದಲಾವಣೆಗಳಾದರೂ ಈ ದುಡಿಮೆಗಳಿಂದ ಮಹಿಳೆಗೆ

ಕೊನೆ ದೊರೆತಿಲ್ಲ. ಮಹಿಳೆಯಾಗಿ ಜನಿಸಿದ ಸಲುವಾಗಿಯೇ ಅವಳು ಲಿಂಗ ನಿರ್ದಿಷ್ಟ ಕೆಲಸಗಳನ್ನು ಮಾಡಬೇಕಾಗಿ ಬಂದಿದೆ. ನಮ್ಮ ಸಮಾಜದಲ್ಲಿ ಕೂಡ ದುಡಿಮೆಗಾರ ಎಂಬ ಪದವನ್ನು ಬಳಸಿದಷ್ಟು ಸುಲಭವಾಗಿ ದುಡಿಮೆಗಾರಳು ಎಂಬ ನುಡಿಯನ್ನು ಎಲ್ಲಿ ಬಳಸುವುದು ಕಂಡುಬರುವುದಿಲ್ಲ. ಅವಳ ಶ್ರಮವು ಕಣ್ಣಿಗೆ ಕಂಡರು ಕಾಣದಂತೆ ಗಣನೆಗೆ ಬಾರದಂತೆ ಅಗೋಚರವಾಗಿದೆ.

"ದುಡಿಮೆಯನ್ನುವುದು ಪುರುಷರಿಗೆ ಸಂಬಂಧಿಸಿದಂತೆ ಸಾಮಾಜಿಕವಾಗಿದ್ದರೆ, ಮಹಿಳೆಗೆ ಸಂಬಂಧಿಸಿದಂತೆ, ಜೈವಿಕವಾಗಿದೆ. ಇದೇ ರೀತಿಯಾಗಿ ಪುರುಷರಿಗೆ ಸಾರ್ವಜನಿಕವಾದರೆ ಮಹಿಳೆಯರಿಗೆ ಖಾಸಗಿಯಾಗಿದೆ. ಒಟ್ಟಾರೆಯಾಗಿ ಮಹಿಳೆಯ ದುಡಿಮೆ ಸಮಾಜದಲ್ಲಿ ಅದೃಶ್ಯವಾಗಿದೆ."[೨]

ಸಂತಾನೋತ್ಪತ್ತಿ ಮತ್ತು ಕೌಟುಂಬಿಕ ದುಡಿಮೆಯೊಂದಿಗೆ ಗುಡಿಕೈಗಾರಿಕೆಗಳಲ್ಲಿ ಮಹಿಳೆಯು ಆದಿಕಾಲದಿಂದಲೂ ನಿರಂತರವಾಗಿ ದುಡಿಯುತ್ತಾ ಬಂದಿದ್ದಾಳೆ. ಆದರೆ ಅವಳಿಗೆ ಯಾವುದೇ ರೀತಿಯ ಆರ್ಥಿಕ ಸಾಮಾಜಿಕ ಸ್ಥಾನಮಾನಗಳು ನೀಡಿಲ್ಲ. ಇದನ್ನು ಮಹಿಳೆಯ ದುರದೃಷ್ಟವೆನ್ನದೆ, ಇದು ಪುರುಷಶಾಹಿ ವ್ಯವಸ್ಥೆಯಲ್ಲಿ ನಮ್ಮ ಲಿಂಗ ತಾರತಮ್ಯ ಸಮಾಜದ ಕುತಂತ್ರ ಎನ್ನಲು ಅಡ್ಡಿಯಿಲ್ಲ. ಮೊದಲಿನಿಂದಲೂ ಈ ವೃತ್ತಿಗಳಲ್ಲಿ ಎಡೆಬಿಡದೆ ಕೆಲಸಗಳಿಗೆ ಹೊಂದಿಕೊಳ್ಳುವ ಹಾಗೆ ಬೌದ್ಧಿಕ ಪರಿಣಾಮ ಬೀರಿದ್ದಾರೆ. ಇದರಿಂದ ಮಹಿಳೆಯರು ನಮ್ಮ ಕೆಲಸವೆಂದರೆ ಸಂತಾನೋತ್ಪತ್ತಿ ಕೌಟುಂಬಿಕ ಹಾಗೂ ಈ ವೃತ್ತಿಗಳ ದುಡಿಮೆ ಎನ್ನುವ ಹಾಗೆ ಪರಿವರ್ತಿತ ಮಾಡಿದ್ದಾರೆ. ಗುಡಿಕೈಗಾರಿಕೆಗಳಲ್ಲಿ ಅವಳ ದುಡಿಮೆಯನ್ನು ಅನುತ್ಪಾದಕ ಸಾಲಿಗೆ ಸೇರಿಸಿ ಅವಳ ಶ್ರಮಶಕ್ತಿಯನ್ನು ನಿರುತ್ಪಾದಕ ಎಂಬ ರೀತಿಯಲ್ಲಿ ನಿರೂಪಿಸಿದ್ದಾರೆ. ಇದು ಇಂದು ನಿನ್ನೆಯದಲ್ಲ, ಕಾಲ ಕಾಲಂತರಗಳಿಂದ ನಡೆದು ಬಂದ ವ್ಯವಸ್ಥಿತ ಪಿತೂರಿಯಾಗಿದೆ. ಇದರ ಹಿಂದೆ ಇಡೀ ಪುರುಷ ಸಮೂಹ ವರ್ಗವೇ ಇದೆ ಎಂದರು ತಪ್ಪಾಗಲಾರದು.

ಮಹಿಳೆಯರು ಈ ಪುರುಷಶಾಹಿ ಸಮಾಜದಿಂದ ತಮ್ಮ ಸ್ವಹಿತಾಸಕ್ತಿಗಳನ್ನು ಬಲಿಕೊಟ್ಟು ಪುರುಷರ ಕುಟುಂಬದ ಹಾಗೂ ಸಂತಾನೋತ್ಪತ್ತಿ ಗುಡಿಕೈಗಾರಿಕೆಗಳ ದುಡಿಮೆಯಲ್ಲಿಯೇ ತಮ್ಮ ಸ್ವಹಿತ ಭಾವಿಸಿದ್ದಾರೆ. ಇದರಿಂದ ಅವರು ತಮ್ಮನ್ನು ಆಧೀನರು ತಾವು ದುಡಿಮೆಗಾರರಲ್ಲ, ಕುಟುಂಬಕ್ಕೆ ಆರ್ಥಿಕತೆಗೆ ತಮ್ಮ ಕಾಣಿಕೆ ಏನೇನೂ ಇಲ್ಲ ಎಂಬ ಭಾವನೆಯೊಂದಿಗೆ ದಿನಗಳನ್ನು ಕಳೆಯುತ್ತಿದ್ದಾರೆ. ಹೀಗೆ ಮಹಿಳೆಯರಲ್ಲಿ ಅಂತರ್ಗತಗೊಂಡಿರುವ ಈ ಭಾವನೆಯಿಂದ ಮುಳಿಗಿದ್ದಾರೆ. ಇದರಿಂದ ಮಹಿಳೆಯರನ್ನು ಶೋಷಿಸುವ ಸಮಾಜಕ್ಕೆ ಮತ್ತು ಪುರುಷಶಾಹಿಗೆ ಸರಳವಾಗಿ ಬಿಟ್ಟಿದೆ.

೨. ಮಹಿಳೆಯರ ತ್ರಿರೂಪಿ ದುಡಿಮೆ

ನಮ್ಮ ಸಮಾಜದ ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರು ತ್ರಿರೂಪಿ ದುಡಿಮೆಯನ್ನು ನಿರ್ವಹಿಸುತ್ತಿದ್ದಾರೆ. ಅವರ ದುಡಿಮೆಯ ಪ್ರಮಾಣವು ಹಾಗೂ ಅದಕ್ಕೆ ಸಂಬಂಧಿಸಿದ ಹೊರೆ ಹೊಣೆಗಳು ಪುರುಷವರ್ಗಕ್ಕಿಂತ

ಅಧಿಕವಾಗಿವೆ. ಈ ತ್ರಿರೂಪಿ ದುಡಿಮೆಗಳ ಗುಡಿಕೈಗಾರಿಕೆ ಮಹಿಳೆಯರ ಸ್ಥಾನಮಾನ ನಿರ್ಧರಿಸುವ ಮಾಪಕಗಳಾಗಿವೆ. ಇವುಗಳನ್ನು ಮಹಿಳೆಯರು ಯಾವ ರೀತಿಯಲ್ಲಿ ನಿರ್ವಹಿಸುತ್ತಿದ್ದಾರೆ ಎಂಬುದನ್ನು ತಿಳಿಯಲಾಗಿದೆ.

ಅ. ಸಂತಾನೋತ್ಪತ್ತಿ ದುಡಿಮೆ
ಆ. ಕುಟುಂಬದ ದುಡಿಮೆ
ಇ. ಉತ್ಪಾದನಾ ದುಡಿಮೆ

ಇದರಲ್ಲಿ ಮೊದಲನೆಯದಾಗಿ ಸಂತಾನೋತ್ಪತ್ತಿಯ ದುಡಿಮೆಯನ್ನು ವಿಶ್ಲೇಷಿಸಲಾಗುತ್ತದೆ.

ಅ. ಸಂತಾನೋತ್ಪತ್ತಿಯ ದುಡಿಮೆ : ಮಹಿಳೆಯರಿಗೆ ಮಾತ್ರ ಮೀಸಲಾಗಿರುವ ವಿಶಿಷ್ಟ ದುಡಿಮೆ. ಮಗುವನ್ನು ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟುಕೊಂಡು ಪೋಷಿಸುವುದು ನವಮಾಸದ ತರುವಾಯ ಆದಕ್ಕೆ ಜನ್ಮ ನೀಡುವುದನ್ನು ನಂತರ ಲಾಲನೆ, ಪೋಷಣೆಯು ಸಂತಾನ್ಪೋತ್ಪತ್ತಿ ದುಡಿಮೆ ಎಂದು ಕರೆಯುತ್ತೇವೆ. "ಈ ಸಂತಾನ ಮುಂದುವರಿಕೆಯು ಮಹಾ ಅದ್ಭುತಗಳಲ್ಲಿ ಒಂದು."[೩] ಈ ಕ್ರಿಯೆಯನ್ನು ಜೈವಿಕವು ಪ್ರಾಕೃತಿಕವೂ ಎಂದು ನಂಬಲಾಗಿದೆ. ಅಧ್ಯಯನ ಶಿಸ್ತುಗಳು ಇಂತಹ ನಂಬಿಕೆಯನ್ನು ಪ್ರತಿಪಾದಿಸುತ್ತವೆ. ಈ ಸಂತಾನೋತ್ಪತ್ತಿಯು ಸ್ತ್ರೀ ನಿರ್ಧಿಷ್ಟ ಚಟುವಟಿಕೆ ಕೂಡ ಎಂದು ಪ್ರತಿಪಾದಿಸುತ್ತಿವೆ. ಮಹಿಳೆಯರನ್ನು ಸಂತಾನೋತ್ಪತ್ತಿಯ ಮೂಲವೆಂದು ಪರಿಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವಳ ಶೋಷಣೆಯ ನಿರಂತರತೆಗೆ ಕಾರಣವಾಗಿದೆ. ಈ ತಾಯ್ತನವನ್ನು ಒಂದು ಸಾಂಘಿಕ ವ್ಯವಸ್ಥೆಯನ್ನಾಗಿ ಪರಿವರ್ತಿಸಿ ಮಹಿಳೆಯನ್ನು ಪುರುಷ ತನ್ನ ಆಧೀನದಲ್ಲಿಟ್ಟುಕೊಳ್ಳುವ ಒಂದು ಅಸ್ತ್ರವನ್ನಾಗಿ ಪುರುಷ ಸಮಾಜ ನೋಡಿಕೊಂಡಿದೆ.

"ಭಾರತೀಯರಲ್ಲಿ ಮದುವೆಯ ಮುಖ್ಯ ಉದ್ದೇಶ ಲೈಂಗಿಕ ತೃಪ್ತಿಗಿಂತ ಮಿಗಿಲಾಗಿ ಸಂತಾನೋತ್ಪತ್ತಿಯಾಗಿದೆ."[೪] ಆದರೆ ಈ ಸಂತಾನೋತ್ಪತ್ತಿಯ ಮೇಲೆ ಪುರುಷರು ತಮ್ಮ ಪ್ರಭಾವವನ್ನು ಹೊಂದಿ ಮಹಿಳೆಯರನ್ನು ತಮ್ಮ ವ್ಯಾಪ್ತಿಯಲ್ಲಿ ಇಟ್ಟುಕೊಂಡಿದ್ದಾರೆ. ಇದರಿಂದ ಸುಲಭವಾಗಿ ಮಹಿಳೆಯರನ್ನು ಶೋಷಣೆ ಮಾಡುತ್ತಾ ಬಂದಿದ್ದಾರೆ. ಎಂದಿನಿಂದಲೂ ತಾಯ್ತನದ ಆಯ್ಕೆಯು ಅವಳಿಗೆ ಇಷ್ಟವಿರಲಿ, ಕಷ್ಟವಿರಲಿ, ಆಕೆ ತನ್ನ ತಾಯ್ತನವನ್ನು ಅನುಭವಿಸಲೇಬೇಕು. ಆಕೆ ತಾಯಿ ಆಗದಿದ್ದಲ್ಲಿ ಸಮಾಜ ಅವಳನ್ನು 'ಬಂಜೆ' ಎಂದು ನಾಮಕರಣ ಮಾಡುತ್ತದೆ. ಆ ಸ್ಥಿತಿಯಲ್ಲಿ ಅವಳ ಬದುಕು ಬಹಳ ಹೀನಸ್ಥಿತಿಗೆ ತಲುಪುತ್ತದೆ. ಹಾಗಾಗಿ ಸಂತಾನೋತ್ಪತ್ತಿಗೆ ಸಮ್ಮತಿಯಿಂದ ಸಹಕರಿಸಬೇಕಾದ ಸ್ಥಿತಿಗೆ ಮಹಿಳೆಯರನ್ನು ತಳ್ಳಿದ್ದಾರೆ. ಇದರಿಂದ ಭಾವನಾತ್ಮಕ ಅಂಶಗಳನ್ನು ತಳಕು ಹಾಕಿ ಸಂತಾನೋತ್ಪತ್ತಿಯನ್ನು ವೈಭವೀಕರಿಸುವ ಪರಿಪಾಠ ಬೆಳೆದು ಬಂದಿತು.

ಮಹಿಳೆಯ ವಿಷಯದಲ್ಲಿ ಪರಿಪಾಠ ಸಂತಾನೋತ್ಪತ್ತಿಯನ್ನು ಒಂದು ಮೌಲ್ಯವಾಗಿ ಹೇರಿರುವ ಸಮಾಜ ಅವರನ್ನು ತಮ್ಮ ವಾರುಸುದಾರತ್ವದ ಉಪಕರಣವಾಗಿ ಬಳಸುತ್ತಾ ಬರಲಾಗಿದೆ. ಈ ಸಂತಾನೋತ್ಪತ್ತಿಯ

ಪ್ರಕ್ರಿಯೆಯು ಸಮಾಜದ ಮೊದಲಿನಿಂದಲೂ ಇದನ್ನು ಪುಕ್ಕಟೆ ದುಡಿಮೆಯೆಂದೇ ಪರಿಗಣಿಸಿದ್ದಾರೆ. ಇದನ್ನು ಮಹಿಳೆ ಮಾಡಲೇಬೇಕಾದ ಆದ್ಯ ಕರ್ತವ್ಯವೆಂದು ಸಮಾಜದಲ್ಲಿ ಪರಗಣಿಸುವ ಹಾಗೆ ಮಾಡಿದ್ದಾರೆ. ಮತ್ತು ಇದೊಂದು ಜೈವಿಕ ಹಾಗೂ ನೈಸರ್ಗಿಕ ಕ್ರಿಯೆ ಎಂದು ಹೇಳಿದ್ದಾರೆ.

ಮಹಿಳೆಯು ಸಂತಾನೋತ್ಪತ್ತಿ ದುಡಿಮೆಯೊಂದಿಗೆ ಕೌಟುಂಬಿಕ ದುಡಿಮೆ ಹಾಗೂ ಗುಡಿಕೈಗಾರಿಕೆಗಳಲ್ಲಿನ ಉತ್ಪಾದನೆ ದುಡಿಮೆಯನ್ನು ಮಾಡುತ್ತಿದ್ದಾಳೆ. ಆದರೆ ಇವೆಲ್ಲಾ ಅನುತ್ಪಾದಕ ದುಡಿಮೆಗಳೆಂದು ನಮ್ಮ ಜ್ಞಾನ ವಿಜ್ಞಾನಗಳು ಸಮಾಜಶಾಸ್ತ್ರಜ್ಞರು ಹಾಗೂ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳಾಗಿವೆ. ಈ ಸಿದ್ಧಾಂಥಗಳೆಲ್ಲವು ಮಹಿಳೆಯರನ್ನು ಕೇವಲ ಜನಸಂಖ್ಯೆ ವಾಚಿ ಘಟಕವೆಂದು ಭಾವಿಸಿರುವುದರಿಂದ ಅವಳ ಈ ದುಡಿಮೆಗೆ ಯಾವುದೇ ಬೆಲೆ ಇಲ್ಲವಾಗಿದೆ. ಈ ಧೋರಣೆಗಳಿಗೆಲ್ಲಾ ಪುರುಷಶಾಹಿ ಸಮಾಜವೇ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಸಂತಾನೋತ್ಪತ್ತಿಯು ಜೈವಿಕ ಕ್ರಿಯೆ ಬಿಟ್ಟು, ಉಳಿದ ಕಾರ್ಯಕ್ಕೆ ಶೋಷಣೆಯ ಮೂಲ ಪುರುಷರು. ಆಗಿರುವುದರಿಂದ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವಾಗಲಿ, ಅವಳ ಸುಧಾರಣೆಯಾಗಲಿ ಆಗಲು ಸಾಧ್ಯವಿಲ್ಲದ ನೀತಿ ನಿಯಮಗಳು ರೂಢಿಯಲ್ಲಿವೆ. ಇವು ಸಮಾಜದ ಆಳದಲ್ಲಿ ಬೇರೂರುವ ಹಾಗೆ ರೂಪಿಸಿಬಿಟ್ಟಿದ್ದಾರೆ. ಈ ಸಮಾಜದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯದ ಬದುಕಿನ ಜಂಜಾಟದಲ್ಲಿ ಮಹಿಳೆಯರ ಸಂತಾನೋತ್ಪತ್ತಿ ದುಡಿಮೆಯ ಉತ್ಪಾದನಾ ರಂಗಕ್ಕೆ ನೀಡುತ್ತಿರುವ ಕೊಡುಗೆಯನ್ನು ಪುರುಷ ಪ್ರಧಾನತೆಯು ಮಹಿಳೆಯರ ಸಾಧನೆ, ವ್ಯಕ್ತಿತ್ವವನ್ನು ಮುಚ್ಚಿ ಹಾಕುತ್ತಿದೆ.

ಆ. ಕೌಟುಂಬಿಕ ದುಡಿಮೆ : "ಶತಶತಮಾನಗಳಿಂದ ಕೌಟುಂಬಿಕ ದುಡಿಮೆಯನ್ನು ಹೊತ್ತುಕೊಂಡಿರುವ ಮಹಿಳೆಗೆ ಇದೇನು ಅಪೇಕ್ಷಿತ ಜವಬ್ದಾರಿಯಲ್ಲ. ಮಹಿಳೆಯು ಗುಡಿಕೈಗಾರಿಕೆಗಳಲ್ಲಿ ದುಡಿಯುವುದರ ಜೊತೆಗೆ ಕುಟುಂಬದಲ್ಲಿಯೂ ಕೂಡ ಅವಳು ಭಾಗಿಯಾಗಬೇಕಾಗುತ್ತದೆ. ·ಪುರುಷಷಾಹಿಯ ಪ್ರಕಾರ ಮಹಿಳೆ ಎಂಬ ಶಬ್ದಕ್ಕೆ ಬೆಲೆಯೇ ಇಲ್ಲ. ಅದೇನಿದ್ದರೂ ತನ್ನ ಗುಲಾಮಳು ಎಂಬ ಮಟ್ಟಿಗೆ ಬಂದಿದೆ. ಇವರು ಮಹಿಳೆಗೆ ಯಾವುದೇ ರೀತಿಯ ಸ್ಥಾನಮಾನಗಳನ್ನು ಮತ್ತು ಅಂತಸ್ತನ್ನು ಕೊಟ್ಟಿಲ್ಲ. ಕುಟುಂಬದಲ್ಲಿ ಮಹಿಳೆ ಮತ್ತು ಪುರುಷರು "ಹಂಚಿಕೊಂಡು ಮಾಡಬೇಕಾದ ಗೃಹಕಾರ್ಯವನ್ನು ಸಂಪೂರ್ಣವಾಗಿ ಮಹಿಳೆಯರಿಗೆ ನೀಡಿರುವುದು ಶೋಷಣೆಯ ಮುಖ್ಯ ಸೂತ್ರವಾಗಿದೆ."" ಶ್ರಮದಾಯಕವಾದ ಕೌಟುಂಬಿಕ ಚಾಕರಿ ಮಾಡುತ್ತಿದ್ದರು, ಮಹಿಳೆಯರಿಗೆ ಆರ್ಥಿಕ ಅವಲಂಬನೆಗಾಗಿ ಗಂಡ, ತಂದೆ, ಸೋದರರನ್ನು ಅವಲಂಬಿಸುತ್ತಾ ಜೀವಿಸಬೇಕಾಗುತ್ತದೆ. ಅವಳು ಸ್ವತಂತ್ರ ಜೀವಿಯಲ್ಲ. ಕುಟುಂಬ ಮತ್ತು ಮಕ್ಕಳ ಲಾಲನೆ, ಪಾಲನೆ, ಪೋಷಣೆ ಮಹಿಳೆಯರ ಜೈವಿಕ ಜವಬ್ದಾರಿಯೆಂದು ಮಹಿಳೆಯ ಮೆಲೆ ಒತ್ತಡವನ್ನು ಹೇರಲಾಗಿದೆ. ಈ ಕೌಟುಂಬಿಕ ದುಡಿಮೆಯಲ್ಲಿ ಮಹಿಳೆಯು ಮನೆಯ ಜವಬ್ದಾರಿಯ ಜೊತೆಗೆ ಕೆಲವಷ್ಟು ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ. ಇವು

ಕುಟುಂಬ ಸಂಬಂಧಿ ದುಡಿಮೆಯಾಗಿದೆ. ನಿತ್ಯ ಜೀವನದ ವಾಸ್ತವದಲ್ಲಿ ಕಾಣುವ ಹಲಾವಾರು ಉದಾಹರಣೆಗಳು ಇವೆ. ಅವುಗಳಲ್ಲಿ ಗಂಡ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು, ಅಡಿಗೆ ಮಾಡುವುದು, ಮಾಡಿದ ಅಡುಗೆಯನ್ನು ಬಡಿಸಿವುದು, ದವಸ ಧಾನ್ಯಗಳನ್ನು ಸ್ವಚ್ಛ ಮಾಡುವುದು, ಕಸ ಬಟ್ಟೆ, ಮುಸರೆ ಮಾಡುವುದು ಗುಡಿಸುವುದು ಸಾರಿಸುವುದು. ಅತಿಥಿ ಅಭಾಗ್ಯತರು ಹಿರಿಯರು ವೃದ್ಧರನ್ನು ನೋಡಿಕೊಳ್ಳುವುದು, ಮುಂತಾದ ಕೆಲಸಗಳನ್ನು ಯಾವ ಅಪೇಕ್ಷೆ ಇಲ್ಲದೆ ಮಹಿಳೆ ದಿನನಿತ್ಯ ಮಾಡಲೇಬೇಕಾದ ಕಾರ್ಯ ಎನ್ನುವ ಹಾಗೆ ಪುರುಷ ಪ್ರಧಾನ ಸಮಾಜ ಭಾವಿಸುತ್ತದೆ.

ಕೌಟುಂಬಿಕ ದುಡಿಮೆಯಲ್ಲಿ ಕೆಲವಷ್ಟು ಕುಟುಂಬ ಸಂಪಾದನೆ ದುಡಿಮೆಗಳಾಗಿವೆ. ಅವುಗಳಲ್ಲಿ ಆಕಳು ಎಮ್ಮೆ ಹಾಲು ಹೈನು ಸಂಸ್ಕರಿಸುವುದು ನೀರು ಮೇವು ಸಂಗ್ರಹಿಸುವುದು ಅರಣ್ಯ ಉತ್ಪನ್ನಗಳ ಸಂಗ್ರಹ, ಹೊಲ ಗದ್ದೆಗಳಲ್ಲಿ ದುಡಿಯುವುದು, ಹೀಗೆ ಕುಟಂಬ ಸಂಪಾದನೆ ದುಡಿಮೆಯನ್ನು ಕೂಡ ಮಹಿಳೆ ಮಾಡುತ್ತಾಳೆ. ಇವುಗಳಿಗೆ ಯಾವುದೇ ಸಂಪಾದನೆಯಿಲ್ಲದೆ ದುಡಿಯುತ್ತಾರೆ. ಇವುಗಳನ್ನು ಕೂಡ ಅನುತ್ಪಾದಕ ಚಟುವಟಿಕೆಗಳೆಂದ ಗುರ್ತಿಸಲಾಗಿದೆ. ಸಂಗೋಪನೆಯಿರಲಿ ಅಥವಾ ಸಂಪಾದನೆಯಿರಲಿ ಈ ಎರಡು ಬಗೆಯ ದುಡಿಮೆಯು ಕುಟುಂಬ ಸಂಬಂಧಿಯಾಗಿವೆ. ಇವುಗಳಲ್ಲಿ ಪುರುಷ ಭಾಗವಹಿಸುವುದು ಕಡಿಮೆ ಎಂದು ಹೇಳಬಹುದು.

ಕೌಟುಂಬಿಕ ದುಡಿಮೆಯಲ್ಲಿ ಆರ್ಥಿಕ ವೆಚ್ಚವನ್ನು ಉಳಿತಾಯದ ಕಾರ್ಯವೈಖರಿಯ ಮಹಿಳೆ ದುಡಿಮೆಯ ಸಂಸಾರವನ್ನು ದೂಗಿಸಲು ಇತರ ಕಾರ್ಯಗಳಿವೆ. ಅದರಲ್ಲಿ ನೀರು ಸಂಗ್ರಹಿಸುವುದು, ದನಕುರಿ, ಮೇಕೆಗಳಿಗೆ ಮೇವು ಸಂಗ್ರಹಿಸುವುದು, ಕಟ್ಟಿಗೆ ಉರುವಲು ಸಂಗ್ರಹಿಸುವುದು, ದನಕುರಿ, ಮೇಕೆಗಳಿಗೆ ಮೇವು ಸಂಗ್ರಹಿಸುವುದು ಕಟ್ಟಿಗೆ ಉರುವಲು ಸಂಗ್ರಹಿಸುವುದು, ಕೋಳಿ ಸಾಕಾಣಿಕೆ, ಇವುಗಳೆಲ್ಲ ಕೌಟುಂಬಿಕ ಹೊರೆಯನ್ನು ಸರಿದೂಗಿಸಲು ಮಹಿಳೆಯು ಮಾಡುವ ಕಾರ್ಯಚಟುವಟಿಕೆಗಳಾಗಿವೆ.

ಇವುಗಳಲ್ಲೆವು ಕುಟಂಬದ ಹಿತದೃಷ್ಟಿಯಿಂದ ವರಮಾನ ಉಳಿತಾಯ ಮಾಡುವ ದುಡಿಮೆಗಳಾಗಿವೆ. ಹಾಗೂ ಕುಟಂಬ ವೆಚ್ಚವನ್ನು ಉಳಿತಾಯ ಮಾಡುವ ಕೆಲಸವಾಗಿರುವದರಿಂದ ಇಂತಹ ಕೆಲಸಗಳನ್ನು ಉತ್ಪಾದನೆ ಹಾಗೂ ಆರ್ಥಿಕೋತ್ಪಾದನೆಯೆಂದು ನಮ್ಮ ಪುರುಷಶಾಹಿ ಸಮಾಜ ಪರಿಗಣಿಸುವುದಿಲ್ಲ. ಇವುಗಳನ್ನು ಸಮಾಜಶಾಸ್ತ್ರಜ್ಞರು ಲಾಭಾಂಶವಿಲ್ಲದ ದುಡಿಮೆಯೆಂದರೆ ವಿಜ್ಞಾನಿಗಳು ಜೈವಿಕ ದುಡಿಮೆಯೆಂದು ಪರಿಗಣಿಸಿದ್ದಾರೆ.

ಕುಟುಂಬದಲ್ಲಿನ ದುಡಿಮೆಗಳೊಂದಿಗೆ ಸಂತಾನೋತ್ಪತ್ತಿ ಪುಕ್ಕಟೆ ಕಾರ್ಯವು ಹಾಗೂ ಗುಡಿಕೈಗಾರಿಕೆಗಳ ವಲಯದಲ್ಲಿ ದುಡಿಯುವ ಮಹಿಳೆಯ ದುಡಿಮೆಯನ್ನು ದುಡಿಮೆಯೆಂದು ಪರಿಗಣಿಸಿಲ್ಲ. ಮಹಿಳೆಯರನ್ನು ಅನುತ್ಪಾದಕ ಚಟುವಟಿಕೆಯ ಕೇಂದ್ರಬಿಂದುವಾಗಿಸಿದ್ದಾರೆ. ಮಹಿಳೆಯರ ದುಡಿಮೆಯ ಕಣ್ಣಿಗೆ ಪ್ರತ್ಯಕ್ಷ ಕಂಡರು

ಅದು ಕಾಣಲಾರದ ಹಾಗೆ ವ್ಯವಸ್ಥೆಯನ್ನು ಪುರುಷಶಾಹಿ ಸಮಾಜವು ನಿರ್ಮಾಣಮಾಡಿದೆ. ಆದರೆ ಕೆಲವು ಸಂಗತಿಗಳಿಗೆ ಸಂಬಂಧಿಸಿದಂತೆ ಮಹಿಳೆಯರ ದುಡಿಮೆಯು ಹೆಚ್ಚು ಗೋಚರ ಸ್ವರೂಪದ್ದಾಗಿದೆ. ಉದಾಹರಣೆ ಕೃಷಿಗೆ ಸಂಬಂಧಿಸಿದಂತೆ ಕೆಲವು ಚಟುವಟಿಕೆಗಳಲ್ಲಿ ಬಹುತೇಕ ಮಹಿಳೆಯರ ಇರುವಿಕೆಯನ್ನು ಕಾಣಬಹುದು. ನಾಟಿ ಮಾಡುವುದು, ಕಳೆ ಕೀಳುವುದು ಮುಂತಾದವುಗಳು.

ಕೆಲವು ಕಾರ್ಯಗಳು ಮಹಿಳೆಯರಿಲ್ಲದೆ ನಡೆಯುವುದೇ ಇಲ್ಲ. ದೃಶ್ಯ, ಅದೃಶ್ಯತೆಯ ಸಮಸ್ಯೆಯು ಕೇವಲ ಕಣ್ಣಿಗೆ ಕಾಣುವ ಅಥವಾ ಕಾಣದಿರುವ ವಿಷಯಕ್ಕೆ ಮಾತ್ರ ಮೀಸಲಾದದ್ದಲ್ಲ. ಅದು ಮಹಿಳೆಯರ ದುಡಿಮೆಯ ಗೌರವಕ್ಕೆ ಸಂಬಂಧಪಟ್ಟ ಸಂಗತಿಯಾಗಿದೆ. ಅವಳ ದುಡಿಮೆಯು ಕಣ್ಣಿಗೆ ಗೋಚರಿಸುವುದಾಗಲಿ ಅಥವಾ ಅದೃಶ್ಯವಾಗಿರಲಿ ಅದಕ್ಕೆ ಸಮಾಜದಲ್ಲಿ ಗೌರವಯುತವಾದ ಸ್ಥಾನಮಾನ ಇಲ್ಲವಾಗಿದೆ. ಮಹಿಳೆಯರ ದುಡಿಮೆಯ ಬಗೆಗಳ ಧೋರಣೆ, ಸಾಮಾಜಿಕ, ನೋಟವೆ ಅದರ ಅದೃಶ್ಯ ಸ್ಥಿತಿಗೆ ಕಾರಣವಾಗಿದೆ ಎಂದು ಹೇಳಬಹುದು.

ಮೂರ್ತ ಸ್ವರೂಪದ ಉತ್ಪಾದನೆಯಲ್ಲಿ ಮಹಿಳೆಯರು ಪಾತ್ರವಹಿಸುತ್ತಿದ್ದರು, ಪುರುಷರ ವ್ಯವಸ್ಥಿತ ದಾಳಿಯು ಮಹಿಳೆಯರ ಹಕ್ಕು ಭಾದ್ಯತೆಗಳ ವಿಷಯದಲ್ಲಿ ಸ್ವಲ್ಪವು ವ್ಯತ್ಯಾಸವಾಗದಂತೆ ಪರುಷ ನಿರ್ಮಿತ ಶಾಸನ ಕಾಯ್ದೆಗಳು ಅಡ್ಡಿ ಆತಂಕಗಳು ಇನ್ನೂ ಬೇರೂರಿವೆ.

ಕೌಟುಂಬಿಕ ದುಡಿಮೆಯಲ್ಲಿ ಮಹಿಳೆಯ ವಿಷಯ ಮತ್ತು ಸಮಸ್ಯೆಯ ಇತ್ತೀಚಿಗಷ್ಟೆ ಪ್ರಾಧಾನ್ಯತೆ ಪಡೆದು ಅಳಿದು ಉಳಿದು ಬಂದಿದ್ದ ಸ್ತ್ರೀಹಕ್ಕು ವಿಷಯಗಳು ವಿಕಾಸಗೊಳ್ಳುತ್ತಿವೆ. ಆದರೂ ಸಹ ಕುಟುಂಬದಲ್ಲಿ ಪುರುಷರ ಪ್ರಾಧಾನ್ಯತೆ ಮುರಿಯಲು ಆಗಿಲ್ಲ. ಶೇ ೫೦ ರಷ್ಟು ಇರುವ ಮಹಿಳೆಯರು ಕುಟುಂಬದಲ್ಲಿನ ಪ್ರಾತಿನಿಧ್ಯ ಇದುವರೆಗೂ ಏನೇ ಮಾಡಿದ್ದರೂ ಕೌಟುಂಬಿಕ ದುಡಿಮೆಯಲ್ಲಿ ಪಾತ್ರವನ್ನು ಕಡಿಮೆಗೊಳಿಸಿ ಉತ್ಪಾದನಾ ವ್ಯವಸ್ಥೆಯಲ್ಲಿ ಗುರುತಿಸಿಕೊಳ್ಳುವಂತಹ ಪ್ರಾತಿನಿಧ್ಯ ಹೆಚ್ಚಿಸುವಲ್ಲಿ ಹಿಂದುಳಿದಿರುವುದು ಕಂಡುಬರುತ್ತದೆ.

ಆಧುನಿಕ ಮಹಿಳೆಗೆ ಶಿಕ್ಷಣದ ಹೆಚ್ಚು ಅವಕಾಶಗಳು ಲಭಿಸುತ್ತಿವೆ ಎಂಬುದು ಸ್ವಲ್ಪಮಟ್ಟಿಗೆ ನಿಜವಾದರೂ ಈ ಮಾತು ಬಹುಪಾಲು ನಗರದ ಮಹಿಳೆಯರಿಗೆ ಮಾತ್ರ ಸೀಮಿತವಾಗಿದೆ. ಇದರಿಂದ ನಗರದ ಮಹಿಳೆಯರಿಗೆ ಸ್ವಲ್ಪಮಟ್ಟಿನ ಕೌಟುಂಬಿಕ ದುಡಿಮೆಯಲ್ಲಿ ತನ್ನ ಸ್ಥಾನಮಾನ ಮತ್ತು ಉತ್ಪಾದನೆಯಲ್ಲೂ ಕೂಡ ಒಳ್ಳೆಯ ಸ್ಥಾನ ಗುರುತಿಸಿಕೊಳ್ಳುತ್ತಿರುವ ಶುಭ-ಸೂಚನೆಗಳು ಕಾಣುತ್ತಿವೆ. ಆದರೆ ಗ್ರಾಮಗಳಲ್ಲಿನ ಮಹಿಳೆಯರಿಗೆ ಈಗಲೂ ಸಹ ಅವರ ಶಿಕ್ಷಣ ಕುಂಠಿತಗೊಂಡಿದೆ. ಸರ್ಕಾರಗಳ ಹಲವಾರು ಶಿಕ್ಷಣ ಯೋಜನೆಗಳಿಂದ ಗ್ರಾಮಾಭಿವೃದ್ಧಿಯಲ್ಲಿ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಆಧ್ಯತೆ ನೀಡುತ್ತಿರುವುದು ಸ್ವಾಗತಾರ್ಹವಾದುದಾಗಿದೆ.

ಏಕೆಂದರೆ ಒಬ್ಬ ಮಹಿಳೆಯು ಶಿಕ್ಷಣವನ್ನು ಪಡೆದರೆ ಅವಳು ತನ್ನ ಕುಟುಂಬದಲ್ಲಿ ಗುಡಿಕೈಗಾರಿಕೆಗಳಲ್ಲಿ ಉತ್ತಮ ಯೋಜನೆಗಳನ್ನು ರೂಪಿಸಿ, ಅವುಗಳನ್ನು ನಿರ್ದಿಷ್ಟ ಪ್ರಮಾಣಕ್ಕೆ ತಯಾರಿಸಿ, ಅವುಗಳನ್ನು ಯಾವ ಬೆಲೆಯಲ್ಲಿ ಮಾರಾಟ ಮಾಡಬೇಕು ಎನ್ನುವುದರ ಪರಿಜ್ಞಾನ ಮತ್ತು ಅದರಿಂದ ಸಿಗುವ ಲಾಭದ ಮೇಲೆ ಅವಲಂಬಿತವಾಗಿರುವುದರಿಂದ ಇವಳಿಗೆ ಶಿಕ್ಷಣದ ಅವಶ್ಯಕತೆ ಹೆಚ್ಚಾಗಿರುತ್ತದೆ.

೯. **ಉತ್ಪಾದನಾ ದುಡಿಮೆ :** ಆದಿಕಾಲದಿಂದಲೂ ನಮ್ಮ ಆರ್ಥಿಕ ಪ್ರಗತಿಪಥದಲ್ಲಿ ಸಾಗಿಬಂದ ಬಗೆ ಮಹಿಳೆಯರ ಮಟ್ಟಿಗೆ ಬಹಳಷ್ಟು ನಿರಾಶದಾಯಕವಾದದ್ದು. ಅವರ ಶ್ರಮವು ಯಾರ ಕಣ್ಣಿಗೂ ಕಾಣದ ಹಾಗೆ ಅದೃಶ್ಯವಾಗಿದೆ. "ಕೇವಲ ಹೇರುವ ಸಾಮರ್ಥ್ಯಕಷ್ಟೇ ಅವಳ ಬೆಲೆ ಮಿತಗೊಳ್ಳುತ್ತಾ ಬಂದಿದೆ."[೬] ಪುರಾತನ ಕಾಲದಲ್ಲಿ ಆಕೆ ಉತ್ಪಾದನೆ ಆರ್ಥಿಕಾಭಿವೃದ್ಧಿಯಲ್ಲಿ ಸಕ್ರಿಯವಾಗಿ ದುಡಿದಿದ್ದರೂ ಈ ಆಧುನಿಕ ಬೆಳವಣಿಗೆಯ ಓಟದಲ್ಲಿ ಸಮಾಜವು ಮರೆತು ಹೋದಂತಿದೆ. ಇದಕ್ಕೆಲ್ಲ ಕಾರಣವೆಂದರೆ ನಮ್ಮ ಸಾಮಾಜಿಕ ಧೋರಣೆಗಳಲ್ಲವು ಮಹಿಳೆಯರ ವಿರುದ್ಧ ಕೆಲಸ ಮಾಡುತ್ತಾ ಬಂದಿದ್ದು.

ಇಂದಿನ ವಾಸ್ತವದ ಜಗತ್ತಿನಲ್ಲಿ ಶೇ ೫೦ರಷ್ಟು ಮಹಿಳೆಯರು ವಿವಿಧ ಮೂಲಗಳ ಉತ್ಪಾದನೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಆರ್ಥಿಕ ವ್ಯವಸ್ಥೆಯ ಉತ್ಪಾದನೆಯನ್ನು ಮಾರುಕಟ್ಟೆ ಪ್ರವೇಶಿಸುವಂತೆ ವಸ್ತುಗಳಿಂದ ಗುರುತಿಸಬಹುದು. ಆದರೆ ಮಹಿಳೆಯರ ಮೂಲ ಉದ್ದೇಶವೇ ಉತ್ಪಾದನೆಯಾಗಿದ್ದರೂ ಅದನ್ನು ಅನುಉತ್ಪಾದನೆಯೆಂದು ಪರಿಗಣಿಸುವುದರಿಂದ ಮನುಷ್ಯರ ಜೀವಿತಕಾಲದಲ್ಲಿ ಹಿಂದೆ ಉತ್ಪಾದನೆಯ ಮುಖ್ಯ ಉದ್ದೇಶವೆ ಜೀವನ ನಿರ್ವಹಣೆಯಾಗಿತ್ತು. ಆ ಸಮಯದಲ್ಲಿ ಕುಟುಂಬವೆ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಇಲ್ಲಿ ಪುರುಷರು ಮಹಿಳೆ ಎನ್ನದೆ ಉತ್ಪಾದನೆ ಮಾಡುವವರಾಗಿದ್ದರು. ಇನ್ನು ಉತ್ಪಾದನೆ ಎಂದರೆ ಏನು ಎನ್ನುವುದು ಸಾಮಾನ್ಯವಾದ ಸಂಗತಿಯೇ ಹಾಗಾಗಿ ಉತ್ಪಾದನೆ ಎಂದರೆ 'ಕಚ್ಚಾವಸ್ತುಗಳನ್ನು ಸಿದ್ಧವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಉತ್ಪಾದನೆ' ಎನ್ನಬಹುದು. ಪರಿಸರದಲ್ಲಿ ದೊರೆಯುವ ಹಲವಾರು ರೀತಿಯ ನೈಸರ್ಗಿಕ ಸಂಪನ್ಮೂಲಗಳನ್ನು ಮನುಷ್ಯನು ಬಳಸಿಕೊಂಡು ತನ್ನ ಶ್ರಮಶಕ್ತಿಯನ್ನು ಬಂಡವಾಳದ ಮುಖಾಂತರ ಸಿದ್ಧವಸ್ತುಗಳಾಗಿ ಪರಿವರ್ತಿಸುವ ಅನೇಕ ಉತ್ಪಾದನಾ ವೃತ್ತಿಗಳು ಗ್ರಾಮೀಣ ಭಾಗದಿಂದಲೇ ಆರಂಭಗೊಂಡತಹವುಗಳು. ಇಂತಹ ವೃತ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರೇ ಉತ್ಪಾದನಾ ಘಟಕದ ರುವಾರಿಗಳಾಗಿದ್ದರು.

ಮನುಷ್ಯನ ಜೀವನ ನಿರ್ವಹಣೆಗೆ ಮುಖ್ಯವಾಗಿ ಅರ್ಹರಾದ ಅವಲಂಬನೆಗೊಂಡನಂತರ ವಿವಿಧ ಮೂಲಗಳಿಂದ ಆಹಾರದ ಅವಲಂಬನೆಗೊಂಡನಂತರ ಇದರ ಪರಿಣಾಮವೆ ಉತ್ಪಾದನೆ ಪ್ರಮುಖವಾಗಿ ಉತ್ಪಾದನೆಯಲ್ಲಿ ದುಡಿಮೆಗೆ ವಿಶೇಷವಾದ ಸ್ಥಾನವನ್ನು ಕಲ್ಪಿಸಲಾಗಿದೆ. ಇನ್ನು ಉತ್ಪಾದನೆಯಲ್ಲಿ ದೈಹಿಕ ಶ್ರಮಶಕ್ತಿಯನ್ನು ಅವಲಂಬಿಸಿರುವುದೇ ಮುಖ್ಯವಾಗಿ ಕಾಣಬಹುದು. ಪ್ರಮುಖವಾಗಿ ಉತ್ಪಾದನೆಯನ್ನು

ಹೆಸರಿಸಲು ಹೊರಟಲ್ಲಿ ಮಹಿಳೆಯರ ಪಾತ್ರ ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತದೆ. ಸಾರ್ವಜನಿಕ ಮತ್ತು ಖಾಸಗಿ ಎಂಬ ಎರಡು ವಿಭಿನ್ನತೆಯಲ್ಲಿ ಮಹಿಳೆಯ ದುಡಿಮೆಯನ್ನು ನಾವು ಕಾಣಬಹುದು. ಅರ್ಥಶಾಸ್ತ್ರಜ್ಞರ ಮಾನದಂಡದಲ್ಲಿ ಮಹಿಳೆಯ ಕೈಗೊಳ್ಳುವ ವಿವಿಧ ವೃತ್ತಿಗಳನ್ನು ಉತ್ಪಾದನೆ ಎಂದು ಪರಿಗಣಿಸಿಲ್ಲ. ಹಾಗಾಗಿ ಅರ್ಥಶಾಸ್ತ್ರದಲ್ಲಿ ಹಣರೂಪಿ ವ್ಯವಹಾರದ ಕ್ರಮಗಳನ್ನು ಉತ್ಪಾದನೆಯಂದು ಗುರುತಿಸಿದ್ದಾರೆ.

ಉತ್ಪಾದನೆಯಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ಅಂತರವು ಸಹ ಅಷ್ಟೇ ವ್ಯತ್ಯಾಸದಿಂದ ಕೂಡಿದೆ. ಬದುಕಿನ ಗುರಿಯಲ್ಲಿ ಶ್ರಮವನ್ನು ಪುರುಷರು ಮತ್ತು ಮಹಿಳೆಯರು ಸಮನಾಗಿ ತೊಡಗಿಸಿಕೊಂಡರು. ಉತ್ಪಾದನೆಯನ್ನು ಗುರುತಿಸುವಲ್ಲಿ ಮಹಿಳೆಯರನ್ನು ಕಡೆಗಣಿಸಿರುವುದು ಕಾಣಬರುತ್ತದೆ. ಆರ್ಥಿಕತೆಯಲ್ಲಿ ಮಹಿಳೆ ಮತ್ತು ಪುರುಷನನ್ನು ಗುರುತಿಸುವಾಗ ಪುರುಷನಿಗೆ ಹೆಚ್ಚಿನ ಸ್ಥಾನಮಾನ ನೀಡಲಾಗಿದೆ. ಆದರೆ ಮಹಿಳೆಯರಿಗೆ ಕೆಳಹಂತದ ಸ್ಥಾನಮಾನಗಳನ್ನು ನೀಡಲಾಗಿದೆ. ಗೃಹಪಯೋಗಿ ಉತ್ಪಾದನಾ ಸಂಬಂಧಿ ಕೆಲಸಗಳನ್ನು ವರಮಾನವನ್ನು ಗಳಿಸುವಂತುವುಗಳಲ್ಲವೆಂದು ತಿಳಿದು ಮಹಿಳೆಯರನ್ನು ಅಸಾಹಯಕರನ್ನಾಗಿ ಮಾಡಿದ್ದಾರೆ.

ಹಾಗಾಗಿ ಉತ್ಪಾದನೆಯ ವಿವಿಧ ಸ್ಥಾನಮಾನಗಳನ್ನು ಪಡೆಯುತ್ತಿದ್ದ ಮಹಿಳೆಯರು ಕೌಟುಂಬಿಕ ವ್ಯವಸ್ಥೆಯಲ್ಲಿ ವಿವಿಧ ಬಗೆಯ ವರಮಾನಗಳನ್ನು ರಾಷ್ಟ್ರೀಯ ಆದಾಯದ ಮಾಪನದಲ್ಲಿ ಪರಿಗಣಿಸದೆ, ಇರುವುದರಿಂದ ಮಹಿಳೆಯರು ಉತ್ಪಾದನೆ ಆದಾಯ ಮತ್ತು ಅನುಭೋಗದಲ್ಲಿ ವಂಚಿತರಾಗುತ್ತಿದ್ದಾರೆ. ಮಹಿಳೆಯರ ಉತ್ಪಾದನಾ ವಿಧಗಳು ವಿಶೇಷತೆಯಿಂದ ಕೂಡಿದ್ದರು ಸೀಮಿತತೆಯ ಆರ್ಥಿಕತೆಯನ್ನು ಹೊಂದಿರುವ ಕುಟುಂಬಗಳಲ್ಲಿನ ಸಹಬಾಗಿತ್ವದ ಪಾತ್ರವಹಿಸುತ್ತಿರುವುದು ಪರಿಗಣಿಸಬೇಕಾಗಿದೆ.

೩. ಗುಡಿಕೈಗಾರಿಕೆಗಳ ಉತ್ಪಾದನೆಯಲ್ಲಿ ಮಹಿಳೆಯ ಪಾತ್ರ

ಗುಡಿಕೈಗಾರಿಕೆಗಳಿಗೆ ಸಂಬಂಧಿಸಿದಂತೆ ತಿಳಿಯುವ ಮೊದಲು ನಾವು ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡ ಶ್ರಮಶಕ್ತಿಯ ಮೂಲ ಯಾರೆಂದು ತಿಳಿಯುವುದು ಅವಶ್ಯಕವಾಗಿದೆ. ಈ ವೃತ್ತಿಗಳಲ್ಲಿ ಮಹಿಳೆಯು ತನ್ನ ಶ್ರಮಶಕ್ತಿಯನ್ನು ತೊಡಗಿಸಿಕೊಳ್ಳುವಿಕೆ ಮತ್ತು ಕೌಟುಂಬಿಕ ವಲಯದ ಪ್ರೋತ್ಸಾಹ ಆಕೆಗೆ ದೊರೆಯುವ ಸಂದರ್ಭಗಳು ಏನೆಂದು ತಿಳಿಯುವುದರಿಂದ ಅವರ ಅನೇಕ ಸಮಸ್ಯೆಗಳು ತಿಳಿದು ಬರುತ್ತದೆ. ಗುಡಿಕೈಗಾರಿಕೆಗಳಲ್ಲಿ ಮಹಿಳೆ ದುಡಿಯುವುದು ಕುಟಂಬದ ಆರ್ಥಿಕ ಸ್ಥಿತಿಯ ಅಭಿವೃದ್ಧಿಗಾಗಿ. ಇಲ್ಲಿ ಸಂಘಟನಾ ಸಹಾಯ ಪುರುಷ ಮತ್ತು ಕುಟುಂಬದಿಂದ ದೊರೆಯುತ್ತದೆ. ಉತ್ಪಾದನೆಯಲ್ಲಿ ತೊಡಗಿಸಿಕೊಂಡ ಮಹಿಳೆಯು ತನ್ನ ಕುಟುಂಬದ ನಿರ್ವಹಣೆಯ ಜೊತೆ ಜೊತೆಗೆ ತನ್ನ ಕುಟುಂಬದ ಇತರೆ ಜನರೊಂದಿಗೆ ಬೆರೆತು ಸಂಘಟನಾ ಶಕ್ತಿಯಿಂದ ಕುಶಲಕರ್ಮಿಯಾಗಿ ಉತ್ಪಾದನೆ ಕೈಗೊಳ್ಳುತ್ತಾಳೆ.

ಕುಟುಂಬದ ಜೊತೆಗಿನ ಮಹಿಳೆಯ ಉತ್ಪಾದನೆಯು ಬಹಳಷ್ಟು ಅನುಕೂಲಕರವಾದ ವ್ಯವಸ್ಥೆಯನ್ನು ರೂಪಿಸಿರುತ್ತವೆ. ಆದರೆ ಸಮಸ್ಯೆಗಳ ಆಗರ ಜೊತೆಗೆ ಹರಿದು ಬರುತ್ತಿರುತ್ತದೆ. ನೈಸರ್ಗಿಕ ಪರಿಸರ ಮನೆಯ

ವಾತಾವರಣಗಳಲ್ಲಿಯೇ ಉತ್ಪಾದನೆ ಪ್ರಾರಂಭಿಸಿದ ಮಹಿಳೆಯು ಅಂತಹ ಉತ್ಪಾದನೆಯನ್ನು ಪ್ರಮುಖ ವೃತ್ತಿಯಾಗಿ ಮಾರ್ಪಾಡಿಸುವುದು ಹೀಗೆ. ನಂತರ ಉತ್ಪಾದನೆಯ ಹೆಚ್ಚಳದಂತೆ ಮಹಿಳೆಯ ಸ್ಥಾನ ಬದಲಾಗುತ್ತಾ ನಡೆಯುತ್ತದೆ. ಹೆಚ್ಚಿನ ಶ್ರಮವಹಿಸುವ ಮಹಿಳೆಯು ಉತ್ಪಾದನೆಯಿಂದ ಮರೆಯಾಗತೊಡಗುತ್ತಾಳೆ. ಇದರಿಂದ ಗುಡಿಕೈಗಾರಿಕೆಗಳ ಉತ್ಪಾದನೆಯು ಪುರುಷರ ಅದಿಪತ್ಯಕ್ಕೆ ಒಳಪಡುತ್ತದೆ. ಪೂರೈಕೆಯಾಗುವ ಉತ್ಪಾದನೆಯ ಎಲ್ಲಾ ಅಂಶಗಳನ್ನು ಗಮನಿಸಿದಾಗ ಗುಡಿಕೈಗಾರಿಕೆಗಳಲ್ಲಿನ ಉತ್ಪಾದನೆ ಮತ್ತು ಗುಣಮಟ್ಟ ಉತ್ಪನ್ನಕ್ಕೆ ಜನಾಕರ್ಷಣೆಗೆ ಮಹಿಳೆಯೇ ಪ್ರಾಧಾನ್ಯವಾಗಿದ್ದರೂ ಉತ್ಪಾದನೆಯ ಜಾಹಿರಾತುವಿನಲ್ಲಿ ಮಹಿಳೆಯರನ್ನು ಹೆಚ್ಚು ಆಶ್ರಯಿಸಲಾಗುತ್ತದೆ. ತಾಂತ್ರಿಕ ವಿನ್ಯಾಸ ಹೆಚ್ಚು ಬಂಡವಾಳವಿಲ್ಲದ ದೊಡ್ಡ ಪ್ರಮಾಣದ ಉತ್ಪಾದನೆಯನ್ನು ಮಾಡುವವಳಾಗಿದ್ದಾಳೆ.

ಗುಡಿಕೈಗಾರಿಕೆಗಳಲ್ಲಿ ಮಹಿಳೆಯರು ಹೆಚ್ಚಿನವರು ಸ್ವಾವಲಂಬಿಯಾಗಿರದೆ, ಉತ್ಪಾದಕ ಕ್ರಿಯೆಯಲ್ಲಿ ಕೇವಲ ಪುರುಷರ ಸಹಭಾಗಿಗಳಾಗಿ ದುಡಿಯುತ್ತಿದ್ದಾರೆ. ಮಹಿಳೆಯರ ಸಾಂಪ್ರದಾಯಿಕವಾದ ಗುಡಿಕೈಗಾರಿಕೆಗಳು ಇಂದು ಇದ್ದು ಇಲ್ಲದಂತಾಗಿವೆ. ಸಾಕ್ಷರತೆ ಮತ್ತು ವೃತ್ತಿಪರ ತರಬೇತಿಗಳ ಅಭಾವವು ಇವರನ್ನು ಆಧುನಿಕ ಅರ್ಥವ್ಯವಸ್ಥೆಯಿಂದ ಹೊರಗಿಡಲು ಸ್ವಲ್ಪಮಟ್ಟಿಗೆ ಕಾರಣವಾಗಿದೆ.

ಈ ಗುಡಿಕೈಗಾರಿಕೆಗಳಲ್ಲಿ ಉತ್ಪಾದನಾ ವಿಧಾನ ಸಂಬಂಧಿ ಶೋಷಣೆಯಾಗಿದ್ದು, ಶೋಷಿತ ವರ್ಗವಾಗಿ ಮಹಿಳೆಯನ್ನು ಪರಿಗಣಿಸಲಾಗಿದೆ. ಉತ್ಪಾದನಾ ವ್ಯವಸ್ಥೆಯಲ್ಲಿ ಅವಶ್ಯವಿರುವ ಮಹಿಳಾ ಶ್ರಮಶಕ್ತಿಯನ್ನು ಹೆಚ್ಚುವರಿಯಾಗಿ ದುಡಿಸಿಕೊಳ್ಳುವ ಮೂಲಕ ಬಂಡವಾಳಶಾಹಿ ವರ್ಗಕ್ಕೆ, ವರ್ಗಾವಣೆಯಾಗುವ ಹೆಚ್ಚುವರಿ ಮೌಲ್ಯವು ಹೇಗೆ, ಬಂಡವಾಳ ಸಂಚಯನವನ್ನು ಸಾಧ್ಯವಾಗಿಸುತ್ತದೆಯೇ ಅದೇ ತಾತ್ವಿಕ ಆಧಾರದ ಮೇಲೆ ಮಹಿಳೆಯ ಪುನರುತ್ಪಾದನಾ ಪಾತ್ರದ ಮೂಲಕ ಹಾಗೂ ಉಪಭೋಗಿ ಮೌಲ್ಯದ ಸೇವೆ ಮತ್ತು ವಸ್ತುಗಳ ಮೂಲಕ ಹೆಚ್ಚುವರಿ ಸ್ಥಾನ ಪುರುಷವರ್ಗಕ್ಕೆ ವರ್ಗಾವಣೆಯಾಗುವುದೇ ಮಹಿಳೆಯ ಇಂದಿನ ಅವಗುಣಿತ ಸ್ಥಾನಮಾನದ ಸ್ಥಿತಿಗೆ ಮೂಲ ಕಾರಣವಾಗಿದೆ.

ಈ ಗುಡಿಕೈಗಾರಿಕೆಗಳ ಉತ್ಪಾದನಾ ಸಂಬಂದಗಳಲ್ಲಿಯೇ ಮಹಿಳಾ ಶೋಷಣೆಯ ಮೂಲವಿರುವುದರಿಂದ ಮಹಿಳೆಯರು ಒಂದು ವರ್ಗದ ಸಮಸ್ಯೆಯಾಗಿ ಗ್ರಹಿಸಬೇಕಿದೆ. ಮಹಿಳೆ ಶೋಷಣೆಯ ಮೂಲವಾದ ಗುಡಿಕೈಗಾರಿಕೆಗಳಲ್ಲಿನ ಪಾತ್ರ ಮುಖ್ಯವಾಗಿ ಗಮನಿಸಬಹುದಾದ ವಿಷಯವಾಗಿದೆ. ಆದರೆ ಅಲ್ಲಿನ ಸ್ಥಾನಮಾನಗಳು ಮಹಿಳೆಯರನ್ನು ಕಡೆಗಣಿಸಿವೆ. ಗುಡಿಕೈಗಾರಿಕೆಗಳಲ್ಲಿ ಶ್ರಮವನ್ನು ಅವಲಂಬಿಸಿ ನಿರಂತರ ದುಡಿವ ಮಹಿಳೆಯು ಅದರ ಆಧಾರ ಸ್ತಂಭವಾದರೂ ಸಹ ಆದಾಯವನ್ನು ಗುರುತಿಸುವ ಸಂದರ್ಭದಲ್ಲಿ ಮಹಿಳೆಯನ್ನು ಕಡೆಗಣಿಸಲಾಗಿದೆ. ಹಗಲಿರುಳು ಯಂತ್ರದಂತೆ ದುಡಿಯುವ ಮಹಿಳೆಯ ದುಡಿಮೆಯನ್ನು ಪರಿಗಣಿಸದೆ, ಕೇವಲ ವಸ್ತುವನ್ನು ಉತ್ಪಾದಿಸುವ ಹೊಣೆಯನ್ನು ಮಾತ್ರ ಮಹಿಳೆಗೆ ನೀಡಿದ್ದಾರೆ. ಹಾಗಾಗಿ

ಮಹಿಳೆಯು ಎಲ್ಲಾ ತನ್ನ ಉತ್ಪಾದನಾ ಮಹತ್ವ ತೋರಿಸಲು ಸಾಧ್ಯವಾಗಿಲ್ಲ. ಶ್ರಮದ ಕರ್ತವ್ಯದಲ್ಲಿ ನೈಜತೆಯನ್ನು ಹೊಂದಿರುವ ಮಹಿಳೆಯ ದುಡಿಮೆಯನ್ನು ಪ್ರಮುಖ ನಿಯಂತ್ರಣ ಮಾರುಕಟ್ಟೆಯಲ್ಲಿ ಎಂದು ಗುರುತಿಸದೆ, ಪುರುಷನ ಅಡಿ ಆಳುಗಳಂತೆ ಜೀವಿಸುತ್ತಿದ್ದಾಳೆ. ಉತ್ಪಾದನಾಗೊಂಡ ವಸ್ತುವು ಸಹ ಮಾರುಕಟ್ಟೆಗೆ ಬರದೆ ಇರುವುದು, ಮಾರುಕಟ್ಟೆಯ ವಿಷಯದಲ್ಲಿ ಮಹಿಳೆ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದು ಇದ್ದರೂ ಕಾಯಿಪಲ್ಯ ಮಾರಾಟ ಇನ್ನಿತರೆ ಚಿಕ್ಕಪುಟ್ಟ ಸಂಸಾರ ದೂಗಿಸಲು ವೃತಿಯಲ್ಲಿರುವುದು ಮಾತ್ರ ಕಂಡುಬರುತ್ತದೆ.

ಗುಡಿಕೈಗಾರಿಕೆಗಳಲ್ಲಿ ಲಿಂಗ ಸ್ವರೂಪವನ್ನು ಗುರುತಿಸುವಾಗ ಬಹಳಷ್ಟು ಸ್ಥಾನಮಾನಗಳು ಕುಟುಂಬದ ನಿಯಂತ್ರಣದಲ್ಲಿರುತ್ತವೆ. ಈ ಹಂತದಲ್ಲಿ ಮಹಿಳೆಯು ಪ್ರಧಾನ ಕೇಂದ್ರಬಿಂದುವಾಗಿರುತ್ತಾಳೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರ ಸ್ಥಾನಮಾನಗಳು ವ್ಯಕ್ತಿಗತ ಲಿಂಗ ಸ್ವರೂಪದಿಂದ ನಿರ್ಧರಿಸಲ್ಪಟ್ಟಿದ್ದು ದುಡಿಮೆಯನ್ನು ಕೈಗೊಳ್ಳಲಾಗಿರುತ್ತದೆ. ಕುಟುಂಬದಲ್ಲಿ ಸೇವೆಯನ್ನು ಉತ್ಪಾದನೆಯಿಂದ ಹೊರಗೆ ತಂದ ನಂತರ ಮಹಿಳೆಯರು ಸಾಕಷ್ಟು ಸಮಯವನ್ನು ತಮ್ಮ ನೆಚ್ಚಿನ ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಪುರುಷರು ಕ್ರಿಯಾಶಕ್ತಿಗಳಾಗಿ ಆ ಕಾರ್ಯದಲ್ಲಿ ಸಹಾಯಕರಾಗಿರುತ್ತಾರೆ. ಆದರೆ ಸಂಪೂರ್ಣ ಜವಬ್ದಾರಿ ಹೊತ್ತು ಗೃಹಸಂಬಂಧಿ ಉತ್ಪನ್ನಗಳ ಉತ್ಪಾದನೆ ಮತ್ತು ಸಣ್ಣಪುಟ್ಟ ವಸ್ತುಗಳನ್ನು ತಯಾರಿಸುವ ಮಹಿಳೆಯ ಶ್ರಮಶಕ್ತಿಯನ್ನು ಮಾರುಕಟ್ಟೆಯ ಕಡೆಗೆ ನಡೆಯದಂತೆ ಪುರುಷ ಎಚ್ಚರಿಕೆಯಿಂದ ಪಾತ್ರವಹಿಸುತ್ತಾನೆ. ಈ ಮನೋಭಾವವು ಮಹಿಳೆಯರಲ್ಲಿ ಸ್ವಹಿತ ಆಕಾಂಕ್ಷೆಗಳನ್ನು ಮುರಿಯುವಂತದ್ದಾಗಿರುತ್ತದೆ. ಮುಖ್ಯವಾಗಿ ಉತ್ಪಾದಿಸಿದ ಸರಕು ಸಾಮಗ್ರಿಗಳು ಗಂಡನ ಪಾಲಾಗುತ್ತವೆ. ಇದರಿಂದ ಆತನು ಮಾರುಕಟ್ಟೆ ಪ್ರವೇಶಿಸಿ ಉತ್ಪಾದನೆಯ ಲಾಭವನ್ನು ಪಡೆಯುತ್ತಾನೆ ಮತ್ತು ನಿಯಂತ್ರಣ ಸ್ಥಾನವನ್ನು ಪಡೆಯುತ್ತಾನೆ.

ಕುಟುಂಬದ ಆರ್ಥಿಕತೆಯನ್ನು ಉತ್ತಮ ಮಟ್ಟದಲ್ಲಿ ಕೊಂಡೊಯ್ಯಲು ಅನುವಾಗುವಂತೆ ಮಹಿಳೆಯು ತನ್ನ ಸ್ವಹಿತಕ್ಕೆ ಬೇಕಾಗುವ ಆದಾಯವನ್ನು ಹಲವಾರು ಮೂಲಗಳಿಂದ ಸಂಗ್ರಹಿಸುತ್ತಾಳೆ. ಅಂತಹ ಆದಾಯವು ಕುಟುಂಬ ಸಂಬಂಧಿ ಕೆಲಸಗಳಿಗೆ ಖರ್ಚು ಮಾಡುವವಳಾಗಿದ್ದಾಳೆ. ಹಾಗಾಗಿ ಖರ್ಚಿನ ಬಾಬ್ತಿನಲ್ಲಿ ಪುರುಷ ಮಕ್ಕಳು ಎಲ್ಲರೂ ಅನುಭೋಗ ಕ್ರಿಯೆಯಲ್ಲಿ ಪಾತ್ರವಹಿಸುತ್ತಾರೆ. ಆದರೆ ಉತ್ಪಾದನೆಗೊಂಡ ಹಣರೂಪಿ ಆದಾಯದ ಉತ್ಪಾದನೆಯನ್ನು ಪರಿಗಣಿಸದೇ ಮಹಿಳೆಯರು ಮೂಲೆಗುಂಪು ಮಾಡಿದ್ದಾರೆ.

ಮಹಿಳೆಯರು ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡ ಪರಿಣಾಮವಾಗಿ ವೇತನ ದೊರೆಯದ ಕಾರಣ ಪುರುಷನ ಪ್ರಾಬಲ್ಯ ಹೊಂದಿದ್ದಾನೆ. ಹೀಗಾಗಿ ಉತ್ಪಾದನೆಯು ಜೈವಿಕ ಸಂಪತ್ತಾಗಿ ಮಾತ್ರ ಪರಿಗಣಿಸಲಾಗಿದೆ. ಈ ರೀತಿಯ ಉತ್ಪಾದನೆಯ ಕೇಂದ್ರವಾಗಿ ಪುರುಷನನ್ನು ಕೇಂದ್ರೀಕರಿಸಲಾಗುತ್ತದೆ. ಇದರಿಂದ ಮಹಿಳೆಯರ ಉತ್ಪಾದನಾ ಗೃಹಿಕೆಗಳು ಗೋಚರಿಸದ ಕೆಲಸ ನಿರ್ವಹಿಸುತ್ತಿವೆ. ಗುಡಿಕೈಗಾರಿಕೆಗಳ ಮೂಲ ಆಶಯ

ಕೇಂದ್ರಬಿಂದು ಮಹಿಳೆಯಾಗಿದ್ದರೂ, ಬೆಲೆಯನ್ನು ನಿರ್ಧರಿಸುವಾಗ ಮಹಿಳೆಯ ಸ್ಥಾನವನ್ನು ಪುರುಷ ಆಕ್ರಮಿಸಿಕೊಳ್ಳುತ್ತಾನೆ. ಇದು ಚರಿತ್ರೆಯ ಉದ್ದಕ್ಕೂ ನಡೆದುಕೊಂಡು ಬಂದ ಕಟು ಸತ್ಯವಾಗಿದೆ.

।ಮಹಿಳೆಯರು ಗುಡಿಕೈಗಾರಿಕೆಗಳಲ್ಲಿ ಶ್ರಮಶಕ್ತಿಯನ್ನು ನಿರ್ಧರಿಸುವಾಗ ಮಹಿಳೆಯು ಪ್ರಮುಖ ರುವಾರಿಯಾಗಿ ಕಾಣುತ್ತಾಳೆ. ತೊಡಗಿಸಿಕೊಂಡ ಶ್ರಮ, ಸಾಮರ್ಥ್ಯ ಮತ್ತು ಕರಕುಶಲತೆಯು ಪುರುಷರಿಗಿಂತ ಹೆಚ್ಚಿನ ಪ್ರಮಾಣ ಮಹಿಳೆಯರದೇ ಆಗಿದೆ. ವಸ್ತುವಿನ ಮೂರ್ತ ಸ್ವರೂಪವನ್ನು ನಿಕಟವಾಗಿ ಮಾಡುವಲ್ಲಿ ಪ್ರಮುಖವಾದ ಪಾತ್ರವಹಿಸುತ್ತಾಳೆ. ಆದರೆ ಪುರುಷನು ಅಲ್ಪಪ್ರಮಾಣದ ಸಾಮರ್ಥ್ಯದಿಂದ ಉತ್ಪಾದನೆಗೊಂಡ ವಸ್ತುವಿನ ಪ್ರಮುಖ ರುವಾರಿಯಾಗಿ ಗುರುತಿಸಿಕೊಳ್ಳುತ್ತಾನೆ.।

ಉತ್ಪಾದನಾ ದುಡಿಮೆಯನ್ನು ಗುರುತಿಸುವಾಗ ಮಹಿಳೆ ಮತ್ತು ಪುರುಷರಲ್ಲಿ ಅನೇಕ ಸಾಮ್ಯತೆಗಳನ್ನು ಕಾಣಬಹುದು. ಆದರೆ ಲಿಂಗ ತಾರತಮ್ಯದ ಸಂಚಯದಲ್ಲಿ ಪುರುಷ ಮಹಿಳೆಯರನ್ನು ಇನ್ನು ವಲಯದಲ್ಲಿ ಕೇಂದ್ರೀಕರಿಸಿರುವುದೇ ಕಾಣಬರುತ್ತದೆ. ಹಾಗಾಗಿ ಸರಳವಾಗಿ ನಿರ್ಧರಿತವಾದ ಉತ್ಪಾದನಾಂಗದಲ್ಲಿ ಚಟುವಟಿಕೆಗಳು ಮಹಿಳೆಯನ್ನು ಆ ಕ್ಷೇತ್ರದಿಂದ ಕಡೆಗಣಿಸುತ್ತಾ ಬಂದಿರುವುದು ಇಂದಿನ ಜಗತ್ತಿನವರೆಗೂ ಕಂಡುಬರುತ್ತದೆ. ಆರ್ಥಿಕತೆಯಲ್ಲಿ ಮಹಿಳೆಯ ಮೂರ್ತ ಸ್ವರೂಪದ ವಿವಿಧ ಉತ್ಪಾದನೆಗಳನ್ನು ಪರಿಚಯ ಮಾಡುವವರೆಗೂ ಮಹಿಳೆಯ ಶೋಷಣೆಯ ರೂಪದಲ್ಲಿ ಕಾಣುತ್ತಾಳೆ. ಇದರ ಮುಖ್ಯ ಕಾರಣ ಪುರುಷರ ಪ್ರಾಬಲ್ಯವೆನ್ನಬಹುದು. ಈ ಹಂತದಲ್ಲಿ ಮಹಿಳೆಯ ಮೇಲೆ ಪುರುಷರ ನಿಯಂತ್ರಣವಿರುವುದು ಸ್ಪಚ್ಛವಾಗಿ ಕಾಣಬರುತ್ತದೆ.

ಹಾಗಾಗಿ ಉತ್ಪಾದನೆಯಲ್ಲಿ ಮಹಿಳೆಯರನ್ನು ಕಡೆಗಣಿಸುವಂತೆ ಮಾಡಲು ಪುರುಷ ಧೀರನಂತೆ ನಿಂತು ಶೋಷಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾನೆ. ಕುಟುಂಬದಲ್ಲಿನ ಸ್ಥಿತಿಗತಿಗಳು ಅದರ ಸ್ವರೂಪ ಸಂಪತ್ತಿನ ಫಲಗಳು ಮತ್ತು ಮೂಲಗಳು ಮಹಿಳೆಗೆ ಇಂದು ತೀವ್ರ ಸವಾಲುಗಳನ್ನು ಎದುರಿಸುತ್ತಿವೆ.

ಈ ಹಿನ್ನೆಲೆಯಿಂದ ಗುಡಿಕೈಗಾರಿಕೆಯಲ್ಲಿ ಮಹಿಳೆಯ ಸ್ಥಾನಮಾನ ಗೋಚರಿಸಿದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಮಹಿಳೆಯ ಸ್ಥಾನವು ಲೆಕ್ಕಕ್ಕಿಲ್ಲದ ಪರಿಯಲ್ಲಿ ನಿರಂತರವಾಗಿರುವ ನಿರಂತರತೆಯನ್ನು ಉಳಿಸಿಕೊಳ್ಳಲು ಪುರುಷ ವರ್ಗವೇ ನೆಲೆ ನಿಂತಿರುವಾಗ ಸ್ಥಾನಮಾನ ಉತ್ತಮಗೊಳ್ಳದು. ಮಹಿಳೆಯನ್ನು ಗುರುತಿಸಲು ಸಾಧ್ಯವಾಗದು. ಪ್ರತಿ ಚಟುವಟಿಕೆಗಳ ಕಾರ್ಯವಿಧಾನಗಳು ಹಿಡಿತದಿಂದ ಬಿಡಿಸಿಕೊಳ್ಳಲು ಆಳವಾಗಿ ಬೆರೆತು ಹೋಗಿರುವುದರಿಂದ ಮಹಿಳೆಯರ ಸ್ಥಾನಮಾನ ಕಷ್ಟದಾಯಕರವಾದರೂ ಗುಡಿಕೈಗಾರಿಕೆಯ ವೃತ್ತಿಗಳನ್ನು ಸ್ವತಂತ್ರ್ಯತೆಯ ಜ್ಞಾನಕೌಶಲ್ಯಗಳನ್ನು ಮಹಿಳೆಯು ಪಡೆದುಕೊಂಡು ಪ್ರಮುಖ ಆರ್ಥಿಕ ಜವಾಬ್ದಾರಿ ನೆಲೆನಿಂತು ಮಾಡುವಾಗ ಸ್ಥಾನಮಾನ ಉತ್ತಮಗೊಳ್ಳುತ್ತದೆ. ।ಈ ಪ್ರಸ್ತುತ ಪರಿಸ್ಥಿತಿಗಳಲ್ಲಿ ಸ್ಥಾನಮಾನ ಉತ್ತಮಗೊಳ್ಳಲು ಸರ್ಕಾರ ಪ್ರಯತ್ನವು ನಡೆಯುತ್ತಿದ್ದರೂ ಸಾಲ ಯೋಜನೆ ಇನ್ನಿತರೆ ಯಾವುದೇ ಯೋಜನೆಗಳು ನೀಡಿದರು ಆಸ್ತಿಯ ಅಡವನ್ನು ಕೇಳುತ್ತದೆ. ಈ ಅಲ್ಪಸ್ವಲ್ಪ ಆಸ್ತಿಯ ಒಡೆತನ

ಪುರುಷನ ಹಿಡಿತದಲ್ಲಿರುವುದರಿಂದ ಮಹಿಳೆಯರ ಹೆಸರಿನಲ್ಲಿ ಸಾಲ ನೀಡಲು ಸರ್ಕಾರವು ನಿರಾಕರಿಸುತ್ತದೆ. ನೀಡಿದರೂ ಬಹುಪ್ರಮಾಣವಾಗಿ ಇರುವುದಿಲ್ಲ. ಇದರಿಂದ ಮಹಿಳೆಯ ಸ್ಥಾನಮಾನ ಗುರುತಿಸದೇ ಹೋಗಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

೧. ಟಿ.ಆರ್. ಚಂದ್ರಶೇಖರ್, ಮಹಿಳೆ, ಆರ್ಥಿಕತೆ ಮತ್ತು ಅಭಿವೃದ್ಧಿ, ಪುಟ: ೨೭, ೨೦೦೧

೨. ಅದೇ. ಪುಟ: ೨೯

೩. ಡಾ. ಎಚ್.ಎಸ್. ಶ್ರೀಮತಿ, ಗರ್ಭಾಶಯ ಮಹಿಳೆಯ ಶಕ್ತಿಕೇಂದ್ರ, ಪುಟ: ೧, ೨೦೦೨

೪. ಡಾ. ಎಚ್.ಎಸ್. ಶ್ರೀಮತಿ, ಸಂ: ೨ ಮಹಿಳಾ ಅಧ್ಯಯನ, ಉತ್ತಾರಾಯಣ ಸಂಚಿಕೆ, ಪುಟ: ೨೭

೫. ಹೊಸತು, ನವಕರ್ನಾಟಕ ಪ್ರಕಾಶನ, ಮಾರ್ಚ್ ೨೦೦೦, ಪುಟ: ೬

೬. ಅನು: ವೈದೇಹಿ, ಮೂಲ ಮೈತ್ರಿಯ ಮುಖ್ಯೋಪಾಧ್ಯಾಯ, ಅನು: ಬೆಳ್ಳಿಯ ಸಂಕೋಲೆಗಳು, ಪುಟ: ೫೩

*****

ಅಧ್ಯಾಯ ೪

ಜಾಗತೀಕರಣ ಸಂದರ್ಭದಲ್ಲಿ ಗುಡಿಕೈಗಾರಿಕೆ ಮತ್ತು ಮಹಿಳೆ

ಅಧ್ಯಾಯ ೪

ಜಾಗತೀಕರಣ ಸಂದರ್ಭದಲ್ಲಿ ಗುಡಿಕೈಗಾರಿಕೆ ಮತ್ತು ಮಹಿಳೆ

[೧]ಇಂದು ಜಾಗತೀಕರಣವನ್ನು ವಿವಿಧ ವಲಯಗಳಲ್ಲಿ ಬೇರೆ ಬೇರೆಯಾಗಿ ಅರ್ಥೈಸಿಕೊಳ್ಳಲಾಗಿದೆ. ಜಾಗತೀಕರಣವನ್ನು ಸ್ವಾಗತಿಸುವಂತೆ ವಿರೋಧವೂ ಇದೆ, ಸಂಸತ್ತು ರಾಜಕಾರಣದಲ್ಲಿ ದೇಶದ ಅಭಿವೃದ್ಧಿಗೆ ಅನಿವಾರ್ಯವೆಂದು ಭಾವಿಸಿದರೆ ಎಡಪಂಥೀಯ ಸಂಘಟನೆಗಳು ವಿರೋಧಿಸುತ್ತಿವೆ. ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಜಾಗತೀಕರಣವು ಉಂಟುಮಾಡುವ ಭೀಕರತೆಗಳನ್ನು ಚರ್ಚಿಸಿಲಾಗುತ್ತಿದೆ. ಇದರಿಂದ ಸ್ಥಳೀಯ ವೈವಿಧ್ಯಗಳು ಬಹುರೂಪಿ ಸಂಸ್ಕೃತಿಗಳು ನಾಶವಾಗುತ್ತಾವೆಂಬುದು ಇವುಗಳ ವಾದವಾಗಿದೆ. ಜಾಗತೀಕರಣಕ್ಕಿಂತ ಬಹುರಾಷ್ಟ್ರೀಯ ಕಂಪನಿಗಳು ಸಾಮ್ರಾಜ್ಯಶಾಹಿ ದೇಶಗಳ ಸಾಲಗಳು ಗ್ರಾಮೀಣ ಪ್ರದೇಶಗಳ ಬದುಕನ್ನು ತನ್ನ ಗುತ್ತಿಗೆ ತೆಗೆದುಕೊಂಡಂತಿವೆ. ಜಾಗತೀಕರಣ ಇತ್ತೀಚಿನ ದಿನಗಳಲ್ಲಿ ಬಹು ವಿಷಯಗಳ ಚರ್ಚೆಗೆ ಬಂಡವಾಳವಾಗಿದೆ. ರಾಜಕೀಯ ಆರ್ಥಿಕ ಮಾರುಕಟ್ಟೆ ವ್ಯಾಪಾರ ವಹಿವಾಟು ಕೃಷಿ, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ ಮುಂತಾದ ಕ್ಷೇತ್ರಗಳ ಆಕರ್ಷಕ ವಸ್ತುವಿಷಯ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ತೊಂಬತ್ತರ ದಶಕದಲ್ಲಿ ಉದಾರವಾದಿ ಆರ್ಥಿಕತೆಗೆ ಸಂಭದಿಸಿದ್ದುದೆಂದು ತಿಳಿದರೂ ಅದರ ಮೂಲ ವಸಾಹತುಶಾಹಿ ನೀತಿಯಿಂದಲೇ ಬೇರೆ ರೂಪಗಳನ್ನು ಪಡೆದುಕೊಂಡುಬಂದಿದೆ. ಇದೆಲ್ಲಾ ವ್ಯಾಪರ ವಹಿವಾಟು ಮಾರುಕಟ್ಟೆ ಬಂಡವಾಳಕ್ಕೆ ಸಂಬಂಧಿಸಿದ್ದಾಗಿದೆ.

ಈ ಜಾಗತೀಕರಣ "ಆಕ್ಸಫರ್ಡ್ ನಿಘಂಟಿನ ಪ್ರಕಾರ Global ಎಂಬ ಪದದ ಅರ್ಥ ವಿಶ್ವವ್ಯಾಪ್ತಿಯಾದದ್ದು. ಈ ಕಲ್ಪನೆಯೇ ವಿಶ್ವವನ್ನು ಒಂದು ಗ್ರಾಮವಾಗಿ ನೋಡುವಂತೆ ಅರ್ಥೈಸಬಹುದು."[೨]

೧೯ನೇ ಶತಮಾನದ ಅತಿದೊಡ್ಡ ಅವಿಷ್ಕಾರಗಳ ಬೆಳವಣಿಗೆಯೊಂದಿಗೆ ಬೆಳೆದು ಬಂದ ಜಾಗತೀಕರಣ ನೂರು ವರ್ಷಗಳ ಹಿಂದೆ ನಿಧಾನವಾಗಿ ಬೆಳೆದು ಬಂದಿದ್ದು ೧೯೮೦ರಲ್ಲಿ ವಿಶ್ವವನ್ನೇ ವ್ಯಾಪಿಸಿತು. ಮನುಕುಲದ

ಪ್ರತಿಯೊಂದು ಅವಿಷ್ಕಾರಗಳೊಂದಿಗೆ ಆರಂಭಗೊಂಡ ಜಾಗತೀಕರಣ ಇಂದು ಬಹುದೊಡ್ಡದಾದ ಪ್ರಭಾವ ಬೀರಿದೆ. ಪ್ರತಿಯೊಂದು ದೇಶದಲ್ಲಿರುವ ಚಲಾವಣೆಯ ನಾಣ್ಯಗಳಿಂದ ಹಿಡಿದು "ಸಂವಹನ, ಉಪಗ್ರಹ, ಸೈಬರ್‌ಸ್ಪೇಸ್, ಕಾರ್ಖಾನೆಗಳು, ಅಪ್ಟಿಕಲ್, ಪತ್ರಿಕೆ, ಓಜೋನ್ ರಿಮೋಟ ಸ್ಪೆಂಗ್."[9] ಇತ್ಯಾದಿ ಹೀಗೆ ಮುಂದುವರೆಯುತ್ತಾ ಅನೇಕ ವಿಧವಾದ ನೂತನ ಸಂಗತಿಗಳಲ್ಲಿ ಹರಡಿ ನಿಂತಿರುವ ಜಾಗತೀಕರಣ ಜಾಗತಿಕ ಉತ್ಪಾದನೆ, ಅನುಭೋಗದಿಂದ ಇಡೀ ಜಗತ್ತೇ ಒಂದು ಸಂಕುಚಿತವಾದ ಸ್ಥಳದಲ್ಲಿ ಗುರುತಿಸುವಲ್ಲಿ ಹೊರಟಿದೆ.

ಪ್ರಸ್ತುತ ಜಾಗತೀಕರಣವು ವಿವಿಧ ರಾಷ್ಟ್ರಗಳ ಮಾನವನ ಸಮುದಾಯಗಳ ನಡುವಣ ಅಂತರವನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಇಳಿಮುಖಗೊಳಿಸಿ ಆಧುನಿಕ ರಾಷ್ಟ್ರಗಳ ಪ್ರಗತಿಯ ವೇಗದ ಜೊತೆಗೆ ಏಕರೂಪದಲ್ಲಿ ವ್ಯತ್ಯಾಸವಾಗದಂತೆ ನೋಡಿಕೊಳ್ಳುವುದಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳ ಮೇಲೆ ಜಾಗತೀಕರಣ ಹೆಚ್ಚು ಪ್ರಭಾವ ಬೀರುತ್ತದೆ. ಒಂದು ಕಡೆ ಅಭಿವೃದ್ಧಿ ರಾಷ್ಟ್ರಗಳು ಹೆಚ್ಚು ಬಲಯುತವಾಗಿ ನಿಯಮಗಳನ್ನು ರೂಪಿಸುವ ನೀತಿ ಅಭಿವೃದ್ಧಿಶೀಲ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳನ್ನು ಹೆಚ್ಚು ಶೋಷಣೆ ಮಾಡುವ ಅವಕಾಶವೇ ಹೆಚ್ಚು. ಹೀಗಾಗಿ ಒಂದೆಡೆ ಜಾಗತೀಕರಣ ಹೆಚ್ಚಿನ ರೀತಿಯ ಪ್ರಭಾವ ಬೀರುತ್ತಿವೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜಾಗತೀಕರಣದ ಸ್ವರೂಪವೇ ಬೇರೆಯಾಗಿದೆ. ಈ ಹಂತದ ಬೆಳವಣಿಗೆಯಲ್ಲಿ ಗುಡಿಕೈಗಾರಿಕ ರಂಗದ ಪ್ರಗತಿಗೆ ಮಾರಕವಾಗುವುದು ನೆನೆಯಲೇ ಬೇಕಾದ ಸಂಗತಿಯಾಗಿದೆ. ಮುಂದುವರೆಯುತ್ತಿರುವ ರಾಷ್ಟ್ರಗಳ ಆದಾಯ ಹಾಗೂ ದೇಶದ ಸ್ಥಿತಿಗತಿಗಳು ಅಲ್ಪಪ್ರಮಾಣದಲ್ಲಿ ಅಸಮಾನತೆಯನ್ನು ಹೊಂದಿರುತ್ತವೆ. ಜೊತೆಗೆ ಇಂತಹ ರಾಷ್ಟ್ರಗಳಲ್ಲಿನ ಮಾನವನ ಶ್ರಮ, ಸಂಪತ್ತು ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೊರತೆ ಇರುವುದು ಕಡಿಮೆ ಇವುಗಳ ಹೆಚ್ಚು ಬಳಕೆಗೆ ಜಾಗತೀಕರಣ ಮಾರಕವಾಗಿ ಪರಿಣಮಿಸುತ್ತದೆ.

ಅಭಿವೃದ್ಧಿಯ ಪಥದಲ್ಲಿರುವ ದೇಶಗಳಲ್ಲಿನ ಪರಿಸ್ಥಿತಿಯ ಸುಧಾರಣೆಯ ವಿಷಯವಾಗಿ ಇಂದು ಆರ್ಥಿಕ ಜಾಗತೀಕರಣದ ವಿಷಯದ ಬಗ್ಗೆ ಚರ್ಚಿಸಲೇಬೇಕು. ಇಂದು ಅನೇಕ ಸಿದ್ಧಾಂತಗಳು ಸಮಾಜಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು, ರಾಜಕೀಯ ನಾಯಕರು, ಸಮೂಹ ಮಾಧ್ಯಮದವರು ಹೆಚ್ಚು ವ್ಯಾಪಕವಾಗಿ ಜಾಗತೀಕರಣದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಉದ್ಭವಗೊಂಡ ಬಿಕ್ಕಟ್ಟು ಎಡಪಂಥಿಯರು ಮತ್ತು ಬಲಪಂಥಿಯರು ಎಂಬ ಎರಡು ಭಾಗಗಳಾಗಿ ಪರಿವರ್ತಿತವಾಗಿದೆ. ಮೊದಲನೆಯದಾಗಿ ಮುಕ್ತ ಮಾರುಕಟ್ಟೆ ಉದಾರವಾದ ಪ್ರಭಾವ ಹೆಚ್ಚುವುದೆಂದು ಮತ್ತು ಎರಡನೆಯ ಸಾಲಿನಲ್ಲಿರುವವರು ಬಂಡವಾಳ ಸುಲಿಗೆಯ ತಂತ್ರವೆಂದು ಪರಿಗಣಿಸುತ್ತಿದ್ದಾರೆ. ಹೇಗೆ ಏನೇ ಆದರೂ ಅಭಿವೃದ್ಧಿಯ ಪಥದಲ್ಲಿರುವ ರಾಷ್ಟ್ರಗಳು ಕೈಗಾರಿಕಾ ಬೆಳವಣಿಗೆಯನ್ನು ಗಮನಿಸಬೇಕಾದದ್ದು ಅತಿ ಅವಶ್ಯಕ.

ಭಾರತದಂತಹ ಮುಂದುವರೆಯುತ್ತಿರುವ ರಾಷ್ಟ್ರದಲ್ಲಿ ಸಂಪತ್ತೆಲ್ಲಾ ಮಾನವನ ಶ್ರಮಶಕ್ತಿಯಲ್ಲಿಯೇ ಅಡಕವಾಗಿತ್ತು ಎಂದು ನಂಬಲಾಗಿತ್ತು. ಬಡತನ, ನಿರುದ್ಯೋಗ, ಶಿಕ್ಷಣ, ಆರೋಗ್ಯ, ಇಂತಹ ಹಲವಾರು ಕ್ಷೇತ್ರಗಳಲ್ಲಿ ತೀರ ನಿಕೃಷ್ಟ ಸ್ಥಿತಿಯನ್ನು ಕಾಣುತ್ತಾ ಬಂದಿದೆ. ಇನ್ನು ಭಾರತದಲ್ಲಿ ಜಾಗತೀಕರಣದ ಸಂದರ್ಭವನ್ನು ವಿಶೇಷವಾಗಿ ೧೯೯೧ರ ನಂತರ ಕೈಗಾರಿಕಾ ಬೆಳವಣಿಗೆಗಳಿಂದ ಗುರುತಿಸಲಾಗುತ್ತದೆ.

೧೯೯೧ರ ನಂತರ ವಿದ್ಯಮಾನಗಳಲ್ಲಿ ಭಾರತದಲ್ಲಿನ ಕೈಗಾರೀಕರಂಗದ ಬೆಳವಣಿಗೆ ನೀತಿಗಳು ವಿಶೇಷವಾಗಿ ಜಾಗತೀಕರಣದ ಒತ್ತಡದಿಂದ ತತ್ತರಿಸತೊಡಗಿದವು. ಕೈಗಾರಿಕಾ ನೀತಿಗಳು ಸಹ ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ವಿಶೇಷವಾಗಿ ಜಾಗತೀಕರಣವನ್ನ ಅನುಕರಿಸಿ ನಡೆಯಲು ಪ್ರಾರಂಭಿಸಿದವು. ಇಂತಹ ಸ್ಥಿತಿಯಲ್ಲಿ ರೂಪಿತವಾದ ಕೈಗಾರಿಕಾನೀತಿ ಗ್ರಾಮೀಣ ಜನತೆಯ ಆಶಾಕಿರಣವಾಗಿದ್ದ ಗುಡಿಕೈಗಾರಿಕೆಗಳು ಮತ್ತು ಅಲ್ಲಿ ತೊಡಗಿಸುತ್ತಿದ್ದ ಮಾನವನ ಶ್ರಮ ಶಕ್ತಿಗೆ ದೊಡ್ಡ ಪೆಟ್ಟು ನೀಡಿತ್ತು. ಅಂದಿನ ಕಾಂಗ್ರೆಸ್ ಆಡಳಿತದ ಅಧಿಕಾರವಧಿಯಲ್ಲಿ ಜಾಗತೀಕರಣ ವಿವಿಧ ಆಯಾಮಗಳನ್ನು ಪಡೆದುಕೊಂಡಿತು.

ಬಹುರಾಷ್ಟ್ರೀಯ ಕಂಪನಿಗಳ ಆಗಮನ ಬಂಡವಾಳದ ಮುಕ್ತ ಹೂಡಿಕೆ ಸಂಪನ್ಮೂಲಗಳ ಬಳಕೆಯಿಂದ ದೇಶದಲ್ಲಿನ ಸಂಪತನ್ನು ವಿದೇಶಿ ಕಂಪನಿಗಳು ಶೇ ೮೦ ರಷ್ಟು ಬಂಡವಾಳ ತೊಡಗಿಸಿ ಲಾಭವನ್ನು ಗಳಿಸಲು ಮುಂದಾದವು. ಇದರಿಂದ ಪ್ರಾರಂಭಗೊಂಡ ಶೋಷಣೆ ಗುಡಿಕೈಗಾರಿಕೆ ವಲಯಕ್ಕೂ ಮಾರಕವಾಯಿತು.

ಭಾರತ ದೇಶವು ಹಳ್ಳಿಗಳಿಂದ ಕೂಡಿದ ರಾಷ್ಟ್ರವಾಗಿದ್ದು, ಪ್ರತಿಶತ ೭೦ ಕ್ಕಿಂತಲೂ ಹೆಚ್ಚು ಹಳ್ಳಿಗಳಿಂದ ಕೂಡಿದೆ. ಅದರಲ್ಲಿ ಸಾಮಾನ್ಯವಾಗಿ ಗುಡಿಕೈಗಾರಿಕೆಗಳು ಹಳ್ಳಿಗಳಲ್ಲಿ ನೆಲೆವೂರಿವೆ. ಗಾಂಧೀಜಿಯವರ ಕಲ್ಪನೆಯಲ್ಲಿ ಹಳ್ಳಿಗಳ ರಾಷ್ಟ್ರವೇ ಭಾರತವಾದುದರಿಂದ ಇದರ ಪ್ರಗತಿ ಹಳ್ಳಿಗಳಿಂದಲೇ ಆಗಬೇಕು. ಅಂದರೆ ಹಳ್ಳಿಗಳಲ್ಲಿರುವ ಗುಡಿಕೈಗಾರಿಕೆಗಳ ಪ್ರಗತಿಯೇ ಭಾರತದ ದೇಶದ ಪ್ರಗತಿ ಎಂಬ ಗಾಂಧೀಜಿಯವರ ಕಲ್ಪನೆಗೆ ಹೊಡೆತ ಬಿದ್ದಿದೆ. ಗ್ರಾಮೀಣ ಭಾಗದ ಆರ್ಥಿಕ ವಲಯದಲ್ಲಿ ತನ್ನದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದ್ದ ಗುಡಿಕೈಗಾರಿಕೆ ಸರ್ಕಾರದ ನಿರ್ಲಕ್ಷತನದ ನಡುವೆ ಹಲವಾರು ಕುಟುಂಬಗಳ ಆಶ್ರಯವಾಗಿತ್ತು. ಒಂದರ್ಥದಲ್ಲಿ ಬಡತನದ ಪರಿಹಾರಕ್ಕೆ ಸ್ವಲ್ಪಮಟ್ಟಿನ ಸಹಾಯಕವಾಗಿದ್ದ ಗುಡಿಕೈಗಾರಿಕೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳುತ್ತಿದ್ದರು. ಮಹಿಳೆಯರು ಉತ್ಪಾದನೆಯ ಶ್ರಮಶಕ್ತಿಯನ್ನು ಅವಲಂಬಿಸಿ ಸಂಪನ್ಮೂಲಗಳ ಬಳಕೆಯಿಂದಲೇ ಸ್ವತಂತ್ರವಾಗಿ ಜೀವಿಸುತ್ತಿದ್ದರು. ಕ್ರಿಯಾಶೀಲವಾದಿ ಮಹಿಳೆಯ ಎರಡು ರೀತಿಯ ಪ್ರಭಾವಗಳಾದ ಕುಟುಂಬ ಮತ್ತು ಉತ್ಪಾದನೆಯ ಸ್ವಾಯತ್ತತೆಯನ್ನು ಹೊಂದಿದ್ದಳು. ತನಗೆ ಬೇಕಾದ ಗುಡಿಕೈಗಾರಿಕೆಯು ಸ್ಥಾನೀಕರಣ ಸಂಪನ್ಮೂಲ. ಮಾರುಕಟ್ಟೆ ಬಂಡವಾಳದ ಸೀಮಿತತೆಯಿಂದ ಕುಟುಂಬ ನಿರ್ವಹಣೆಗೆ ಬೇಕಾದ ಆದಾಯ ಗಳಿಸುತ್ತಿದ್ದಳು. ಆದರೆ ಹೊಸ ಜಾಗತೀಕರಣ ಈ ಭಾಗದ ಗುಡಿಕೈಗಾರಿಕೆಗಳಿಗೆ ಸಂಪೂರ್ಣವಾಗಿ ಮೂಲೆಗುಂಪುವಾಗುವಂತೆ ಮಾಡಿದೆ. ಅದಕ್ಕೆ ಇಂದಿನ ಸರಕಾರಗಳು ಪೂರಕವಾದ ಸನ್ನಿವೇಶವನ್ನು ಸೃಷ್ಟಿಸತೊಡಗಿವೆ.

ಇಂದು ಜಾಗತೀಕರಣ ತನ್ನ ವಿಷಜಾಲದಲ್ಲಿ ಎಲ್ಲಾ ಪ್ರದೇಶದ ಮೂಲೆ ಮೂಲೆಯ ಜನತೆಯನ್ನು ಸಿಕ್ಕಿಸಿಕೊಳ್ಳುತ್ತಿದೆ. ಇದಕ್ಕೆ ಗುಡಿಕೈಗಾರಿಕೆಗಳಲ್ಲಿ ದುಡಿಯುವ ಮಹಿಳೆಯರು ಹೊರತಾಗಿಲ್ಲ. ಬದುಕಿನ ವ್ಯವಸ್ಥೆಯಲ್ಲಿ ದುಡಿಮೆಯ ಮಾರ್ಗ ಕಂಡುಕೊಂಡು ವಿವಿಧ ವೃತ್ತಿಗಳ ವರ್ಗಗಳ, ಮಹಿಳೆಯರ ಉತ್ಪಾದನೆ ಅನುಭೋಗದ ಮೇಲೆ ಜಾಗತೀಕರಣ ತನ್ನದೇ ಆದ ರೀತಿಯಲ್ಲಿ ಕರಿನೆರಳನ್ನು ಬೀರಿದೆ. ಈಗಾಗಲೇ ಹಲವಾರು ರಂಗದಲ್ಲಿ ದುಡಿಯುತ್ತಾ ಕುಟುಂಬ ನಿರ್ವಹಿಸುತ್ತಿದ್ದ ಕಾರ್ಮಿಕರು ನಾಗರೀಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಜೊತೆಗೆ ಅಸಂಘಟಿತ ವಲಯವೆಂದು ಗುರುತಿಸಿ ಅದರ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ.

೧೯೯೧ರ ಹೊಸ ಆರ್ಥಿಕ ನೀತಿಯಲ್ಲಿ ಮೂಡಿಬಂದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಎಂಬ ಮೂರು ಅಂಶಗಳು ಇಂದು ದೇಶವನ್ನು ಪ್ರಾಕೃತಿಕ ಸಂಪನ್ಮೂಲಗಳನ್ನು ಬರಿದು ಮಾಡುವ ಹಂತಕ್ಕೆ ತಂದುನಿಲ್ಲಿಸಿವೆ. ಸಾಮಾಜಿಕ ಪರಿಸರದ ಎಲ್ಲಾ ರಂಗಗಳಲ್ಲಿಯೂ ಸಹ ಜಾಗತೀಕರಣ ಪ್ರಭಾವ ಎದ್ದು ಕಾಣುತ್ತದೆ. ಸಾರಿಗೆ, ಶಿಕ್ಷಣ, ಆರೋಗ್ಯದಂತಹ ಮೂಲಭೂತ ಸೌಲಭ್ಯಗಳ ಪಟ್ಟಿಯಲ್ಲಿಯೂ ಸಹ ಜಾಗತೀಕರಣ ತನ್ನ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಹಾಗಾಗಿ ಇಂದು ಮಹಿಳೆಯು ದುಡಿಯುವ ಹಲವಾರು ರಂಗಗಳಲ್ಲಿ ಪೈಪೋಟಿಯಿಂದ ಕೂಡಿವೆ. ಇದರಿಂದ ಕಾರ್ಯ ನೈಪುಣ್ಯತೆ ಪೈಪೋಟಿ ಹೆಚ್ಚಿ ನಿರುದ್ಯೋಗಿಗಳಾಗುವ ಸಂದರ್ಭ ಒದಗಿಬಂದಿದೆ.

ಜಾಗತೀಕರಣದಲ್ಲಿ ಗುಡಿಕೈಗಾರಿಕೆ ಮತ್ತು ಮಹಿಳೆ

೧. ಜಾಗತೀಕರಣ ಮತ್ತು ಕೈಗಾರಿಕಾ ನೀತಿ

೨. ಜಾಗತೀಕರಣ ಮತ್ತು ಮಹಿಳೆ

೩. ಜಾಗತೀಕರಣದ ಪ್ರಭಾವ ಗುಡಿಕೈಗಾರಿಕೆಗಳು ಮತ್ತು ಮಹಿಳೆಯರ ಮೇಲೆ

೪. ಜಾಗತೀಕರಣದಿಂದ ಗುಡಿಕೈಗಾರಿಕೆಯನ್ನು ಅವಲಂಬಿಸಿದ ಮಹಿಳೆಯರ ಮೇಲಾಗುವ ತೊಡರುಗಳು

೧. ಜಾಗತೀಕರಣ ಮತ್ತು ಕೈಗಾರಿಕಾ ನೀತಿ

ಭಾರತದಲ್ಲಿ ಗುಡಿಕೈಗಾರಿಕೆಗಳ ಪಾತ್ರ ಬಹಳ ಮಹತ್ವದ್ದು, ಇವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರೆ ದುಡಿಯುತ್ತಿರುವುದರಿಂದ ಈ ಕ್ಷೇತ್ರಕ್ಕೆ ವಿಶೇಷವಾದ ಗಮನ ಹರಿಸುವ ಅಗತ್ಯತೆ ಇದೆ. ವಿಕೇಂದ್ರೀಕೃತ ಗುಡಿಕೈಗಾರಿಕೆಗಳು ಮಾತ್ರ ಸಂಪತ್ತಿನ ವಿಷಮತೆಯಿಂದ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಬಂಡವಾಳಶಾಹಿ ಶೋಷಕರಿಂದ ರಕ್ಷಿಸಲಾಗುತ್ತಿತ್ತು. ಗುಡಿಕೈಗಾರಿಕೆಗಳು ಪರಿಸರವನ್ನು ಸಂರಕ್ಷಿಸಿ ಎಷ್ಟೋ ಜನರಿಗೆ ಉದ್ಯೋಗ ದೊರಕಿಸಿ ಕೊಡುವುದರ ಜೊತೆಗೆ ಆದಾಯದಿಂದ ಕುಟುಂಬದ ನಿರ್ವಹಣೆಗೆ ಸಹಾಯಕವಾಗಿದ್ದು. ಸ್ವಾತಂತ್ರ್ಯಪೂರ್ವದಿಂದ ತಿಳಿದುಬಂದಿದೆ. ಆದರೆ ಹೊಸ ಕೈಗಾರಿಕಾ ನೀತಿಯ ಫಲವಾಗಿ ಜಾರಿಗೆ ಬಂದ L.P.G (ಉದಾರೀಕರಣ, ಖಾಸಗೀಕರಣ, ಜಾಗತೀಕರಣ)ಯು ಇಂತಹ ಹಲವಾರು

ರಂಗಗಳನ್ನು, ಹಲವಾರು ವೃತ್ತಿಗಳನ್ನು ನಾಶವಾಗುವಂತೆ ಮಾಡಿದೆ ಎಂದು ಬುದ್ಧಿಜೀವಿ ವಲಯ ಭಾವಿಸುತ್ತದೆ. ಒಟ್ಟಾರೆ ಜಾಗತೀಕರಣದಿಂದ ದೇಶದಲ್ಲಿ ರೂಪಿಸುವ ಕೈಗಾರಿಕಾ ನೀತಿಗಳನ್ನು ಬದಲಾಯಿಸುವ ಹಂತಕ್ಕೆ ಬಂದಿದೆ. ಇಂದು ರೂಪಿತವಾಗುವ ಕೈಗಾರಿಕಾ ನೀತಿಗಳಲ್ಲಿ ಜಾಗತೀಕರಣವೇ ಮೆಲುಗೈಯಾಗಿದೆ. ಇಲ್ಲಿ ರೂಪಿತವಾಗುವ ಎಲ್ಲಾ ನೀತಿಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಅನುಕರಿಸಿ ಸಹಾಯಕವಾಗುವ ರೀತಿಯಲ್ಲಿಯೇ ಇವೆ. ಇದರಿಂದ ಗುಡಿಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಸರ್ಕಾರ ಕಡಿಮೆ ಪ್ರಮಾಣದ ಪಾತ್ರವಹಿಸುತ್ತಿದೆ. ಇದರಿಂದ ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರ ಉತ್ಪಾದನೆ, ಉದ್ಯೋಗ, ವಿತರಣೆ ಕುಟುಂಬಗಳ ಆದಾಯ ಮತ್ತು ಆರ್ಥಿಕ ಜೀವನದ ಮೇಲೆ ಗಮನಾರ್ಹ ಬದಲಾವಣೆಗಳು ಜರುಗುತ್ತಿವೆ.

ಜಾಗತೀಕರಣ ಬಂಡವಾಳಶಾಹಿ ಪರವಾಗಿದ್ದು, ನೈಸರ್ಗಿಕ ಸಂಪನ್ಮೂಲಗಳನ್ನು ಬರಿದು ಮಾಡುವ ಕಡೆಗೆ ನಡೆಯುತ್ತಿದೆ. ಇದರಿಂದ ನಾಳಿನ ಎಲ್ಲಾ ಬಡವರು ಭೂಮಂಡಲದ ಸರ್ವ ಸಂಪನ್ಮೂಲಗಳನ್ನು ಕಳೆದುಕೊಂಡು ದಾರಿದ್ರ್ಯದಲ್ಲಿಯೇ ಬದುಕಿ ಜೀವನ ನಡೆಸಬೇಕಾಗುತ್ತದೆ. 'ವಿಶ್ವವೇ ಒಂದು ಮಾರುಕಟ್ಟೆ' ಎಂದು ಪರಿಗಣಿಸಿರುವ ಜಾಗತೀಕರಣ ಗುಡಿಕೈಗಾರಿಕೆಗಳ ಅಭಿವೃದ್ಧಿ ಪಡೆಸುವ ಕಡೆಗೆ ದಾರಿ ದೀಪವಾಗುತ್ತದೆ ಎಂಬುದು ಉಪಕ್ಷೇಯ ಮಾತಾಗುತ್ತದೆ. ಉತ್ಪಾದನೆಯನ್ನು ಉತ್ತಮ ಪಡಿಸಿಕೊಂಡು ದೇಶವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯಲು ಬಲವಾದ ಕೈಗಾರಿಕೆಗಳಿಗೆ ವಿಶೇಷವಾಗಿ ಸೌಲಭ್ಯ ಮತ್ತು ವ್ಯವಸ್ಥೆ ಮಾಡಿಕೊಟ್ಟು ಉದ್ಯಮ ಸಾಹಸಿಗಳನ್ನು ಒಂದುಗೂಡಿಸಿ ಕೈಗಾರಿಕಾ ರಂಗಕ್ಕೆ ನೂತನ ಚೌಕಟ್ಟು ಒದಗಿಸಿಕೊಡುವ ಉದ್ದೇಶದಿಂದಲೇ ೧೯೪೮ರಲ್ಲಿ ಕೈಗಾರಿಕಾ ನೀತಿಯನ್ನು ಆರಂಭಿಸಲಾಯಿತು. ಇಂತಹ ಬೆಳವಣಿಗೆಯ ಪ್ರಸ್ತುತದವರೆಗೂ ನಡೆಯುತ್ತಾ ಬಂದಿದ್ದರೂ, ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಹೊಸ ಕೈಗಾರಿಕಾ ನೀತಿಗಳು ಜಾರಿಗೆ ಬರತೊಡಗಿದವು. ಅರ್ಥವ್ಯವಸ್ಥೆಗೆ ಬೇಕಾದ ಭದ್ರವಾದ ತಳಪಾಯದೊಂದಿಗೆ ವಿಶೇಷವಾಗಿ ಗುಡಿಕೈಗಾರಿಕೆಗಳಲ್ಲಿನ ಮಾನವಶ್ರಮ ಮತ್ತು ಸಂಪನ್ಮೂಲಗಳ ವ್ಯಾಪಕ ಅಭಿವೃದ್ಧಿಗೆ ಪೂರಕವಾಗಿರುವಂತೆ ಸುವ್ಯವಸ್ಥಿತ ತಳಹದಿ ಹಾಕಲಾಯಿತು.

ರಾಷ್ಟ್ರದ ಪ್ರಗತಿಗೆ ಕೈಗಾರಿಕೆಗಳ ಜೀವಾಳವೆಂದು ಅಂದಿನ ಪಂಡಿತರು ನಂಬಿದ್ದರಿಂದ ಕೈಗಾರಿಕಾ ರಂಗದ ಬೆಳವಣಿಗೆ ಆರ್ಥಿಕ ಭದ್ರತೆಯನ್ನು ಒದಗಿಸಲು ಮುಂದಾಲೋಚನೆಯಾಗಿ ರೂಪಗೊಂಡಿದ್ದ ಕೈಗಾರಿಕಾ ನೀತಿ ರಾಷ್ಟ್ರದ ಅರ್ಥವ್ಯವಸ್ಥೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ ಪ್ರಾರಂಭಗೊಂಡಿದ್ದು ಇದರಿಂದ ಕೈಗಾರಿಕೆಗಳ ವರ್ಗೀಕರಣ ಬಂಡವಾಳ ತೊಡಗಿಸುವಿಕೆ, ಸಂಪನ್ಮೂಲಗಳ ಬಳಕೆ, ಕೈಗಾರಿಕಾ ಸ್ಥಾನೀಕರಣ ಮುಂತಾದ ವಿಷಯಗಳ ಬಗ್ಗೆ ವಿಶೇಷವಾಗಿ ಚರ್ಚಿಸಲಾಯಿತು. ಇದರಿಂದ ರೂಪಗೊಂಡಿದ್ದ ಮಿಶ್ರ ಆರ್ಥಿಕ ವ್ಯವಸ್ಥೆ ಅಂಗೀಕಾರ ಪಡೆದ ನಂತರ ಕೈಗಾರಿಕಾರಂಗದ ವಿಭಜನೆ ಪ್ರಾರಂಭವಾಯಿತು. ಔದ್ಯಮಿಕ ಪ್ರಗತಿಗೆ ಕಾರ್ಮಿಕರ ಮತ್ತು ಮಾಲೀಕರ ನಡುವಿನ ಸಂಬಂಧ ನ್ಯಾಯಯುತ ಕೂಲಿ ಮತ್ತು ಗುಡಿಕೈಗಾರಿಕೆಗಳ ಪ್ರಾಧಾನ್ಯತೆಯನ್ನು ಎತ್ತಿಹಿಡಿಯುವ ಸೂಕ್ತ ಬದಲಾವಣೆಗಳು ಪ್ರಾರಂಭಗೊಂಡವು.

೧೯೪೮ರಿಂದ ಪ್ರಾರಂಭಗೊಂಡ ಕೈಗಾರಿಕಾ ನೀತಿಯು ಅಂದಿನಿಂದ ಬದಲುಗೊಳ್ಳುತ್ತಾ ಬಂದಿದೆ. ಜಾಗತಿಕ ವ್ಯವಸ್ಥೆಯ ರೀತಿನೀತಿಗಳು ಬಲಾಢ್ಯ ರಾಷ್ಟ್ರಗಳ ಬೆಳವಣಿಗೆಗೆ ಪೂರಕವಾಗುವಂತೆ ರೂಪಿಸಿಕೊಳ್ಳುತ್ತಾ ಬಂದಿದೆ. "೧೯೪೮, ೧೯೫೬, ೧೯೭೩, ೧೯೮೦, ೧೯೯೧ ಹೀಗೆ ಹಲವಾರು ನೀತಿಗಳು ಪ್ರಾರಂಭಗೊಂಡು ಬೆಳೆದು ಬಂದಿದೆ." ಆದರೆ ಜಾಗತಿಕ ಅರ್ಥವ್ಯವಸ್ಥೆಯ ಮೇಲೆ ೧೯೯೦ರ ನಂತರ ನಡೆದ ವಿದ್ಯಮಾನಗಳು ಐತಿಹಾಸಿಕ ಘಟನೆಯಾಗಿ ಮಾತ್ರ ಉಳಿದಿವೆ. ೧೯೯೧ರಲ್ಲಿ ಪ್ರಾರಂಭವಾದ ಕೈಗಾರಿಕಾ ನೀತಿಯು ಜಗತ್ತಿನಲ್ಲಿ ಬೆಳೆಯುತ್ತಿದ್ದ ಹೊಸ ವಿದ್ಯಮಾನದ ಬೆಳವಣಿಗೆಗೆ ನಾಂದಿ ಹಾಡಿದೆ. ಹಾಗಾಗಿ ೧೯೯೧ರ ನೀತಿಯು ಖಾಸಗೀಕರಣ, ಉದಾರೀಕರಣ, ವಿದೇಶಿಭಾಗಿತ್ವ ಎಂಬ ಮೂರು ಅಂಶಗಳಿಂದ ಪ್ರಾರಂಭಗೊಂಡಿತು. ಇದರಿಂದ ಜಾಗತೀಕರಣದ ಬೆಳವಣಿಗೆಯು ಅಲ್ಪ ಸಮಯದಲ್ಲಿಯೇ ವಿಶ್ವವ್ಯಾಪಿಯಾಗಿ ಹರಡಿ ವಿಶ್ವವೇ ಒಂದು ಮಾರುಕಟ್ಟೆಯನ್ನಾಗಿ ಮಾಡಿದೆ. ಇದರಿಂದ ಗುಡಿಕೈಗಾರಿಕೆಗಳು ದುಃಸ್ಥಿತಿಯನ್ನು ತಲುಪುತ್ತಿದೆ. ಖಾಸಗೀಕರಣ ಮತ್ತು ಉದಾರೀಕರಣ ದೇಶದ ಎಲ್ಲೆಡೆ ಯಾವುದೇ ನಿರ್ಬಂಧವಿಲ್ಲದೆ ದೇಶದಲ್ಲಿ ದೊರೆಯುವ ಸಂಪನ್ಮೂಲ, ಮಾನವನ ಶ್ರಮ ಮತ್ತು ಸಂಪತ್ತು ಎಲ್ಲವನ್ನು ಬಳಸಿಕೊಳ್ಳಲು ಈ ವ್ಯವಸ್ಥೆಗಳು ಅನುವು ಮಾಡಿಕೊಟ್ಟವು. ಈ ವ್ಯವಸ್ಥೆಯಿಂದ ಇಡೀ ಜಾಗತಿಕ ನೆಲೆಯಲ್ಲಿ ವಿವಿಧ ರಾಷ್ಟ್ರಗಳು ದುರ್ಬಲ ಶ್ರಮಶಕ್ತಿಯನ್ನು ಮುಂದುವರೆದ ರಾಷ್ಟ್ರಗಳು ಬಳಸಿಕೊಂಡು ಲಾಭ ಸಂಪಾದನೆಯ ಕಡೆಗೆ ನಡೆಯತೊಡಗಿವೆ. ಹೀಗೆ ಮುಂದುವರೆಯುತ್ತಿರುವ ಮತ್ತು ಹಿಂದುಳಿದ ರಾಷ್ಟ್ರಗಳ ಮಾನವ ಶ್ರಮಸಂಪತ್ತು ಸಂಪನ್ಮೂಲಗಳು ಬಳಸಿ ಹೆಚ್ಚು ಹೆಚ್ಚು ಶ್ರೀಮಂತವಾಗಲು ನೆಡೆಯತೊಡಗಿವೆ. ಇದರಿಂದ ಬಡರಾಷ್ಟ್ರಗಳು ಇನ್ನು ಬಡತನದ ಹಾದಿಯಲ್ಲಿಯೇ ಸಾಗುತ್ತಿರುವವರಲ್ಲದೆ ಗುಡಿಕೈಗಾರಿಕೆಗಳು ಗ್ರಾಮೀಣ ಸಂಪನ್ಮೂಲಗಳು ಕಳೆದುಕೊಳ್ಳುವ ಹಂತಕ್ಕೆ ತಲುಪಿವೆ.

ಜಾಗತೀಕರಣದ ಪ್ರಾಬಲ್ಯ ಗುಡಿಕೈಗಾರಿಕೆಗಳ ಮೇಲೆ ಧಮನಕಾರಿಯಾದ ರೀತಿಯಲ್ಲಿ ಪರಿಣಾಮ ಬೀರುತ್ತಿವೆ. ಸಣ್ಣ ಪ್ರಮಾಣದ ಗುಡಿಕೈಗಾರಿಕೆಗಳ ಮೇಲೆ ಪೆಟ್ಟು ಬೀಳುವಂತೆ ಮಾಡಿದೆ. ಇಂತಹ ಗುಡಿಕೈಗಾರಿಕೆಗಳಲ್ಲಿ ಬಳಕೆಯಾಗುತ್ತಿದ್ದ ಮಾನವಶ್ರಮ, ಉತ್ಪಾದನೆ, ಮಾರುಕಟ್ಟೆ ಉತ್ಪನ್ನ, ಕಚ್ಚಾಸಾಮಗ್ರಿಗಳು ಎಲ್ಲವೂ ಸ್ಥಳೀಯ ಮಾರುಕಟ್ಟೆಯನ್ನು ಅವಲಂಬಿಸಿಯೇ ನಡೆಯುತ್ತಿವೆ. ಹಾಗಾಗಿ ಜಾಗತೀಕರಣ ದೊಡ್ಡ ಪ್ರಮಾಣದ ಉತ್ಪಾದನೆ ಮಾರುಕಟ್ಟೆಯ ಜಾಲವನ್ನು ವಿಸ್ತರಿಸಿದಾಗ ಈ ಸಣ್ಣ ಪ್ರಮಾಣದ ಗುಡಿಕೈಗಾರಿಕೆಗಳು ಅತಂತ್ರ ಸ್ಥಿತಿಗೆ ಒಳಗಾಗುತ್ತವೆ. ಇದಕ್ಕೆ ಹಲವಾರು ಗುಡಿಕೈಗಾರಿಕೆಗಳನ್ನು ಹೆಸರಿಸಬಹುದು.

೨. ಜಾಗತೀಕರಣ ಮತ್ತು ಮಹಿಳೆ

ಇಂದಿನ ಸಾಮಾಜಿಕ ಚಿಂತನೆಯಲ್ಲಿ ಮುಖ್ಯವಾಗಿ ಮಹಿಳೆಯರ ಭಾಗವಹಿಸುವಿಕೆ ಕೇವಲ ಹೆಸರಿಗೆ ಮಾತ್ರ ಕಾಣಬಹುದು. ಗುಡಿಕೈಗಾರಿಕೆಗಳಲ್ಲಿ ದುಡಿಯುವ ಮಹಿಳೆಯನ್ನು ಜಾಗತೀಕರಣ ದುರ್ಬಲವಾಗಿ ಮಾಡುತ್ತಿದೆ.

ಪೂರ್ಣ ಪ್ರಮಾಣದ ಯಂತ್ರಗಾರಿಕೆ ತಂತ್ರಜ್ಞಾನ ಪ್ರಾರಂಭವಾದ ನಂತರ ಮಹಿಳೆಯರ ಉತ್ಪಾದನೆಯ ಮೂಲವಾದ ಗುಡಿಕೈಗಾರಿಕೆಗಳಲ್ಲಿಯು ಹಲವಾರು ಹೊಸ ಬದಲಾವಣೆಗಳು ಪ್ರಾರಂಭಗೊಂಡಿವೆ. ಇದರಿಂದ ಮಹಿಳೆಯರ ಸ್ಥಾನಮಾನಗಳು ಬದಲಾವಣೆಯ ಕಡೆಗೆ ನಡೆದಿವೆ.

ಮಹಿಳೆಯರು ಗುಡಿಕೈಗಾರಿಕೆಗಳಲ್ಲಿ ಹೆಚ್ಚು ಭಾಗವಹಿಸಿದ್ದು ಮುಖ್ಯವಾಗಿ ಅವು ಕುಟುಂಬದ ಪರಿಮಿತಯಲ್ಲಿದ್ದುದರಿಂದ ಇದರಿಂದ ಮಹಿಳೆಯು ಗುಡಿಕೈಗಾರಿಕೆಗಳಲ್ಲಿ ಭಾಗವಹಿಸುತ್ತಾ ತನ್ನ ಕುಟುಂಬದ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುತ್ತಿದ್ದಳು. ತನ್ನ ಪಾರಂಪರಿಕ ಕೆಲಸಗಳಲ್ಲಿ ಗಂಡನ ಜೊತೆ ಜೊತೆಯಲ್ಲಿಯೇ ನಿರತಳಾಗುತ್ತಿದ್ದಳು. ಮೂಲತಃ ಸ್ಥಳೀಯ ಮಾರುಕಟ್ಟೆ ಪೇಟೆ ಪಟ್ಟಣಗಳ ನಿರ್ದಿಷ್ಟ ಮಾರುಕಟ್ಟೆಯ ಗುರಿಯನ್ನು ಇಟ್ಟುಕೊಂಡು ಮಹಿಳೆಯರು ಹಲವಾರು ಗುಡಿಕೈಗಾರಿಕೆಯ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದರು. ಇಂತಹ ವೃತ್ತಿಗಳು ವಂಶಪಾರಂಪರ್ಯವಾಗಿ ಬಂದಿರುತ್ತಿದ್ದುವುಗಳೆ ಹೆಚ್ಚು ಇಂತಹ ಪ್ರಮುಖ ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದವಳು ಮಹಿಳೆಯಾಗಿರುತ್ತಿದ್ದಳು. ಜಾಗತೀಕರಣದ ವ್ಯಾಪ್ತಿ ಬೆಳೆದಂತೆ ಗುಡಿಕೈಗಾರಿಕೆಗಳು ಕಡಿಮೆಯಾಗುತ್ತಾ ಬರತೊಡಗಿವೆ.

ಜಾಗತೀಕರಣ ಮಹಿಳೆಯರ ಮೇಲೆ ಅನೇಕ ರೀತಿಯ ಪ್ರಭಾವವನ್ನು ಬೀರಿದೆ. ಜಗತ್ತಿನ ಮಾರುಕಟ್ಟೆಯಲ್ಲಿ ಮಹಿಳೆಯರು ವಿವಿಧ ರೀತಿಯಲ್ಲಿ ಕಾಣಬಹುದು. ಮಾರುಕಟ್ಟೆಯಲ್ಲಿ ಮಹಿಳೆಯರನ್ನ ಮಾರಾಟದ ಪ್ರತಿನಿಧಿಗಳಾಗಿ ಫ್ಯಾಷನ್ ಮೇಳಗಳಲ್ಲಿ ಬಳಸಿಕೊಳ್ಳುವುದು ಈ ಎಲ್ಲಾ ಹಂತಗಳಲ್ಲಿ ಮಹಿಳೆಯ ಭಾಗವಹಿಸುವಿಕೆಯು ಹಣದ ಆದಾಯಕ್ಕೆ ಮಾರುಹೋಗುವ ಹಾಗೆ ಮಾಡಿದೆ. ಈ ಜಾಗತೀಕರಣ ಒಂದು ವಿಧವಾಗಿ ಮಹಿಳೆಯನ್ನು ಜಾಗತೀಕರಣ ಮಾರಾಟದ ಸರಕಾಗಿ ನೋಡುತ್ತಿದ್ದರೆ, ಇನ್ನೊಂದೆಡೆ ಮಹಿಳೆಯರು ನಿರುದ್ಯೋಗದ ಸಮಸ್ಯೆಯಲ್ಲಿ ಇರುವುದು ಕಾಣಬರುತ್ತದೆ.

ಜಾಗತೀಕರಣ ಇಂದು ದುಡಿಯುವ ಮಹಿಳೆಯರನ್ನು ಸಮಕಾಲಿನ ಸ್ಪರ್ಧಿಗಳೆಂಬಂತೆ ಪ್ರತಿಭೆಗೆ ಪ್ರೋತ್ಸಾಹವಿತ್ತಿದೆ. ವಿವಿಧ ರೀತಿಯ ಸಂಯೋಜನೆಯಲ್ಲಿ ಮಹಿಳೆಯೆ ಪ್ರಧಾನ ಪಾತ್ರವಹಿಸುತ್ತಿದ್ದಾಳೆ. "ಹಾಗಾಗಿ ಜಾಗತೀಕರಣ ಮನುಷ್ಯನ ಸಮಾಜದ ವಿಕಾಸದೊಂದಿಗೆ ಪ್ರಾರಂಭಗೊಂಡು ಸಾಮಾಜಿಕ, ರಾಜಕೀಯ, ಧಾರ್ಮಿಕ, ಮತ್ತು ಆರ್ಥಿಕ ಸ್ಥಿತ್ಯಂತರಗಳ ಜೊತೆ ಜೊತೆಗೆ ಪುರುಷ ಸ್ತ್ರೀಯರ ನಡುವಿನ ಸಂಬಂಧಗಳಲ್ಲಿಯೂ ಮತ್ತು ನಡವಳಿಕೆಗಳಲ್ಲಿಯ ಬದಲಾವಣೆಯು ನಡೆಯುತ್ತಿರುವುದು ನೋಡಿದಾಗ ಜಾಗತೀಕರಣದ ಪ್ರಭಾವ ಸ್ತ್ರೀ ಪುರುಷರ ನಡುವಿನ ಶೋಷಣೆಯನ್ನು ಸಮಾಜದಲ್ಲಿ ಕ್ಷೀಣಿಸುವಂತೆ ಮಾಡುತ್ತಾ ನಡೆಯುತ್ತಿದೆ."[೩] ವೈಜ್ಞಾನಿಕ ದೃಷ್ಟಿಕೋನದ ಮುಖಾಂತರ ಗಮನಿಸಿದಾಗ ಪ್ರಗತಿ, ಶೈಕ್ಷಣಿಕ ವಿಕಾಸ, ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಅರಿವು, ಹಕ್ಕು ಇವೆಲ್ಲವುದರ ನಡುವೆ ಸ್ತ್ರೀ-ಪುರುಷ ವರ್ಗ ತಾರತಮ್ಯಗಳು ಕಡಿಮೆಯಾಗುತ್ತದೆ ಎನ್ನಬಹುದಾಗಿದೆ. ಆದರೂ ಇದರಿಂದಾಗಿ ಮಹಿಳೆಯರ ಮೇಲಿನ ಶೋಷಣೆ ದೌರ್ಜನ್ಯ ದಬ್ಬಾಳಿಕೆಗಳು ಇನ್ನೂ ನಿಂತಿಲ್ಲ.

ಜಾಗತೀಕರಣವು ಆಧುನಿಕತೆಯ ಪರಿಸ್ಥಿತಿಯನ್ನು ಸಹಜವಾಗಿಯೇ ಮೂಡಿಸುತ್ತದೆ ಹಾಗಾಗಿ ಮಹಿಳೆಯರು ಹೆಚ್ಚು ಹೆಚ್ಚು ಶಿಕ್ಷಿತರೂ ಆರ್ಥಿಕವಾಗಿ ಸ್ವಾವಲಂಬಿಗಳು ಆಗುತ್ತಿದ್ದಾರೆ. ಸ್ತ್ರೀ ಚಳುವಳಿಯ ಆಶಯಗಳು ಸ್ವಾವಲಂಬಿಗಳು ಆಗುತ್ತಿದ್ದಾರೆ. ಸ್ತ್ರೀ ಚಳುವಳಿಯ ಆಶಯಗಳು ಪ್ರಾರಂಭಗೊಂಡು ಕುಟುಂಬದಲ್ಲಿ ಪುರುಷಶಾಹಿ ಧೋರಣೆಗಳಲ್ಲಿ ಪ್ರತಿಭಟಿಸುವ ಶಕ್ತಿಯಾಗಿ ರೂಪಿತವಾಗುತ್ತಿದ್ದಾಳೆ. ಆದರೆ ಶಿಕ್ಷಣವಿಲ್ಲದ ಮತ್ತು ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡು ಮಹಿಳೆಯು ದುಡಿಯುವ ಯಂತ್ರವಾಗಿ ಮನೆಯಲ್ಲಿ ದುಡಿಯುವವಳಾಗಿದ್ದಾಳೆ. ಬಹಳಷ್ಟು ಮಹಿಳೆಯರು ಬಿಡುವಿನ ವೇಳೆಯನ್ನು ದುಡಿಮೆಯ ಸಮಯವನ್ನಾಗಿ ಮಾಡಿಕೊಂಡು. ಕುಟುಂಬದ ಜೀವನಕ್ಕೆ ಆಧಾರವಾದಂತಹ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇಂತಹ ಮಹಿಳೆಯರು ಮನೆಯ ಜವಬ್ದಾರಿಯ ಜೊತೆಗೆ ಆರ್ಥಿಕತೆಯನ್ನು ಸರಿದೂಗಿಸುವ ಶಕ್ತಿಯನ್ನು ಹೊಂದಿರುವವಳಾಗಿದ್ದಾಳೆ. ಇಂತಹ ಮಹಿಳೆಯರ ಮೇಲೆ ಜಾಗತೀಕರಣ ಮಾರುಕಟ್ಟೆಯಿಂದ ಹಿಡಿದು ಉತ್ಪನ್ನ ತಯಾರಿಕೆ ಸಂಪನ್ಮೂಲ ಬಂಡವಾಳ ಪ್ರತಿಯೊಂದು ಮೂಲದ ಮೇಲೆ ತನ್ನ ಕರಿನೆರಳು ಬೀಳುವಂತೆ ಮಾಡಿದೆ. ಇದರಿಂದ ಬಹಳಷ್ಟು ಮಹಿಳೆಯರು ತಯಾರಿಸಿದ ವಸ್ತುವನ್ನು ಕೊಳ್ಳುವವರಿಲ್ಲದೆ ಉತ್ಪಾದಿಸಿದ ವಸ್ತುಗಳು ಹಾಗೆ ಉಳಿಯುವುದರಿಂದ ನಿರಾಶೆಗೊಂಡು ಮಹಿಳೆಯು ಕಾಲಕ್ರಮೇಣ ದುಡಿಮೆಯನ್ನು ಬಿಟ್ಟುಬಿಡುವ ಸಂದರ್ಭಗಳು ನಾವು ಕಾಣಬಹುದು.

"ಪ್ರಸ್ತುತ ಸಾಲಿನಲ್ಲಿ ಆರಂಭಗೊಂಡ ಹೊಸ ನೀತಿಯ ರೂಪುರೇಷುಗಳು ಶೇ ೧೨ % ಗುಡಿಕೈಗಾರಿಕೆಗಳನ್ನು ನಾಶದ ಅಂಚಿಗೆ ತಳ್ಳುತ್ತಿದೆ."[೪] ವ್ಯಾಪಾರದ ವಹಿವಾಟಿನಲ್ಲಿ ನಡುವೆ ಬದಲಾವಣೆ ಬಂದಂತೆ ಅನೇಕ ವಿಧವಾದ ಕೈಗಾರಿಕೆಗಳ ಜನಪ್ರೀಯವಾಗುತ್ತಿವೆ. ಇದರಿಂದ ಗುಡಿಕೈಗಾರಿಕೆಗಳಲ್ಲಿನ ಮಹಿಳಾ ಉದ್ಯಮಗಳ ಆತ್ಮವಿಶ್ವಾಸ ಕುಂಟುವುದರೊಂದಿಗೆ ನಿರುದ್ಯೋಗಿಗಳಾಗುತ್ತಿರುವುದು ಜಗತ್ತಿನ ಎಲ್ಲೆಡೆ ಕಾಣಬಹುದಾಗಿದೆ.

೩. ಗುಡಿಕೈಗಾರಿಕೆ ಮತ್ತು ಮಹಿಳೆಯರ ಮೇಲೆ ಜಾಗತೀಕರಣದ ಪ್ರಭಾವ

ಸಾಮಾಜಿಕ ವ್ಯವಸ್ಥೆಯಲ್ಲಿನ ಅತ್ಯಂತ ಕ್ಷಿಪ್ತ ಬೆಳವಣಿಗೆಯಲ್ಲಿ ಗುರುತಿಸಲಾದ ಲಿಂಗ ತಾರತಮ್ಯದಲ್ಲಿನ ವ್ಯತ್ಯಾಸದ ಮೇಲೆ ಜಾಗತೀಕರಣ ಪ್ರಭಾವ ಬೀರಿರುವುದಕ್ಕೆ ಅನೇಕ ಆಧಾರಗಳಿವೆ. "ಜಾಗತೀಕರಣವು ಮಹಿಳೆಯರ ಮತ್ತು ಪುರುಷರ ನಡುವಣ ಅಸಮಾನತೆ ಹೆಚ್ಚಿಸುತ್ತಿದೆ."[೫] ಮಹಿಳೆಯರ ಬದುಕಿನಲ್ಲಾಗುತ್ತಿರುವ ಅನೇಕ ರೀತಿಯ ಬದಲಾವಣೆಗಳು ಏರುಪೇರುಗಳನ್ನು ಸೃಷ್ಟಿಮಾಡುವುದಲ್ಲದೆ, ಈ ಹಲವಾರು ತೊಡಕುಗಳನ್ನು ಸೃಷ್ಟಿಮಾಡುತ್ತಿದೆ. ಜೊತೆಗೆ ಜಾಗತೀಕರಣದ ಪ್ರಭಾವ ಮಹಿಳೆಯರ ಮೇಲೆ ಅನೇಕ ರೀತಿಯಲ್ಲಿ ದುಷ್ಪರಿಣಾಮವಾಗುವಂತೆ ಮಾಡಿದೆ. ಶೋಷಣೆಯ ಅಸ್ತ್ರವನ್ನು ಬಂಡವಾಳಶಾಹಿ ರಾಷ್ಟ್ರಗಳು ಬಳಸಿಕೊಂಡು ಬಹುಬೇಗನೆ ತಮ್ಮ ಪ್ರಭುತ್ವವನ್ನು ಸಾಧಿಸುತ್ತಿವೆ. ಇಂದಿನ ಪರಿಸ್ಥಿತಿಯಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಮಹಿಳೆಯ ಮಾರುಕಟ್ಟೆಯಲ್ಲಿನ ಉತ್ಪಾದಿತ ವಸ್ತುಗಳ ಬಗ್ಗೆ ಪ್ರಚಾರದಲ್ಲಿ ತೊಡಗಿಸಿಕೊಳ್ಳುವಂತೆ

ಮಾಡಿರುವ ಪ್ಯಾಶನ್ ಮೇಳಗಳು ವಿವಿಧ ರೀತಿಯ ಉತ್ಪನ್ನಗಳಿಗೆ ಮಹಿಳಾ ವಲಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ.

ಗುಡಿಕೈಗಾರಿಕೆಗಳಲ್ಲಿ ದುಡಿಯುವ ವಿವಿಧ ವೃತ್ತಿಗಳ ಕ್ಷೇತ್ರಗಳಲ್ಲಿ ಆಗುತ್ತಿರುವ ಹೊಸ ಬದಲಾವಣೆಗಳು ತೀವ್ರತರವಾದ ಪರಿಣಾಮವನ್ನು ಉಂಟುಮಾಡುತ್ತಿದೆ. ಅಷ್ಟೇ ಅಲ್ಲದೆ ಸಾಮಾಜಿಕ ರಂಗದ ಬೆಳವಣಿಗೆಯಲ್ಲಿಯೂ ಅನೇಕ ಬಗೆಯ ಗಂಭೀರವಾದ ಬದಲಾವಣೆಗಳು ಕಂಡುಬಂದಿದೆ. ಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳು ಅಭಿವೃದ್ಧಿಯಾಗಲು ಬೇಕಾಗುವಂತಹ ಪರಿಸರವನ್ನು ಸರ್ಕಾರವೇ ನಿರ್ಮಿಸಿಕೊಡುತ್ತಿರುವುದರಿಂದ ಗುಡಿಕೈಗಾರಿಕೆಯ ಉದ್ಯಮದ ಬಗ್ಗೆ ನಿರ್ಲಕ್ಷ್ಯದ ಧೋರಣೆ ಕಂಡುಬರುತ್ತದೆ ಎನ್ನುವುದು ವಿದ್ವಾಂಸರ ವಾದವಾಗಿದೆ.

ಇತ್ತೀಚಿನ ಯಾಂತ್ರೀಕರಣದ ಸಂಸ್ಕೃತಿಯು ಮಹಿಳೆಯರನ್ನು ನಿರುದ್ಯೋಗಿಗಳಾಗಿ ಮಾರ್ಪಡಿಸಿ ಕೇವಲ ಅನುಭೋಗದ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುತ್ತಿದೆ. ಪ್ರತಿಭೆಯನ್ನು ಮೂಲೆಗುಂಪು ಮಾಡುವಂತೆ ಮಾಡುತ್ತಿರುವ ಜಾಗತೀಕರಣ ಮಹಿಳೆಯರ ದುಡಿಮೆಯ ಪ್ರತಿಫಲ ದೊರೆಯದಂತೆ ಮಾಡುತ್ತಿದೆ. ಜಾಗತಿಕರಣದಿಂದ ಗುಡಿಕೈಗಾರಿಕಾ ವಲಯದ ಮಹಿಳೆಯರ ಕೈಯಿಂದ ಸಂಪೂರ್ಣವಾಗಿ ವೃತ್ತಿ ಕಳೆದುಹೋಗುವಂತೆ ಸ್ಥಿತಿ ನಿರ್ಮಾಣವಾಗಬಹುದು.

ಎಷ್ಟೋ ಕುಟುಂಬಗಳನ್ನು ಸಾಕುತ್ತಿದ್ದ ಮಹಿಳಾ ಉದ್ಯಮಗಳು ಇಂದು ತಾವು ತಯಾರಿಸದ ವಸ್ತುಗಳನ್ನು ಕೊಳ್ಳುವವರು. ಇಲ್ಲವೆ ಶಾಪಗ್ರಸ್ತವಾಗಿ ಪೀಡಿತರಾಗುತ್ತಿದ್ದಾರೆ. ಕೊನೆಯ ಪಕ್ಷ ಮನೆಯ ಖರ್ಚು ನಿಭಾಯಿಸುವಷ್ಟಾದರೂ ಗಳಿಕೆ ದೊರೆಯುವುದು ಸಾಧ್ಯವಾಗದಂತೆ ಸ್ಥಿತಿ ನಿರ್ಮಾಣವಾಗಿದೆ.

ಸಂಪೂರ್ಣವಾಗಿ ಪ್ರತಿಭೆಗೆ ಅವಕಾಶವಿತ್ತ ಜಾಗತೀಕರಣ ಇರುವ ಜ್ಞಾನವನ್ನು ಕಡಿಮೆ ಬಂಡವಾಳದಿಂದ ಹೆಚ್ಚು ಲಾಭ ಮಾಡಿ ಬರಿದು ಮಾಡುವ ತಂತ್ರಗಾರಿಕೆಯಿಂದ ಉದ್ಯೋಗವನ್ನು ಸೃಷ್ಟಿಸತೊಡಗಿದೆ. ಇದರಿಂದ ಮಹಿಳೆಯರು ಹಲವಾರು ವಿಧಗಳಲ್ಲಿ ಜಾಗತೀಕರಣದಲ್ಲಿ ಸಮಸ್ಯೆಗಳನ್ನೊಳಗೊಂಡು ನಲುಗುವಂತಾಗಿದೆ.

ಜಾಗತೀಕರಣದ ನೀತಿಯಿಂದ ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರ ಬದುಕಿನ ಅವಕಾಶಗಳು ಲಿಂಗ ತಾರತಮ್ಯ ಮತ್ತು ಅವರ ಬದುಕು ಉತ್ತಮಗೊಳ್ಳುವ ಸಾಧ್ಯತೆಗಳು ಇನ್ನು ಪ್ರಶ್ನೆಯಾಗಿಯೇ ಉಳಿದಿವೆ. ವಿದೇಶಿ ಬಂಡವಾಳ ಹರಿದು ಬರುವುದರಿಂದ ಸಾಂಪ್ರದಾಯಿಕ ಉತ್ಪಾದನಾ ವ್ಯವಸ್ಥೆಯ ಗುಡಿಕೈಗಾರಿಕೆಗಳು ವಿನಾಶದ ಹಾದಿ ಹಿಡಿದಿವೆ. ಇದರಿಂದ ಇವುಗಳನ್ನು ಅವಲಂಬಿಸಿಕೊಂಡಿದ್ದ ಮಹಿಳೆಯರು ಸ್ಥಳಾಂತರಕ್ಕೆ ಒಳಗಾಗಿದ್ದಾರೆ. ಹೊಟ್ಟೆ ಬಟ್ಟೆ ಬದುಕು ಇಂದು ಅಪಾಯ ಎದುರಿಸುತ್ತಿದೆ. ಇದೊಂದು ರೀತಿಯಲ್ಲಿ ಜಾಗತೀಕರಣದಿಂದ ಪುರುಷರು ಉದ್ಯೋಗ ಕಳೆದುಕೊಳ್ಳುತ್ತಿರುವುದರಿಂದ ಮಹಿಳೆಯರ ಮೇಲೆ ಒತ್ತಡ ಹೆಚ್ಚಾಗುತ್ತಿದೆ.

೪. ಮಹಿಳೆಯರಿಗಾಗುವ ತೊಡಕುಗಳು

"ವೇತನ ಸಹಿತ ಕಾರ್ಮಿಕ ಶಕ್ತಿಯಿಂದ ಮಹಿಳೆ ಹೊರಗಿರುವುದು ಅವರ ಶೋಷಣೆಯ ಮೂಲವಾಗಿದೆ. ಮಹಿಳೆ ಹೊರಗೆ ದುಡಿಯಲು ಮನೆಗೆಲಸ ಅವಳಿಗೆ ಕಟ್ಟಿಟ್ಟ ಚಾಕರಿ. "ಆದರೆ ಹೊಸ ಆರ್ಥಿಕ ನೀತಿಯ ಫಲವಾದ ಜಾಗತೀಕರಣ ಮಹಿಳೆಯರ ಲಿಂಗ ಸಂಬಂಧ ಆಯಾಮವನ್ನು ಕುರಿತಂತೆ ಅವರ ಬದುಕನ್ನು ಮೂರಬಟ್ಟೆ ಮಾಡಬಲ್ಲವು ಎಂಬುದರ ಕಡೆಗೆ ಗಮನ ಸೆಳೆದಿವೆ."[೬] ಮಹಿಳೆಯರ ಗುಡಿಕೈಗಾರಿಕೆಯಲ್ಲಿನ ಜಾಗತೀಕರಣ ನೀತಿಯ ಒತ್ತಡದ ಕಡೆ ನಡೆಯುವಂತೆ ಮಾಡಿದೆ. ಬಡ ಕುಟುಂಬಗಳಲ್ಲಿನ ಮಹಿಳೆಯರು ತೊಡಗಿಸಿಕೊಂಡ ಗುಡಿಕೈಗಾರಿಕೆಗಳು ಕಾಲನುಕಾಲದಿಂದ ನಡೆದುಕೊಂಡು ಬಂದಿದ್ದವುಗಳು ಇಂದು ಬದಲಾಯಿಸಿಕೊಳ್ಳುವ ಹಂತವನ್ನು ತಲುಪಿವೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಪೈಪೋಟಿ, ಉತ್ಪಾದನಾ ವ್ಯವಸ್ಥೆ ರದ್ದಾಗುವಂತಿದೆ.

ಜಾಗತೀಕರಣದ ಪ್ರಭಾವವು ಮಹಿಳೆಯರ ದುಡಿಮೆಯ ರಂಗಗಳು ಅತಂತ್ರಗೊಳಿಸಿದೆ. ಇದರಿಂದ ಬಡತನದ ಪ್ರಮಾಣ ತೀವ್ರಗೊಳ್ಳುತ್ತಿದೆ. ಖಾಸಗೀಕರಣದಿಂದಾಗಿ ಅಲ್ಲಿದ್ದ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಈ ಎಲ್ಲಾ ಬದಲಾವಣೆಗಳು ಮಹಿಳೆಯರ ಮೇಲೆ ಅಧಿಕ ಹೊರೆ ಹೊಣೆ ಹೇರುತ್ತಿವೆ. ಹೊಸ ಆರ್ಥಿಕ ನೀತಿಯಿಂದಾಗಿ ದುಡಿಮೆಯ ಲಿಂಗೀಕರಣಕ್ಕೆ ಒಳಗಾಗಿರುವುದರಿಂದ ಗುಡಿಕೈಗಾರಿಕೆಗಳ ಮಹಿಳಾ ದುಡಿಮೆಗಾರರ ಶೋಷಣೆ ಅಧಿಕಗೊಳ್ಳುತ್ತಿದೆ. ಇದರಿಂದ ಬಡತನವು ತೀವ್ರವಾಗಿ ಕುಟುಂಬದ ಹೊಣೆಯು ಮಹಿಳೆಯರ ಮೇಲೆ ಬೀಳುತ್ತಿದೆ. ಈ ಎಲ್ಲಾ ಬೆಳವಣಿಗೆಯಿಂದ ಗುಡಿಕೈಗಾರಿಕೆಗಳ ಮಹಿಳೆಯರ ಬದುಕಿನ ಮೇಲೆ ಅಪಾಯಕಾರಿ ಪರಿಣಾಮ ಬೀರುತ್ತಿದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಮಹಿಳೆಯರ ಹೊಟ್ಟೆ ಬಟ್ಟೆ, ದುಡಿಮೆ ಗೃಹವಾರ್ತೆ ಶಿಶುಪಾಲನೆ, ಕೌಟುಂಬಿಕ ಸಮಸ್ಯೆ, ಸಾಮಾಜೀಕರಣದ ಹಂತಗಳು ಅಪಾಯದ ಹಂತ ತಲುಪುವಂತೆ ಮಾಡಿದೆ. ಹಾಗಾಗಿ ಮಹಿಳೆಯರು ಇಂದು ಅಧಿಕ ಪ್ರಮಾಣದಲ್ಲಿ ಅನೌಪಚಾರಿಕ ದುಡಿಮೆ ವಲಯ ಪ್ರವೇಶಿಸುತ್ತಿದ್ದಾರೆ. ಮತ್ತಷ್ಟು ಮಹಿಳೆಯರು ಕೆಲಸ ಕಳೆದುಕೊಳ್ಳುವ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳಲ್ಲಿದ್ದಕ್ಕೆ ಜಾಗತೀಕರಣವೇ ಕಾರಣ. ಇಂದು ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರನ್ನು ಸುಲಭವಾಗಿ ಶೋಷಣೆ ಮಾಡುವಂತೆ ಆಗಿದೆ.

ಅಡಿಟಿಪ್ಪಣಿಗಳು

೧. Karnataka Journal of Politics, Pfo. B.K. Dattathri, Meaning of Globalization, Issue: January 2002, Lakshmi Publishing printing Bangalore, P: 12

೨. ಅದೇ. ಪುಟ: ೧೨

೩. ಪ್ರಭಾಕರ ಶಿಶಿಲ, ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು, ಪುಟ: ೧೧೯

೪. ಯೋಜನಾ ನಿಯತಕಾಲಿಕೆ, ಏಪ್ರಿಲ್ ೨೦೦೧, ಪುಟ: ೧೭

೫. ದಿಕ್ಸೂಚಿ, ಆಗಸ್ಟ್, ೨೦೦೦, ಪುಟ: ೪೯

೬. ಟಿ.ಆರ್. ಚಂದ್ರಶೇಖರ್, ಮಹಿಳೆ, ಆರ್ಥಿಕತೆ ಮತ್ತು ಅಭಿವೃದ್ಧಿ, ಪುಟ: ೦೭

******

ಅಧ್ಯಾಯ ೫

ಗುಲ್ಬರ್ಗಾ ನಗರದ ಗುಡಿಕೈಗಾರಿಕೆಗಳಲ್ಲಿ ಮಹಿಳೆಯರ ಸಹಭಾಗಿತ್ವ

ಅಧ್ಯಾಯ ೫

ಗುಲ್ಬರ್ಗಾ ನಗರದ ಗುಡಿಕೈಗಾರಿಕೆಗಳಲ್ಲಿ ಮಹಿಳೆಯರ ಸಹಭಾಗಿತ್ವ

ಪ್ರಬಂಧದ ಹಿಂದಿನ ಅಧ್ಯಯಗಳಲ್ಲಿ ಗುಡಿಕೈಗಾರಿಕೆಗಳ ಹುಟ್ಟು ಮತ್ತು ಬೆಳವಣಿಗೆ ಹಾಗೂ ಗುಡಿಕೈಗಾರಿಕೆಗಳಲ್ಲಿ ಮಹಿಳೆಯರ ಸ್ಥಾನಮಾನ ಮತ್ತು ಜಾಗತೀಕರಣದ ಸಂದರ್ಭದಲ್ಲಿ ಗುಡಿಕೈಗಾರಿಕೆಗಳ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲಾಗಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಗುಲ್ಬರ್ಗಾ ನಗರದ ವಿವಿಧ ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಸಹಬಾಗಿತ್ವ ಕುರಿತು ಚರ್ಚಿಸಲಾಗುವುದು. ಪ್ರಸ್ತುತ ಅಧ್ಯಯನಕ್ಕೆ ಗುಲಬರ್ಗಾ ನಗರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಕರ್ನಾಟಕದ ಉತ್ತರ ಭಾಗದಲ್ಲಿದ್ದು, ೧೯೫೬ರಲ್ಲಿ ಪುನರ್ ವಿಂಗಡನೆಯಾದಾಗ, ಹೈದಾರಾಬಾದ್ ಕರ್ನಾಟಕ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಕ್ಕೆ ಮೂರು ರಾಜ್ಯಗಳಲ್ಲಿ ಇದು ಒಂದಾಗಿದೆ. ಜಿಲ್ಲೆಯು ವಿಶಾಲ ಸಮತಟ್ಟಾದ ಪ್ರದೇಶವನ್ನು ಹೊಂದಿದ್ದು, ಉತ್ತರ ಅಕ್ಷಾಂಶ ಇವುಗಳ ನಡುವೆ ಹರಡಿಕೊಂಡಿದೆ. ಜಿಲ್ಲೆಯ ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಮತ್ತು ಉಸ್ಮಾನಬಾದ್ ಜಿಲ್ಲೆಗಳ ಗಡಿ ಪ್ರದೇಶವು ಮತ್ತು ಪೂರ್ವಭಾಗದಲ್ಲಿ ಆಂಧ್ರಪ್ರದೇಶದ ಮೇಡಕ ಹಾಗೂ ಮೆಹಬೂಬ್ ನಗರ ಜಿಲ್ಲೆಗಳ ಗಡಿಯನ್ನು ಪಡೆದಿದೆ. ಉತ್ತರದಲ್ಲಿ ಬೀದರ ಜಿಲ್ಲೆಯಿಂದ ದಕ್ಷಿಣದಲ್ಲಿ ರಾಯಚೂರು ಜಿಲ್ಲೆಯಿಂದ ಮತ್ತು ಪಶ್ಚಿಮದಲ್ಲಿ ವಿಜಾಪುರ ಜಿಲ್ಲೆಯಿಂದ ಆವರಿಸಿಲ್ಪಟ್ಟಿದೆ. ಈ ಜಿಲ್ಲೆಯು ನೈಸರ್ಗಿಕ ಸಂಪನ್ಮೂಲವಾದ ಅನೇಕ ನದಿಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾಗಿ, ಭೀಮಾ ನದಿ ಮುಖ್ಯವಾದ ನದಿಯಾಗಿದ್ದು ಕಾಗಿಣೆ, ಬೆಣ್ಣೆ ತೊರೆ, ಅಮರ್ಜಾ ಇವು ಉಪನದಿಗಳಿವೆ

ಗುಲ್ಬರ್ಗಾವನ್ನು 'ಕಲಬುರ್ಗಿ', 'ಕಲ್ಬುರ್ಗಿ' ಮತ್ತು 'ಗುಲ್ಬರ್ಗಾ' ಎಂಬ ಪರ್ಯಾಯ ಹೆಸರುಗಳಿಂದ ಕರೆಯಲಾಗುತ್ತದೆ. ಇದು ಐತಿಹಾಸಿಕವಾಗಿ ಸುಮಾರು ಕ್ರಿ.ಶ. ೧೨, ೧೩ನೇ ಶತಮಾನದ ಶಿಲಾಶಾಸನದಲ್ಲಿ

ಕಲಂಬರಿಗೆ ಎಂದು ಉಲ್ಲೇಖಿತಗೊಂಡಿರುವುದು ಶಾಸನದಿಂದ ತಿಳಿದು ಬರುತ್ತದೆ. ಆದರೆ ವಿಜಯನಗರಕ್ಕೆ ಬಂದಿದ್ದ ಪರ್ಷಿಯನ್ ರಾಯಭಾರಿ ರಝಾಕನು ಇದನ್ನು 'ಕಲಬುರ್ಗ' ಎಂದು ಹೇಳಿದ್ದಾನೆ. ಇದೆ ಮುಂದೆ ಗುಲಬರ್ಗಾ ಎಂಬ ನಾಮಪದವನ್ನು ಹೊಂದಲು ಕಾರಣವಾಯಿತು ಎಂದು ವಿದ್ವಾಂಸರು ಹೇಳುತ್ತಾರೆ. ಗುಲ್ಬರ್ಗಾ ಎಂಬುದು ಹೆಚ್ಚು ಕಡಿಮೆ 'ಕಲಬುರಗಿ' ಪದದ ಫಾರಿಸೀಕರಣವಾಗಿದ್ದು, ಪಾರಸೀಯಲ್ಲಿ ಗುಲ್ ಎಂದರೆ ಹೂವು ಬರ್ಗ ಎಂದರೆ ಎಲೆ ಎಂಬ ಅರ್ಥವಿದೆ. ಒಟ್ಟಿನಲ್ಲಿ ಕಲಬುರಗಿ ಎಂಬ ಹೆಸರು ಕ್ರಿ.ಶ. ೧೬ನೇ ಶತಮಾನದವರೆಗೂ ರೂಢಿಯಲ್ಲಿದ್ದು ಮುಸ್ಲಿಂರ ಆಡಳಿತದ ಪ್ರಭಾವದಿಂದಾಗಿ ನಂತರದಲ್ಲಿ ಗುಲಬರ್ಗಾ ಎಂಬ ರೂಪವನ್ನು ಪಡೆದಿದೆ. ಈಗಲೂ ಸಹ ಇದೇ ಹೆಸರಿನಿಂದ ಕರೆಯಲಾಗುತ್ತದೆ.

ಗುಲಬರ್ಗಾ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶವು ೧೬,೨೨೪ ಚ.ಕಿ.ಮಿ. ಇದ್ದು ಇದು ರಾಜ್ಯದ ಶೇ ೮.೪೬ರಷ್ಟು ಪ್ರದೇಶವನ್ನು ಒಳಗೊಂಡಿದೆ. ರಾಜ್ಯದ ವಿಸ್ತೀರ್ಣದಲ್ಲಿ ಎರಡನೇ ದೊಡ್ಡ ಜಿಲ್ಲೆಯಾಗಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆ ೨೫,೮೨,೧೬೯ ಇದ್ದು (೧೯೯೧ ಜನಗಣತಿಯ ಪ್ರಕಾರ), ಇದರಲ್ಲಿ ೧೯,೭೨,೩೬೪ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿದೆ. ೬,೮೦,೮೦೩ ನಗರ ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣ ೫೨.೦೭ ಇದ್ದು ಇದರಲ್ಲಿ ಪುರುಷ ಸಾಕ್ಷರತೆಯ ಪ್ರಮಾಣ ೩೮.೫೪ ಮತ್ತು ಮಹಿಳಾ ಸಾಕ್ಷರತೆ ೨೪.೪೯ ಪ್ರಮಾಣವನ್ನು ಹೊಂದಿದೆ. ಸುಮಾರು ಶೇ ೧೪ರಷ್ಟು ಸಾಕ್ಷರತೆಯ ವ್ಯತ್ಯಾಸವನ್ನು ಪುರುಷರಲ್ಲಿ ಮತ್ತು ಮಹಿಳೆಯರಲ್ಲಿ ಕಾಣಬಹುದು. ಅಂದರೆ ಮಹಿಳೆಯ ಸಾಕ್ಷರತೆಯ ಪ್ರಮಾಣ ಶೇ ೧೪ ರಷ್ಟು ಕಡಿಮೆಯಿದೆ.

ಗುಲ್ಬರ್ಗಾ ಜಿಲ್ಲೆಯು ಕೈಗಾರಿಕೆಯಲ್ಲಿ ರಾಜ್ಯದಲ್ಲಿ ಹಿಂದುಳಿದಿರುವ ಜಿಲ್ಲೆಗಳಲ್ಲಿ ಒಂದಾಗಿದೆ. ಕೈಗಾರಿಕಾ ಬೆಳವಣಿಗೆಗೆ ಸಂಬಂಧಿಸಿದಂತೆ ಇದು ರಾಜ್ಯದ ೧೨ನೇ ಸ್ಥಾನವಾಗಿದೆ. ಜಿಲ್ಲೆಯಲ್ಲಿ ಒಟ್ಟು ೧೫ ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಗಳಿವೆ. ಇದರಲ್ಲಿ ಸಿಮೆಂಟ್ ಕಾರ್ಖಾನ್, ಬಟ್ಟೆ ಮಿಲ್ಲುಗಳು, ಸ್ಟೋನ್ ಡ್ರೆಸ್ಸಿಂಗ್, ಎಣ್ಣೆ ಮಿಲ್ಲುಗಳು, ಕಾಣಬಹುದು. ಇದರಂತೆ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ ೫,೦೦೦ ಇದ್ದು ಇವುಗಳು ಆಹಾರ ಸಂಸ್ಕರಣೆ ವಸ್ತ್ರ ಮತ್ತು ಸಿದ್ಧ ಉಡುಪು, ರಾಸಾಯನಿಕ ವಸ್ತುಗಳ ತಯಾರಿಕೆ, ಚರ್ಮೋದ್ಯಮ ಮುದ್ರಣ, ಪ್ಲಾಸ್ಟಿಕ್ ಮೊದಲಾದ ಸರಕುಗಳ ಉತ್ಪಾದನಾ ಘಟಕಗಳಲ್ಲಿ ಹಂಚಿಕೆಯಾಗಿವೆ.)

ಜಿಲ್ಲೆಯಲ್ಲಿ ಸುಮಾರು ಶೇ ೧೦ ರಷ್ಟು ಗುಡಿಕೈಗಾರಿಕೆಗಳನ್ನು ಕಾಣಬಹುದು. ಇವುಗಳಲ್ಲಿ ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಬಡಗಿತನ, ಬೀಡಿ ಕಟ್ಟುವುದು ಈ ಎಲ್ಲಾ ಗುಡಿಕೈಗಾರಿಕೆಗಳು ಜಿಲ್ಲೆಯುದ್ದಕ್ಕೂ ವ್ಯಾಪಿಸಿರುವುದು ಕಂಡುಬಂದಿದೆ. ಇವು ವಂಶಪಾರಂಪರ್ಯವಾಗಿ ಬಂದ ವೃತ್ತಿಗಳಾದ್ದು, ಬೇಡಿಕೆಯನ್ನಾದರಿಸಿ ವಸ್ತುಗಳನ್ನು ತಯಾರಿಸುತ್ತಾರೆ. ಗುಲ್ಬರ್ಗಾ ನಿಜಾಮರ ಕಾಲದಲ್ಲಿ ಕುಚ್ಚಿನನ ಟೋಪಿಗಳನ್ನು ಹಾಕುತ್ತಿದ್ದ ಗೊಂಡೆ ತಯಾರಿಕೆಗೆ, ಪ್ರಸಿದ್ಧ ಪಡೆದಿತ್ತು. ಈ ವೃತ್ತಿಯಲ್ಲಿ ೫೦೦ ಮಹಿಳೆಯರು ಕೆಲಸ ಮಾಡುತ್ತಿದ್ದುದಕ್ಕೆ

ಆಧಾರಗಳಿವೆ. ರಾಜ್ಯ ಪುನರ್ ವಿಂಗಡನೆಗೂ ಪೂರ್ವದಲ್ಲಿ ಜಿಲ್ಲೆಯ ಕಮಲಾಪುರ, ಯಾದಗಿರಿ ಮತ್ತು ಗುಲ್ಬರ್ಗಾಗಳಲ್ಲಿ ಒಂದೊಂದು ಗುಡಿಕೈಗಾರಿಕೆಗಳ ತರಬೇತಿ ಸಂಸ್ಥೆಗಳಿದ್ದು ಕುಶಲಕರ್ಮಿಗಳಿಗೆ ತರಬೇತಿ ನೀಡುತ್ತಿದ್ದವು. ಗುಲ್ಬರ್ಗಾದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗ್ರಾಮಕೈಗಾರಿಕೆಗಳ ಅಭಿವೃದ್ಧಿ ಕೇಂದ್ರವು ೧೯೫೯ರಲ್ಲಿ ಮುಚ್ಚಲ್ಪಟ್ಟಿತ್ತು. ಸ್ಥಳೀಯ ಗುಡಿಕೈಗಾರಿಕೆಯ ಕುಶಲಕರ್ಮಿಗಳಿಗೆ, ತರಬೇತಿಯನ್ನೊದಗಿಸುವ ಉದ್ದೇಶದಿಂದ ೧೯೬೧ರಲ್ಲಿ ಕುಶಲಕರ್ಮಿ ಯೋಜನೆಯಡಿಯಲ್ಲಿ ಗುಲ್ಬರ್ಗಾದಲ್ಲಿ ಫ್ರೈಲ್ ಕಾರ್ಪೆಟ್ ತರಬೇತಿ ಸಂಸ್ಥೆಯನ್ನು ಪ್ರಾರಂಬಿಸಲಾಯಿತು. ಗುಡಿಕೈಗಾರಿಕೆ ಸರಕುಗಳಿಗೆ ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸಿಕೊಡುವ ಉದ್ದೇಶದಿಂದ ಗುಲ್ಬರ್ಗಾದಲ್ಲಿ ೧೯೬೦ರಲ್ಲಿ ಕರಕುಶಲ ಮಳಿಗೆಯನ್ನು ತೆರೆಯಲಾಗಿದೆ. ಜಿಲ್ಲಾ ಕೈಗಾರಿಕಾ ಕೇಂದ್ರವು ಗುಡಿಕೈಗಾರಿಕೆಗಳಾದ ಹೊಲಿಗೆ, ಕಸೂತಿ, ನೇಕಾರಿಕೆ, ಚಾಪೆ, ಬಡಗಿತನದ ಕಮ್ಮಾರಿಕೆ, ಬೇಕಾಗುವ ಸಲಕರಣೆಗಳಿಗೆ ರಿಯಾಯಿತಿ ಸೌಲಭ್ಯವನ್ನು ಒದಗಿಸಿವೆ. ಗುಲ್ಬರ್ಗಾ ಜಿಲ್ಲೆಯ ಮೂರು ಮಹಿಳಾ ಮಂಡಳಿಗಳಿಗೆ ಸಾಲ ಸೌಲಭ್ಯವನ್ನು ಒದಗಿಸಿವೆ. ಹೀಗೆ ಸ್ವಾತಂತ್ರ್ಯ ಪೂರ್ವದಿಂದಲೂ ಗುಡಿಕೈಗಾರಿಕೆಗಳು ಗುಲ್ಬರ್ಗಾ ನಗರದಲ್ಲಿವೆ. ಈ ಕೈಗಾರಿಕೆಗಳಲ್ಲಿ ಮಹಿಳೆಯರು ತೊಡಗಿಸಿಕೊಂಡಿರುವುದು ಕಂಡುಬಂದಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಗುಲ್ಬರ್ಗಾವು ಸಣ್ಣ ಉದ್ಯಮಗಳನ್ನು ಒಳಗೊಂಡು ಕೆಲವು ಮುಖ್ಯ ಗುಡಿಕೈಗಾರಿಕೆಗಳನ್ನು ಒಳಗೊಂಡ ನಗರವಾಗಿದೆ. ಈ ಗುಡಿಕೈಗಾರಿಕೆಗಳಲ್ಲಿ ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಬಡಗಿತನ ಬೀಡಿ ಕಟ್ಟುವುದು, ಚಪ್ಪಲಿ ತಯಾರಿಸುವುದು, ಕಸೂತಿ, ಬುಟ್ಟಿ ಹೆಣೆಯುವುದು ಮತ್ತು ಊದಿನಕಡ್ಡಿ ತಯಾರಿಕೆ ಇವುಗಳು ಮುಖ್ಯವಾದ ಗುಡಿಕೈಗಾರಿಕೆಗಳಾಗಿವೆ. ಪ್ರಸ್ತುತ ಅಧ್ಯಯನಕ್ಕೆ ಐದು ಗುಡಿಕೈಗಾರಿಕೆಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಕಮ್ಮಾರಿಕೆ, ಕುಂಬಾರಿಕೆ, ಬಡಗಿತನ, ನೇಕಾರಿಕೆ ಇವುಗಳು ವಂಶಪಾರಂಪರ್ಯಗತವಾಗಿ ಬಂದ ವಲಯಗಳಾಗಿವೆ. ಇವು ಇದರಲ್ಲಿ ಬೀಡಿ ಕಟ್ಟುವ ಉಪಕಸಬನ್ನು ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಗುಲ್ಬರ್ಗಾ ನಗರ ಪ್ರದೇಶದಲ್ಲಿ ಬೀಡಿ ಕಟ್ಟುವ ಕಸುಬಿನಲ್ಲಿ ಹೆಚ್ಚು ಮುಸ್ಲಿಂ ಮಹಿಳೆಯರು ಅವಲಂಬಿತರಾಗಿದ್ದಾರೆ. ಆದ್ದರಿಂದ ಈ ಕಸುಬಿನ ೧೫ ಕುಟುಂಬಗಳನ್ನು ಸಂದರ್ಶಿಸಲಾಗಿದೆ. ಒಟ್ಟು ಅಧ್ಯಯನಕ್ಕೆ ಈ ಐದು ಗುಡಿಕೈಗಾರಿಕೆಗಳಿಂದ ೭೫ ಕುಟುಂಬಗಳನ್ನು ನೇರವಾಗಿ ಸಂದರ್ಶಿಸುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕ ರೂಪದಲ್ಲಿ ನೀಡಿ ವಿಶ್ಲೇಷಣೆ ಮಾಡಲಾಗಿದೆ. ಪ್ರತಿ ಗುಡಿಕೈಗಾರಿಕೆ ೧೫ ಕುಟುಂಬಗಳನ್ನು ಸಂದರ್ಶಿಸಲಾಗಿದೆ. ಗುಡಿಕೈಗಾರಿಕೆಗಳಲ್ಲಿ ಅವಲಂಬಿತವಾಗಿರುವ ಮಹಿಳೆಯರನ್ನು ನೇರವಾಗಿ ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಗಿದೆ. ಇದರಲ್ಲಿ ಮಹಿಳೆಯರು ಅವಲಂಬಿತವಾಗಿರುವ ಗುಡಿಕೈಗಾರಿಕೆಗಳ ಸ್ಥಿತಿಗತಿಗಳು, ಮಹಿಳೆಯರ ಪಾತ್ರ ಮತ್ತು ಮಾರುಕಟ್ಟೆ ಹೀಗೆ ಆದಾಯ, ದುಡಿಮೆ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತಹ ಪ್ರಶ್ನಾವಳಿಗಳನ್ನು ರಚಿಸಲಾಗಿದ್ದು ಪ್ರಶ್ನಾವಳಿಗಳ ಮೂಲಕ ಸಂದರ್ಶಿಸಿ ಕೌಟುಂಬಿಕ ಅಂತಸ್ತು, ಸಾಕ್ಷರತೆ, ಸ್ವಸಹಾಯ ಸಂಘಗಳ ಅರಿವು ಮುಂತಾದ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

ಕೋಷ್ಟಕ ೧

ಗುಡಿಕೈಗಾರಿಕೆಗಳಲ್ಲಿ ಅವಲಂಬಿತ ಮಹಿಳೆಯರ ಜಾತಿವಾರು ವಿವರ

ಕ್ರ.ಸಂ.	ಜಾತಿಯ ವಿವರ	ಮಹಿಳೆಯರು	ಶೇಕಡಾವಾರು
೦೧	ಕಮ್ಮಾರರು	೧೫	೨೦
೦೨	ಕುಂಬಾರರು	೧೫	೨೦
೦೩	ನೇಕಾರರು	೧೫	೨೦
೦೪	ಬಡಿಗೇರರು	೧೫	೨೦
೦೫	ಮುಸ್ಲಿಂರು	೧೫	೨೦
	ಒಟ್ಟು	೭೫	೧೦೦

ಈ ಮೇಲಿನ ಎಲ್ಲಾ ಜಾತಿಯ ಕುಟುಂಬಗಳ ಮಹಿಳೆಯರನ್ನ ಆಯ್ಕೆಮಾಡಿಕೊಂಡ ಉದ್ದೇಶ ಈ ಎಲ್ಲಾ ಗುಡಿಕೈಗಾರಿಕೆಗಳ ಮಾಹಿತಿಯನ್ನು ಹಾಗೂ ಕುಟುಂಬಕ್ಕೆ ಸಂಬಂಧಿಸಿದ ವಿವರಗಳನ್ನು ಮತ್ತು ಅವರ ಪಾತ್ರ ಹಾಗೂ ಸಾಕ್ಷರತೆ, ಅರಿವು ಸಮಗ್ರ ಮಾಹಿತಿಯನ್ನು ತಿಳಿಯಲು ಈ ಮೇಲಿನ ಎಲ್ಲಾ ಗುಡಿಕೈಗಾರಿಕೆ ಮಹಿಳೆಯರನ್ನು ಅಧ್ಯಯನಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

ಈ ಮೇಲಿನ ಜಾತಿಗಳನ್ನು ಗಮನಿಸಿದಾಗ ಗುಡಿಕೈಗಾರಿಕೆಗಳು ವಂಶಪರಂಪರಾಗತವಾಗಿ ಬೆಳೆದುಕೊಂಡು ಬಂದಿರುವುದು ಸ್ಪಷ್ಟವಾಗಿ ತಿಳಿಯಬಹುದು. ಒಟ್ಟು ೭೫ ಕುಟುಂಬಗಳಲ್ಲಿ ಜಾತಿವಾರು ೧೫ ಕುಟುಂಬಗಳಲ್ಲಿ ಸಂದರ್ಶಿಸಲಾಗಿದೆ. ಇಲ್ಲಿ ಜಾತಿಯೇ ತಿಳಿಸಿಕೊಳ್ಳುವಂತೆ ಕಮ್ಮಾರರು ಕಬ್ಬಿಣದ ಕೆಲಸವನ್ನು ಮಾಡುವವರು, ಕುಂಬಾರರು ಮಣ್ಣಿನ ಕೆಲಸವನ್ನು ಮಾಡುವವರು, ನೇಕಾರರು ವಸ್ತ್ರಗಳನ್ನು ನೇಯುವರು, ಬಡಿಗೇರು, ಮರದ ವಸ್ತುಗಳನ್ನು ತಯಾರಿಸುವರಾಗಿದ್ದಾರೆ. ಆದರೆ ಮುಸ್ಲಿಂ ಮಹಿಳೆಯರು ಮಾತ್ರ ಬೀಡಿ ಕಟ್ಟುವ ಕೈಗಾರಿಕೆಯಲ್ಲಿ ತೊಡಗಿದವರಾಗಿದ್ದಾರೆ. ಇದು ಗುಲ್ಬರ್ಗಾ ನಗರ ಪ್ರದೇಶದಲ್ಲಿ ಬೀಡಿ ಕಟ್ಟುವ ಈ ಗುಡಿಕೈಗಾರಿಕೆಯು ನಿಜಾಮರ ಕಾಲದಿಂದಲೂ ವಂಶ ಪರಂಪರಾಗತವಾಗಿ ಬಂದ ಕಸುಬಾಗಿದೆ. ಈ ವೃತ್ತಿಯಲ್ಲಿ ಮೊದಲಿನಿಂದಲೂ ಮುಸ್ಲಿಂ ಮಹಿಳೆಯರೇ ಪ್ರಮುಖವಾಗಿ ಕಂಡುಬರುತ್ತಾರೆ. ಯಾವ ಪ್ರದೇಶದಲ್ಲಿಯಾದರೂ ಮುಸ್ಲಿಂರೇ ಈ ವೃತ್ತಿಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಈ ರೀತಿ ಆಯಾ ಜಾತಿಗಳು ತಮ್ಮ ತಮ್ಮ ಕುಲಕಸುಬುಗಳನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಇವುಗಳಲ್ಲಿ ಮಹಿಳೆಯರ ಪಾತ್ರ ಪ್ರಮುಖವಾದುದು.

ಕೋಷ್ಟಕ ೨

ಮಹಿಳಾ ಸಾಕ್ಷರತೆಯ ವಿವರ

ಕ್ರ.ಸಂ	ಸಾಕ್ಷರತೆಯ ವಿವರ	ಮಹಿಳೆಯರ ಸಂಖ್ಯೆ	ಶೇಖಡವಾರು
೦೧	ಅನಕ್ಷರಸ್ಥರು	೫೦	೬೬.೬೬
೦೨	ಪ್ರಾಥಮಿಕ	೨೦	೨೬.೬೭
೦೩	ಪ್ರೌಢ	೦೫	೦೬.೬೭
೦೪	ಇತರೆ	-	-
	ಒಟ್ಟು	೭೫	೧೦೦.೦೦

ಈ ಗುಡಿಕೈಗಾರಿಕೆಗಳಲ್ಲಿ ಅವಲಂಬಿತವಾಗಿರುವ ೭೫ ಜನ ಮಹಿಳೆಯರ ಸಾಕ್ಷರತೆಯನ್ನು ಗಮನಿಸಿದಾಗ ಹೆಚ್ಚು ಅನಕ್ಷರಸ್ಥರು ಇರುವುದು ಕಂಡುಬಂದಿದೆ. ಮೇಲಿನ ಕೋಷ್ಟಕದ ಅಂಕಿಅಂಶಗಳನ್ನು ಗಮನಿಸಿದಾಗ ಶೇ ೬೬.೬೬ ರಷ್ಟು ಅನಕ್ಷರಸ್ಥ ಮಹಿಳೆಯರಿದ್ದಾರೆ. ಶೇ ೨೬.೬೭ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದರೆ, ಶೇ ೬.೬೭ರಷ್ಟು ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಹೆಚ್ಚು ಅನಕ್ಷರಸ್ಥರು ಮಹಿಳೆಯರಾಗುವುದರಿಂದ ತಮ್ಮ ಕುಟುಂಬ ಅವಲಂಬಿಸಿರುವ ವೃತ್ತಿಯನ್ನು ಅವಲಂಬಿಸಿದ್ದು, ಇವರಿಗೆ ಇದು ಸಾಮಾನ್ಯವಾಗಿದೆ. ಅಂದರೆ ನಮ್ಮ ಮನೆಯ ಕೆಲಸ ಎನ್ನುವ ಭಾವನೆ ಇವರಲ್ಲಿ ಒಡಮೂಡಿದೆ ಎನ್ನಬಹುದು. ಆದರೆ ಕೆಲವು ಮಹಿಳೆಯರು ನಮ್ಮ ಮಕ್ಕಳು ನಮ್ಮಂತೆಯಾಗಬಾರದು, ಇನ್ನೂ ಉತ್ತಮ ಸ್ಥಿತಿಯಲ್ಲಿರಬೇಕೆಂದು ಅವರಿಗೆ ಉತ್ತಮ ಶಿಕ್ಷಣವನ್ನು ಕೊಡಲು ಯತ್ನಿಸುತ್ತಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೩

ಮಹಿಳೆ ದುಡಿಮಗಾರರ ವಯೋಮಾನದ ವವಿರ

ಕ್ರ.ಸಂ.	ವಯೋಮಾನ	ಮಹಿಳೆಯರ ಸಂಖ್ಯೆ	ಶೇಕಡವಾರು
೦೧	೧೮ ೨೫	೧೦	೧೩.೩೩
೦೨	೨೬ ೩೦	೪೦	೫೩.೩೩
೦೩	೩೧ ೩೫	೧೫	೨೦.೦೦
೦೪	೩೬ ೪೦	೦೫	೦೬.೬೭
೦೫	೪೧ ಕ್ಕಿಂತ ಹೆಚ್ಚು	೦೫	೦೬.೬೭
	ಒಟ್ಟು	೭೫	೧೦೦.೦೦

ಕೋಷ್ಟಕ ೩ರ ಅಂಕಿಅಂಶಗಳನ್ನು ನೋಡಿದಾಗ ಗುಡಿಕೈಗಾರಿಕೆಗಳಲ್ಲಿ ಅವಲಂಬಿತವಾಗಿರುವ ಮಹಿಳೆಯರ ಶೇ ೭೩ಕ್ಕಿಂತ ಹೆಚ್ಚು ಮಹಿಳೆಯರು ೨೬ ೩೫ ವರ್ಷದವರಾಗಿದ್ದು ಕಮ್ಮಾರಿಕೆ, ಕುಂಬಾರಿಕೆ, ಬಡಿಗಿತನ ಕಸುಬುಗಳಲ್ಲಿ ನಿರುತರಾದ ಮಹಿಳೆಯರು ಈ ವಯೋಮಾನದವರು ಹೆಚ್ಚಾಗಿದ್ದಾರೆ. ೧೮ ೨೫ ಮತ್ತು ೪೧ಕ್ಕಿಂತ ಹೆಚ್ಚಿನ ವಯೋಮಾನದವರು ಬೀಡಿ ಕಟ್ಟುವ ಕೆಲಸದಲ್ಲಿ ತೊಡಗಿದ್ದಾರೆ. ಇವರೆಲ್ಲರೂ ಮುಸ್ಲಿಂ ಜಾತಿಗೆ ಸೇರಿದವರಾಗಿದ್ದಾರೆ. ಬೀಡಿ ಕಟ್ಟುವುದು ಸುಲಭ ಕೆಲಸವಾಗಿರುವುದರಿಂದ ಮುಸ್ಲಿಂ ಜಾತಿಯಲ್ಲಿ ಹೆಚ್ಚಾಗಿ ಮಹಿಳೆಯರು ಮತ್ತು ವೃದ್ಧರು ಈ ಕೆಲಸಗಳಲ್ಲಿ ತೊಡಗಿರುತ್ತಾರೆ. ಹೀಗೆ ವಯೋಮನವು ಆಯ ಕಸಬುನಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎಂದು ಹೇಳಬಹುದು.

ಕೋಷ್ಟಕ ೪

ಕುಟುಂಬವಾರು ಧರ್ಮದ ವಿವರ

ಕ್ರ.ಸಂ.	ಧರ್ಮ	ಸಂಖ್ಯೆ	ಶೇಕಡ
೦೧	ಹಿಂದೂ	೬೦	೮೦.೦೦
೦೨	ಮುಸ್ಲಿಂ	೧೫	೨೦.೦೦
	ಒಟ್ಟು	೭೫	೧೦೦.೦೦

ಕುಟುಂಬವಾರು ಧರ್ಮದ ವಿವರವನ್ನು ನೋಡಿದಾಗ ಹೆಚ್ಚು ಹಿಂದೂ ದರ್ಮವನ್ನು ಹೊಂದಿದ ಕುಟುಂಬಗಳಿವೆ. ಶೇ ೮೦ರಷ್ಟು ಹಿಂದೂ ಧರ್ಮವನ್ನು, ಶೇ ೧೨೦ರಷ್ಟು ಮುಸ್ಲಿಂ ಧರ್ಮದವರು ಇಲ್ಲಿರುವ ಎಲ್ಲಾ ಮುಸ್ಲಿಂ ಕುಟುಂಬಗಳು ಬೀಡಿ ಕಟ್ಟುವ ಕಸುಬುನಲ್ಲಿ ಅವಲಂಬಿತರಾಗಿದ್ದಾರೆ. ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ ಮತ್ತು ಬಡಿಗಿತನದಲ್ಲಿ ತೊಡಗಿರುವ ಎಲ್ಲಾ ಕುಟುಂಬಗಳು ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದಾರೆ.

ಕೋಷ್ಟಕ ೫

ಮಹಿಳೆಯರ ವೈವಾಹಿಕ ಸ್ಥಾನಮಾನದ ವಿವರ

ಕ್ರ.ಸಂ.	ವೈವಾಹಿಕ ಸ್ಥಾನಮಾನ	ಮಹಿಳೆಯರ ಸಂಖ್ಯೆ	ಶೇಕಡವಾರು
೦೧	ವಿವಾಹಿತರು	೬೦	೮೦.೦೦
೦೨	ಅವಿವಾಹಿತರು	೧೦	೧೩.೩೪
೦೩	ವಿದುವೆಯರು	೦೫	೦೬.೬೬
	ಒಟ್ಟು	೭೫	೧೦೦.೦೦

ಸಂದರ್ಶನ ಮಾಡಿದ ೭೫ ಮಹಿಳೆಯರಲ್ಲಿ ಶೇ ೮೦ ರಷ್ಟು ಮಹಿಳೆಯರು, ವಿವಾಹಿತರಾಗಿದ್ದಾರೆ. ಶೇ ೧೩ ರಷ್ಟು ವಿವಾಹಿತರಾಗಿಲ್ಲ. ಮತ್ತು ಶೇ ೬೦ ರಷ್ಟು ಮದುವೆಯರಿದ್ದಾರೆ. ವಿವಾಹಿತರಾದ ಹೆಚ್ಚು ಮಹಿಳೆಯರು ತಮ್ಮ ಗಂಡನ ಜೊತೆ ಕೆಲಸದಲ್ಲಿ ಭಾಗಿಯಾಗಿದ್ದಾರೆ. ಮದುವೆಯಾದವರೆಲ್ಲರೂ ಬೀಡಿ ಕಟ್ಟುವುದು ಮತ್ತು ನೇಕಾರಿಕೆ ವೃತ್ತಿಯನ್ನು ಅವಲಂಬಿಸಿದ್ದಾರೆ. ಕಮ್ಮಾರಿಕೆ, ಕುಂಬಾರಿಕೆ ಮತ್ತು ಬಡಿಗಿತನ ಕೆಲಸಗಳೆಲ್ಲವು ಕುಟುಂಬದ ಸದಸ್ಯರೊಂದಿಗೆ ನೆರವೇರುತ್ತವೆ. ಇಲ್ಲಿ ಮಹಿಳೆಯರ ಪಾತ್ರ ಬಹಳ ಮಹತ್ವದ್ದಾದಾಗಿದೆ ಎಂದು ಹೇಳಬಹುದು.

ಕೋಷ್ಟಕ ೬

ಕುಟುಂಬದ ವಾರ್ಷಿಕ ಆದಾಯ ವಿವರ

ಕ್ರ.ಸಂ.	ಆದಾಯ ವಿವರ	ಕುಟುಂಬಗಳ ಸಂಖ್ಯೆ	ಶೇಕಡವಾರು
೦೧	೫,೦೦೦ ೧೦,೦೦೦	೭೦	೯೩.೩೩
೦೨	೧೦,೦೦೧ ೧೫,೦೦೦	೦೫	೦೬.೬೭
೦೩	೧೫,೦೦೧ ೨೫,೦೦೦	-	-
೦೪	೨೫,೦೦೦ಕ್ಕಿಂತ ಹೆಚ್ಚು	-	-
	ಒಟ್ಟು	೭೫	೧೦೦.೦೦

ಈ ಮೇಲಿನ ಕೋಷ್ಟಕದಲ್ಲಿ ಕಂಡಂತೆ ಗುಡಿಕೈಗಾರಿಕೆಗಳಲ್ಲಿ ಅವಲಂಬಿತ ಮಹಿಳೆಯರ ಕೌಟುಂಬಿಕ ಆದಾಯದ ವಿವಿರಗಳನ್ನು ನೋಡಿದಾಗ ಶೇ ೯೩ರಷ್ಟು ಮಹಿಳೆಯರ ಆದಾಯ ೫,೦೦೦ದಿಂದ ೧೦,೦೦೦ದವರೆಗೆ ಕಂಡುಬರುತ್ತದೆ. ಆದರೆ ಈ ಆದಾಯವು ಮಹಿಳೆಯರ ಕೈಗೆ ಸಿಗುವುದಿಲ್ಲ. ಏಕೆಂದರೆ ಪುರುಷಶಾಹಿ ಸಮಾಜದಿಂದ ಮಹಿಳೆಯರ ಆದಾಯವೆಲ್ಲವು ಪುರುಷರ ಕೈಗೆ ಹೋಗುತ್ತದೆ. ಇಲ್ಲಿ ದುಡಿಮೆ ಮಾತ್ರ ಮಹಿಳೆಗೆ ಉಳಿಯುತ್ತದೆ ಎಂದು ಸಂದರ್ಶನದಿಂದ ತಿಳಿದುಬಂದಿದೆ. ಈ ಆದಾಯದ ಮಹಿಳೆಯರಲ್ಲಿರುವ ಹೆಚ್ಚಾಗಿ ಕಮ್ಮಾರಿಕೆ, ಬಡಿಗಾರಿಕೆ, ನೇಕಾರಿಕೆ, ಕುಂಬಾರಿಕೆ, ಬೀಡಿ ಕಟ್ಟುವುದು ವೃತ್ತಿಗಳಳಲ್ಲಿ ಕಂಡುಬಂದಿದೆ. ಇದರಂತೆ ಶೇ ೬.೬೭ ರಷ್ಟು ಮಹಿಳೆಯರ ಆದಾಯವು ೧೦,೦೦೦ ದಿಂದ ೧೫,೦೦೦ದವರೆಗೂ ಕಂಡುಬಂದಿದೆ. ಈ ಆದಾಯವು ಗುಡಿಕೈಗಾರಿಕೆಗಳ ಎಲ್ಲಾ ವಲಯಗಳಲ್ಲಿ ತಲಾ ಒಬ್ಬ ಮಹಿಳೆಯು ಕಂಡುಬಂದಿದ್ದಾಳೆ. ಇಲ್ಲಿ ಬರೀ ಮಹಿಳಾ ದುಡಿಮೆಯ ಆಧಾರದ ಮೇಲೆ ಆ ಆದಾಯವನ್ನು ಅಳೆಯಲಾಗಿದೆ.

ಆಯಾ ಗುಡಿಕೈಗಾರಿಕೆಗಳಲ್ಲಿ ಬೇಕಾಗುವ ಕಚ್ಚಾಸಾಮಗ್ರಿಗಳ ವೆಚ್ಚವನ್ನು ತೆಗೆದು ಅದರಲ್ಲಿ ಉಳಿಯುವ ಆದಾಯವನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ. ಆದಾಯವನ್ನು ಗಮನಸಿದರೆ ಈ ಗುಡಿಕೈಗಾರಿಕೆಗಳಿಂದ ಬರುವ ಆದಾಯ ತುಂಬಾ ಕಡಿಮೆಯಾಗಿದೆ. ಈ ಕುಟುಂಬಗಳು ಸ್ವಲ್ಪಮಟ್ಟಿನ ಭೂಮಿಯನ್ನು ಹೊಂದಿದೆ. ಈ

ಆದಾಯದಿಂದ ಜೀವನ ನಡೆಸಲು ಕಷ್ಟವೆಂದು ಹೆಚ್ಚು ಮಹಿಳೆಯರು ಅಭಿಪ್ರಾಯಪಡುತ್ತದೆ. ಆದಾಯದ ಅಂಕಿಅಂಶಗಳನ್ನು ಗಮನಿಸಿದಾಗ ಸಂದರ್ಶನ ಮಾಡಿದ ಎಲ್ಲಾ ಕುಟುಂಬಗಳು ಬಡತನ ರೇಖೆಗಿಂತ ಕಡಿಮೆ ಇರುವುದು ಎಲ್ಲಾ ಕುಟುಂಬಗಳಲ್ಲಿ ಸಹಜವಾಗಿ ಕಂಡುಬಂದಿದೆ.

ಕೋಷ್ಟಕ ೭

ಸರ್ಕಾರಿ ಯೋಜನಾ ಮಹಿಳಾ ಗುಂಪುಗಳಲ್ಲಿ ಮಹಿಳಾ ಸದಸ್ಯತ್ವದ ವಿವರ

ಕ್ರ.ಸಂ.	ಗುಡಿಕೈಗಾರಿಕೆ	ಸ್ತ್ರೀಶಕ್ತಿ	ಸ್ವಶಕ್ತಿ	ಆಗಿಲ್ಲ	ಒಟ್ಟು
೦೧	ಕಮ್ಮಾರಿಕೆ	೨	೩	೧೦	೧೫
೦೨	ಕುಂಬಾರಿಕೆ	೨	೨	೧೧	೧೫
೦೩	ಬಡಗಿತನ	-	-	೧೫	೧೫
೦೪	ನೇಕಾರಿಕೆ	೪	೩	೦೮	೧೫
೦೫	ಬೀಡಿ ಕಟ್ಟುವುದು	೨	೧	೧೨	೧೫
	ಒಟ್ಟು	೧೦	೦೯	೫೬	೭೫

ಮಹಿಳಾ ಆರ್ಥಿಕಮಟ್ಟ ಸುಧಾರಣೆಗೆ ಹಲವಾರು ಸ್ವಸಹಾಯ ಗುಂಪುಗಳ ರಚನೆ ಮಾಡಿ ಸಂಘಗಳಿಗೆ ಸಾಲಸೌಲಭ್ಯ ಒದಗಿಸುತ್ತಿವೆ. ಇದರಲ್ಲಿ ಮುಖ್ಯವಾಗಿ ಸ್ತ್ರೀಶಕ್ತಿ, ಸ್ವಶಕ್ತಿ ಯೋಜನೆಗಳು ಸೇರಿವೆ. ಕೆಲವು ಗುಡಿಕೈಗಾರಿಕೆಗಳಿಗೆ ಆರ್ಥಿಕ ಸೌಲಭ್ಯ ನಮ್ಮ ಈ ಮಹಿಳಾ ಸಂಘಗಳಿಗೆ ಸರ್ಕಾರ ಒದಗಿಸಿದೆ. ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ನಗರ ಪ್ರದೇಶದ ೭೫ ಗುಡಿಕೈಗಾರಿಕೆಗಳ ಕುಟುಂಬಗಳ ಮಹಿಳಾ ಸಂಘಗಳ ಸದಸ್ಯತ್ವದ ಬಗ್ಗೆ ಅಬಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಸಂದರ್ಶನ ಮಾಡಿದ ೭೫ ಜನ ಮಹಿಳೆಯರಲ್ಲಿ ೨೫ರಷ್ಟು ಮಹಿಳೆಯರು ಈ ಸ್ತ್ರೀಶಕ್ತಿ ಮತ್ತು ಸ್ವಶಕ್ತಿ ಸ್ವಸಂದಾಯ ಗುಂಪುಗಳಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆ. ಶೇ ೭೫ರಷ್ಟು ಮಹಿಳೆಯರು ಸದಸ್ಯತ್ವ ಹೊಂದಿಲ್ಲ. ಈ ಅಂಕಿಅಂಶಗಳನ್ನು ನೋಡಿದಾಗ ಸರ್ಕಾರದ ಯೋಜನೆಗಳು ಜಾರಿಗೆ ಬಂದರೂ ಸಹ ಅವುಗಳನ್ನು ಪಡೆದುಕೊಳ್ಳುವಲ್ಲಿ ವಂಚಿತರಾಗಿದ್ದಾರೆ. ಇದಕ್ಕೆ ಕೆಲವು ಕೌಟುಂಬಿಕ ಶಿಕ್ಷಣದ ಕಾರಣಗಳು ಎಂದು ಹೇಳಬಹುದು. ಸರ್ಕಾರದ ಯೋಜನೆಗಳು ಸರಿಯಾದ ರೀತಿಯಲ್ಲಿ ಈ ಮಹಿಳೆಯರಿಗೆ ತಲುಪಿದಲ್ಲಿ ಅವರ ಆರ್ಥಿಕಮಟ್ಟ ಸುಧಾರಿಸಬಹುದು. ಮತ್ತು ಗುಡಿಕೈಗಾರಿಕೆಗಳ ಉತ್ತೇಜನಕ್ಕೆ ಸಹಕಾರಿಯಾಗಬಹುದು ಎಂದು ಹೇಳಬಹುದು.

ಕೋಷ್ಟಕ ೮

ಕೌಟುಂಬಿಕ ವ್ಯವಸ್ಥೆ ವಿವರ

ಕ್ರ.ಸಂ.	ಕುಟುಂಬ ವ್ಯವಸ್ಥೆ	ಕುಟುಂಬದಸಂಖ್ಯೆ	ಶೇಕಡವಾರು
೦೧	ಅವಿಭಕ್ತ	೨೦	೨೬.೬೭
೦೨	ವಿಭಕ್ತ	೫೫	೭೩.೩೩
	ಒಟ್ಟು	೭೫	೧೦೦.೦೦

ಒಟ್ಟು ೭೫ ಕುಟುಂಬಗಳಲ್ಲಿ ಶೇ ೭೩ ರಷ್ಟು ವಿಭಕ್ತ ಕುಟುಂಬಗಳ ಮತ್ತು ೨೬ ರಷ್ಟು ಅವಿಭಕ್ತ ಕುಟುಂಬ ಮಾದರಿಯನ್ನು ಹೊಂದಿದೆ. ಇಂದು ಕುಟುಂಬಗಳು ಆಧುನಿಕ ಲಕ್ಷಣಗಳನ್ನು ಹೆಚ್ಚು ಹೊಂದಿವೆ. ಗುಲ್ಬರ್ಗಾ ಪ್ರದೇಶ ನಗರ ಪ್ರದೇಶವಾಗಿರುವುದರಿಂದ ಸಮಾಜದಲ್ಲಿ ಆಧುನಿಕ ಲಕ್ಷಣಗಳನ್ನು ಕಾಣಬಹುದು. ಆಧುನಿಕ ಸಮಾಜಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಸಡಿಲಗೊಂಡು ವಿಭಕ್ತ ಕುಟುಂಬಗಳ ರಚನೆ, ಸಹಬಾಳ್ವೆಗಿಂತ ಸ್ಪರ್ಧಾತ್ಮಕ ಬದುಕಿಗೆ, ಹೆಚ್ಚಿನ ಒತ್ತು ಮತ್ತು ಸಮುದಾಯಕ್ಕಿಂತ ವ್ಯಕ್ತಿಪ್ರಧಾನ ವ್ಯವಸ್ಥೆಗೆ ಪ್ರಾಮುಖ್ಯತೆ ಹೀಗೆ ಹಲವು ಆಧುನಿಕ ಸಮಾಜದ ಲಕ್ಷಣಗಳನ್ನು ಕಾಣಬಹುದು. ಇದರಂತೆ ಗುಡಿಕೈಗಾರಿಕೆಗಳಲ್ಲಿ ಅವಲಂಬಿತ ಕುಟುಂಬಗಳು ಸಂದ ವಿಭಕ್ತ ಕುಟುಂಬಗಳ ಕಡೆಗೆ ಹೆಚ್ಚು ಒತ್ತು ಕೊಟ್ಟಿರುವುದು ಕಂಡು ಬಂದಿರುವುದುನ್ನು ಕೋಷ್ಟಕದಲ್ಲಿ ಕಾಣಬಹುದು.

ಕೋಷ್ಟಕ ೯

ವಿವಿಧ ಗುಡಿಕೈಗಾರಿಕೆಗಳಲ್ಲಿ ಅವಲಂಬಿತ ಮಹಿಳೆಯರ ವಿವಿರ

ಕ್ರ.ಸಂ.	ಗುಡಿಕೈಗಾರಿಕೆಗಳು	ಮಹಿಳೆಯರ ಸಂಖ್ಯೆ	ಶೇಕಡವಾರು
೦೧	ಕಮ್ಮಾರಿಕೆ	೧೫	೨೦.೦೦
೦೨	ಕುಂಬಾರಿಕೆ	೧೫	೨೦.೦೦
೦೩	ಬಡಗಿತನ	೧೫	೨೦.೦೦
೦೪	ನೇಕಾರಿಕೆ	೧೫	೨೦.೦೦
೦೫	ಬೀಡಿ ಕಟ್ಟುವುದು	೧೫	೨೦.೦೦
	ಒಟ್ಟು	೭೫	೧೦೦.೦೦

ಗುಲ್ಬರ್ಗಾ ಪ್ರದೇಶವು ಹಲವು ಗುಡಿಕೈಗಾರಿಕೆಗಳನ್ನು ಹೊಂದಿದೆ. ಪ್ರಮುಖ ಗುಡಿಕೈಗಾರಿಕೆಗಳಾದ ಕಮ್ಮಾರಿಕೆ, ಕುಂಬಾರಿಕೆ, ಬಡಗಿತನ, ನೇಕಾರಿಕೆ ಮತ್ತು ಬೀಡಿ ಕಟ್ಟುವುದದೀ ಕಸಬುಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಸಂದರ್ಶನ ಮಾಡಿದ ೭೫ ಕುಟುಂಬಗಳಲ್ಲಿ ಪ್ರತಿ ಗುಡಿಕೈಗಾರಿಕೆಯು ೧೫

ಕುಟುಂಬಗಳನ್ನು ಸಂದರ್ಶಿಸಲಾಗಿದೆ. ಗುಲ್ಬರ್ಗಾ ನಗರದಲ್ಲಿ ಕುಂಬಾರಿಕೆ, ಕಮ್ಮಾರಿಕೆ, ಬಡಗಿತನ ಮತ್ತು ನೇಕಾರಿಕೆ ವೃತ್ತಿಗಳು ವಂಶಪಾರಂಪರ್ಯವಾಗಿ, ಸಾಂಪ್ರದಾಯಿಕವಾಗಿ ಬೆಳೆದುಕೊಂಡು ಬಂದಿವೆ. ಈ ಗುಡಿಕೈಗಾರಿಕೆಗಳಲ್ಲಿ ಕ್ರಮವಾಗಿ ಕಮ್ಮಾರಿಕೆ ಮತ್ತು ಕುಂಬಾರಿಕೆ ವೃತ್ತಿಯನ್ನು ಅವಲಂಬಿಸಿರುವ ಕುಟುಂಬಗಳು ಹೆಚ್ಚಾಗಿವೆ. ಮುಸ್ಲಿಂ ಕುಟುಂಬಗಳು ನಗರ ಪ್ರದೇಶದಲ್ಲಿ ಬೀಡಿ ಕಟ್ಟುವ ಕೆಲಸದಲ್ಲಿ ಹೆಚ್ಚು ಅವಲಂಬಿತರಾಗಿದ್ದಾರೆ. ನೇಕಾರಿಕೆ ವೃತ್ತಿಯನ್ನು ಸ್ವಲ್ಪ ಪ್ರಮಾಣದಲ್ಲಿ ಕಾಣಬಹುದು. ಶೇ ೫ ಗುಡಿಕೈಗಾರಿಕೆಗಳ ವಸ್ತುಗಳ ಮಾರಾಟದಲ್ಲಿ ಹೆಚ್ಚು ಲಾಭವಿರುವ ಕೈಗಾರಿಕೆಗಳೆಂದು ನೇಕಾರಿಕೆ ಮತ್ತು ಬಡಗಿತನ ವೃತ್ತಿಗಳಾಗಿವೆ. ಹೀಗೆ ವಿವಿಧ ಗುಡಿಕೈಗಾರಿಕೆಗಳ ಜೀವನ ನಡೆಸಲು ಸಹಕಾರಿಯಾಗಿವೆ.

ಕೋಷ್ಟಕ ೧೦
ಗುಡಿಕೈಗಾರಿಕೆಗಳಲ್ಲಿ ಪುರುಷರ ಸಹಬಾಗಿತ್ವದ ವಿವರ

ಕ್ರ.ಸಂ.	ಗುಡಿಕೈಗಾರಿಕೆಗಳು	ಪುರುಷರ ಸಹಬಾಗಿತ್ವ	
		ಇದೆ	ಇಲ್ಲ
೦೧	ಕಮ್ಮಾರಿಕೆ	೧೫	-
೦೨	ಕುಂಬಾರಿಕೆ	೧೫	-
೦೩	ಬಡಗಿತನ	೧೫	-
೦೪	ನೇಕಾರಿಕೆ	೦೫	೧೦
೦೫	ಬೀಡಿ ಕಟ್ಟುವುದು	-	೧೫
	ಒಟ್ಟು	೫೦ (೬೬.೬೬)	೨೫ (೩೩.೨೪)

ಆಯ್ಕೆಮಾಡಿಕೊಂಡ ವಿವಿಧ ಗುಡಿಕೈಗಾರಿಕೆಗಳಲ್ಲಿ ಪುರುಷರ ಪಾತ್ರವನ್ನು ನೋಡಲಾಗಿದೆ. ಕಮ್ಮಾರಿಕೆ, ಕುಂಬಾರಿಕೆ ಮತ್ತು ಬಡಗಿತನದ ಈ ಗುಡಿಕೈಗಾರಿಕೆಗಳಲ್ಲಿ ಪುರುಷನೇ ಮುಖ್ಯ ಯಜಮಾನನಾಗಿದ್ದಾನೆ. ವೃತ್ತಿಗಳಲ್ಲಿ ಕೆಲವು ಸೂಕ್ಷ್ಮ ಶ್ರಮದಾಯಕ ಕೆಲಸಗಳನ್ನು ಮಹಿಳೆ ನಿರ್ವಹಿಸುತ್ತಾಳೆ. ಒಟ್ಟು ಈ ಕಸಬುಗಳಲ್ಲಿ ಪುರುಷ ಮತ್ತು ಮಹಿಳೆಯರು ಜೊತೆ ಸೇರಿ ಕೆಲಸ ಮಾಡುತ್ತಾರೆ. ಈ ವೃತ್ತಿಗಳಲ್ಲಿ ಕಷ್ಟಕರವಾದ ಕೆಲಸಗಳಾದ ಕಾಯಿಸುವುದು, ಬಡಿಯುವುದು, ಮಣ್ಣು ತರುವುದು ಕೆಲಸಗಳನ್ನು ಪುರಷರು ಮಾಡುತ್ತಾರೆ. ಇತರೆ ಸಣ್ಣಪುಟ್ಟ ಕೆಲಸಗಳನ್ನು ಪುರುಷರು ಮಾಡುತ್ತಾರೆ. ಇನ್ನು ನೇಕಾರಿಕೆ ಮತ್ತು ಬೀಡಿ ಕಟ್ಟುವ ಕೆಲಸದಲ್ಲಿ ಪೂರ್ತಿಯಾಗಿ ಮಹಿಳೆಯೇ ನಿರ್ವಹಿಸುತ್ತಾಳೆ. ಇದರಲ್ಲಿ ಪುರುಷನ ಪಾತ್ರ ಬಹಳ ಕಡಿಮೆ ಎಂದು

ಹೇಳಬಹುದು. ಒಟ್ಟು ೭೫ ಕುಟುಂಬಗಳಲ್ಲಿ ಶೇ ೬೬.೬೬ರಷ್ಟು ಪುರುಷರು ಕೆಲಸಗಳಲ್ಲಿ ಸಹಭಾಗಿಗಳಾಗಿದ್ದಾರೆ. ಉಳಿದ ೩೩.೨೪ರಷ್ಟು ಪುರುಷರು ಸಹಭಾಗಿಗಳಾಗಿಲ್ಲದ ಕಾರಣ ಈ ವೃತ್ತಿಗಳು ಮಹಿಳಾ ಕೇಂದ್ರಿತ ಕೈಗಾರಿಕೆಗಳಾಗಿವೆ.

ಕೋಷ್ಟಕ ೧೧

ಉತ್ಪಾದನಾ ವಸ್ತುಗಳ ಮಾರಾಟದ ವಿವರ

ಕ್ರ.ಸಂ.	ವಸ್ತುಗಳು	ಮಾರುಕಟ್ಟೆ	
೦೧	ಕುಂಬಾರಿಕೆ ವಸ್ತುಗಳು	ಸ್ಥಳೀಯ	ಬಾಹ್ಯ
೦೨	ಕಬ್ಬಿಣ ವಸ್ತುಗಳು	ಸ್ಥಳೀಯ	ಬಾಹ್ಯ
೦೩	ಮರದ ವಸ್ತುಗಳು	ಸ್ಥಳೀಯ	ಬಾಹ್ಯ
೦೪	ಬಟ್ಟೆಗಳು	ಸ್ಥಳೀಯ	ಬಾಹ್ಯ
೦೫	ಬೀಡಿ ಕಟ್ಟುವುದು	ಸ್ಥಳೀಯ	ಬಾಹ್ಯ

ಗುಡಿಕೈಗಾರಿಕೆಗಳಿಂದ ತಯಾರಾದ ವಸ್ತುಗಳಿಗೆ ಬೇಡಿಕೆಗಳು ಕಡಿಮೆಯಾಗುತ್ತಿದೆ. ಕಾರಣ ಇಂದು ಆಧುನಿಕ ತಂತ್ರಜ್ಞಾನದಿಂದ ತಯಾರಿಸಿದ ವಸ್ತುಗಳಿಗೆ ಹೆಚ್ಚು ಬೇಡಿಕೆ ಇದೆ. ಪ್ರಸ್ತುತ ಆಯ್ಕೆ ಮಾಡಿಕೊಂಡ ಗುಡಿಕೈಗಾರಿಕೆಗಳಿಂದ ತಯಾರಾದ ವಸ್ತುಗಳು ಮಾರಾಟದ ವಿವರವನ್ನು ನೋಡಿದಾಗ ಸ್ಥಳೀಯವಾಗಿ ಹೆಚ್ಚು ಮಾರಾಟವಾಗಿರುವುದು ಕಂಡುಬಂದಿದೆ. ಕಾರಣ ತಯಾರಾದ ಸ್ಥಳವು ನಗರ ಪ್ರದೇಶವಾಗಿದೆ. ಕೆಲವು ದೂರದ ಗ್ರಾಮಗಳಿಗೆ ಹೋಗಿ ಮಾರಾಟ ಮಾಡಿಕೊಂಡು ಬರುತ್ತಾರೆ. ಮಹಿಳೆಯರು ಮಾಹಿತ ನೀಡಿದ ಪ್ರಕಾರ ಹೆಚ್ಚು ಸ್ಥಳೀಯ ಮಾರುಕಟ್ಟೆಯನ್ನು ಅವಲಂಬಿಸಿದ್ದೇವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೋಷ್ಟಕ ೧೨

ಗುಡಿಕೈಗಾರಿಕೆಗಳಿಗೆ ಸರ್ಕಾರದ ಸಾಲ ಸೌಲಭ್ಯ

ಕ್ರ.ಸಂ.	ಗುಡಿಕೈಗಾರಿಕೆಗಳು	ಸಾಲ	ಇಲ್ಲ
೦೧	ಕಮ್ಮಾರಿಕೆ	೦೨	೧೩
೦೨	ಕುಂಬಾರಿಕೆ	೦೩	೧೨
೦೩	ಬಡಗಿತನ	೦೧	೧೪
೦೪	ನೇಕಾರಿಕೆ	೦೩	೧೨
೦೫	ಬೀಡಿ ಕಟ್ಟುವುದು	೦೪	೧೧
	ಒಟ್ಟು	೧೩ (೧೭.೬೨)	೬೨ (೮೨.೬೭)

ಮಹಿಳೆಯರ ಆರ್ಥಿಕ ಒಟ್ಟು ಸುಧಾರಣೆಗೆ ಸರ್ಕಾರವು ಹಲವಾರು ಸಾಲ ಸೌಲಭ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇಂದು ಮಹಿಳೆಯರಿಗಾಗಿ ಗಾತ್ರ, ಎಸ್.ಜಿ.ಎಸ್.ವೈ, ಐ.ಆರ್.ಡಿ.ಪಿ. ಕೆಲವಾರು ಯೋಜನೆಗಳಿಂದ ಸರ್ಕಾರ ಸಾಲ ಸೌಲಭ್ಯವನ್ನು ಒದಗಿಸುತ್ತದೆ. ಗುಲ್ಬರ್ಗಾ ನಗರದ ೭೫ ಕುಟುಂಬಗಳ ಯಾವ ರೀತಿ ಸರ್ಕಾರ ಸಾಲ ಸೌಲಭ್ಯವನ್ನು ಪಡೆದುಕೊಂಡಿರುವ ಅಂಕಿಅಂಶಗಳನ್ನು ನೋಡಿದಾಗ ಶೇ ೧೩ ರಷ್ಟು ಮಹಿಳಾ ಕುಟುಂಬಗಳು ಸಾಲ ಸೌಲಭ್ಯವನ್ನು ಪಡೆದಿವೆ. ಉಳಿದ ಶೇ ೬೨ರಷ್ಟು ಕುಟುಂಬಗಳು ಯಾವುದೇ ಸರ್ಕಾರ ಸಾಲ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಈ ಎಲ್ಲಾ ವಂಚಿತ ಕುಟುಂಬಗಳು ನಮಗೆ ಸರ್ಕಾರ ಸಹಾಯ ಉತ್ಪಾದನೆಯ ಗುಣಮಟ್ಟವನ್ನು ಹೆಚ್ಚಿಸಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೆಲವು ಕುಟುಂಬಗಳು ಸಾಲ ಸೌಲಭ್ಯಗಳನ್ನು ಯಾವ ರೀತಿ ಪಡೆಯಬೇಕು ಎನ್ನುವ ತಿಳುವಳಿಕೆಯಿಲ್ಲದಿರುವುದು ಕಂಡುಬರುತ್ತದೆ. ಇಂತಹ ಗುಡಿಕೈಗಾರಿಕೆಗಳಿಗೆ ಸಾಲ ಸೌಲಭ್ಯ ಒದಗಿಸಿದಲ್ಲಿ ಮಹಿಳೆಯರ ಆರ್ಥಿಕ ಸುಧಾರಿಸಬಹುದು ಎಂದು ಹೇಳಬಹುದು.

ಕೋಷ್ಟಕ ೧೩

ಗುಡಿಕೈಗಾರಿಕೆಗಳಿಂದ ಬಂದ ಹಣದ ವಿವರ

ಕ್ರ.ಸಂ.	ವಿವಿರ	ಸಂಖ್ಯೆ	ಶೇಕಡವಾರು
೦೧	ಪುರುಷ	೫೦	೬೬.೬೬
೦೨	ಮಹಿಳೆ	೨೫	೩೩.೩೪
	ಒಟ್ಟು	೭೫	೧೦೦.೦೦

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಇನ್ನೂ ಯಾವುದೇ ಆರ್ಥಿಕ ಜವಬ್ದಾರಿಗಳನ್ನು ಪಡೆದುಕೊಂಡಿಲ್ಲ. ಇಲ್ಲಿ ೭೫ ಕುಟುಂಬಗಳಲ್ಲಿ ಶೇ ೬೬ರಷ್ಟು ಕುಟುಂಬಗಳಲ್ಲಿ ಗುಡಿಕೈಗಾರಿಕೆಗಳಿಂದ ಬಂದ ಹಣವು ಪುರುಷನಿಗೆ ಸೇರುತ್ತದೆ. ಉಳಿದ ೩೪ರಷ್ಟು ಕುಟುಂಬಗಳಲ್ಲಿ ಮಹಿಳೆಗೆ ಸಿಗುತ್ತದೆ. ಇಲ್ಲಿ ವಂಶಪಾರಂಪರಾಗತವಾಗಿ ಬಂದ ಗುಡಿಕೈಗಾರಿಕೆಗಳಾದ ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಬಡಿಗಿತನ ವೃತ್ತಿಗಳಲ್ಲಿ ಈಗಲೂ ಪುರುಷನೇ ಮುಖ್ಯಸ್ಥನಾಗಿರುತ್ತಾನೆ. ಈ ಗುಡಿಕೈಗಾರಿಕೆಗಳಿಂದ ಬಂದಂತಹ ಲಾಭದ ಪಾಲನ್ನು ಪುರುಷನೇ ಪಡೆದುಕೊಳ್ಳುತ್ತಾನೆ. ನೇಕಾರಿಕೆ ಮತ್ತು ಬೀಡಿ ಕಟ್ಟುವ ಕೆಲಸಗಳಲ್ಲಿ ಮಹಿಳೆಯೇ ಮುಖ್ಯವಾಗಿರುವುದರಿಂದ ಈ ಎರಡು ವೃತ್ತಿಗಳಲ್ಲಿ ಬಂದಂಥಹ ಹಣವನ್ನು ಮಹಿಳೆ ಸೇರುತ್ತದೆ. ಕುಟುಂಬದ ಜವಬ್ದಾರಿಗಳಿಗೆ ಮಾತ್ರ ಪುರುಷರು ಮಹಿಳೆಯ ಕೈಯಲ್ಲಿ ಹಣವನ್ನು ಕೊಡುತ್ತಾರೆ ಎನ್ನುವುದು ಅಧ್ಯಯನದಿಂದ ಕಂಡುಬಂದಿದೆ. ಹೆಚ್ಚು ಮಹಿಳೆಯರು ಹಣದ ಬಗ್ಗೆ ತೃಪ್ತಿದಾಯಕ ಉತ್ತರಗಳನ್ನು ತಿಳಿಸಿದ್ದಾರೆ. ನಮಗೆ ಹಣದ ಅವಶ್ಯಕತೆ ಇದ್ದಾಗ ನಮ್ಮ ಗಂಡನನ್ನು ಕೇಳುತ್ತೇವೆ. ಇದೇನೂ ಅವರಿಗೆ ಸಮಸ್ಯೆ ಅಲ್ಲ ಎನ್ನುವುದು ಈ ಅಂಶಗಳಿಂದ ತಿಳಿಯುತ್ತದೆ.

ಕೋಷ್ಟಕ ೧೪

ವಿಶ್ರಾಂತಿ ಸಮಯದಲ್ಲಿ ಮಹಿಳೆಯರ ಕೆಲಸ

ಕ್ರ.ಸಂ.	ಕೆಲಸ	ಮಹಿಳೆಯರು	ಶೇಕಡವಾರು
೦೧	ಮನೆಕೆಲಸ	೫೦	೬೬.೬೭
೦೨	ಮನೋರಂಜನೆ	೨೦	೨೬.೬೭
೦೩	ಇತರೆ ಕೆಲಸ	೦೫	೦೬.೬೬
	ಒಟ್ಟು	೭೫	೧೦೦.೦೦

ಗುಡಿಕೈಗಾರಿಕೆಗಳ ಕೆಲಸ ಮುಗಿಸಿ ವಿಶ್ರಾಂತಿ ಸಮಯದಲ್ಲಿ ಮಹಿಳೆಯರ ಕೆಲಸದ ಬಗ್ಗೆ ಕೇಳಲಾಯಿತು. ಶೇ ೬೬ರಷ್ಟು ಮಹಿಳೆಯರು ಮನೆಕೆಲಸಗಳು, ಅಡುಗೆ ಮಾಡುವುದು, ಕಸ ಗುಡಿಸುವುದು, ಪಾತ್ರೆ ತಿಕ್ಕುವ ಕೆಲಸಗಳ ಮಾಡುತ್ತಾರೆ. ಶೇ ೬೬.೬೭ ರಷ್ಟು ಮಹಿಳೆಯರು ಮನೆಗೆಲಸವನ್ನು ಮುಗಿಸಿಕೊಂಡು ಟಿ.ವಿ. ನೋಡುವುದು, ರೇಡಿಯೋ ಕೇಳುವುದು, ಕೆಲವು ಮನೋರಂಜನೆ ಕಾರ್ಯಕ್ರಮಗಳಿಂದ ವಿಶ್ರಾಂತಿ ಸಮಯವನ್ನು ಕಳೆಯುತ್ತಾರೆ. ಹೆಚ್ಚು ಮಹಿಳೆಯರು ನಮಗೆ ವಿಶ್ರಾಂತಿ ಸಿಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೧೫

ಗುಡಿಕೈಗಾರಿಕೆಗಳಿಂದ ಮಹಿಳೆಯರ ಮೇಲೆ ಆರೋಗ್ಯದ ಪರಿಣಾಮ

ಕ್ರ.ಸಂ.	ಆರೋಗ್ಯದ ಮೇಲೆ ಪರಿಣಾಮ	ಮಹಿಳೆಯರ ಸಂಖ್ಯೆ	ಶೇಕಡವಾರು
೦೧	ಆಗಿದೆ	೬೦	೮೦.೦೦
೦೨	ಆಗಿಲ್ಲ	೧೫	೨೦.೦೦
	ಒಟ್ಟು	೭೫	೧೦೦.೦೦

ಪ್ರತಿಯೊಬ್ಬ ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯವಾಗಿದೆ. ಆರೋಗ್ಯ ಚೆನ್ನಾಗಿದ್ದರೆ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಬಹುದು ಎಂದು ಸಂದರ್ಶನದಲ್ಲಿ ಹೇಳಿದ್ದಾರೆ. ೭೫ ಕುಟುಂಬಗಳಲ್ಲಿ ಶೇ ೮೦ರಷ್ಟು ಮಹಿಳೆಯರಿಗೆ ಆರೋಗ್ಯದ ಮೇಲೆ ಪರಿಣಾಮ ಆಗಿದೆ ಎನ್ನುವುದು ಗೊತ್ತಾಗುತ್ತದೆ. ಮೈ ಕೈ ನೋವು, ಸೊಂಟ ನೋವು, ಉಸಿರಾಟದ ತೊಂದರೆಗಳು ಈ ಗುಡಿಕೈಗಾರಿಕೆಯ ಕೆಲಸಗಳನ್ನು ನಿರ್ವಹಿಸುವುದರಿಂದ ಬರುತ್ತವೆ ಎಂದು ಹೇಳಿದ್ದಾರೆ. ಈ ರೋಗಗಳಿಗೆ ಉತ್ತಮ ಆಹಾರ, ನೀರು, ಇಲ್ಲದೇ ಪೌಷ್ಠಿಕತೆಯ ಕೊರತೆಯಿಂದ ಈ ರೋಗಗಳು ಹೆಚ್ಚಾಗಿವೆ. ಹೆಚ್ಚು ಕುಟುಂಬಗಳ ಆದಾಯವನ್ನು ನೋಡಿದರೆ ಎಲ್ಲರೂ ಬಡವರಿದ್ದಾರೆ. ಆರ್ಥಿಕ ಮಟ್ಟವು ಸಹ ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೆಚ್ಚು

ಮಹಿಳೆಯರು ಸರ್ಕಾರಿ ಆಸ್ಪತ್ರೆಯನ್ನು ಅವಲಂಬಿಸಿದ್ದಲ್ಲದೆ, ಇಲ್ಲಿಯ ಚಿಕಿತ್ಸೆಯ ಬಗ್ಗೆ ತೃಪ್ತಿದಾಯಕ ಉತ್ತರವನ್ನು ಮಹಿಳೆಯರು ವ್ಯಕ್ತಪಡಿಸಿಲ್ಲ. ಶೇ ೨೦ರಷ್ಟು ಕುಟುಂಬಗಳು ಯಾವುದೇ ರೀತಿಯ ಆರೋಗ್ಯದ ಮೇಲೆ ಪರಿಣಾಮ ಆಗಿಲ್ಲ ಎಂದು ಉತ್ತರಿಸಿದ್ದಾರೆ.

ಕೋಷ್ಟಕ ೧೬

ವರ್ಷದ ಅವಧಿಯಲ್ಲಿ ಕೆಲಸ ನಿರ್ವಹಿಸುವ ದಿನಗಳು ಮತ್ತು ಗಂಟೆಗಳು

ಕ್ರ.ಸಂ.	ಗುಡಿಕೈಗಾರಿಕೆಗಳು	ದಿನಗಳು	ಘಂಟೆಗಳು
೦೧	ಕಮ್ಮಾರಿಕೆ	೨೪೦	೭-೮
೦೨	ಕುಂಬಾರಿಕೆ	೨೪೦	೮-೯
೦೩	ಬಡಗಿತನ	೩೦೦	೧೦-೧೨
೦೪	ನೇಕಾರಿಕೆ	೩೦೦	೧೦-೧೨
೦೫	ಬೀಡಿ ಕಟ್ಟುವುದು	೩೦೦	೧೦ ೧೨

ಸಂದರ್ಶಿಸಿದ ೭೫ ಮಹಿಳೆಯರ ವರ್ಷದಲ್ಲಿ ಕೆಲಸ ನಿರ್ವಹಿಸಿದ ಮತ್ತು ಪ್ರತಿದಿನದಲ್ಲಿ ಎಷ್ಟು ಗಂಟೆಗಳಲ್ಲಿ ಗುಡಿಕೈಗಾರಿಕೆಯ ಕಸಬುನಲ್ಲಿ ನಿರತರಾಗಿರುತ್ತಾರೆ ಎಂಬುದನ್ನು ನೋಡಿದಾಗ ನೇಕಾರಿಕೆ ಮತ್ತು ಬೀಡಿ ಕಟ್ಟುವ ಕೆಲಸದಲ್ಲಿ ಹೆಚ್ಚು ಅವಲಂಬಿತವಾಗಿರುವುದು ಕಂಡುಬಂದಿದೆ. ಏಕೆಂದರೆ ಈ ಕೆಲಸಗಳು ಮಹಿಳೆಯೇ ನಿರ್ವಹಿಸುವುದರಿಂದ ತಮ್ಮ ಶ್ರಮವನ್ನು ಈ ಕೆಲಸಕ್ಕೆ ಮುಡುಪಾಗಿಟ್ಟಿದ್ದಾರೆ. ಇನ್ನು ಕಮ್ಮಾರಿಕೆ, ಕುಂಬಾರಿಕೆ ಮತ್ತು ಬಡಗಿತನ ಕೆಲಸಗಳಲ್ಲಿ ಮುಖ್ಯ ಕೆಲಸ ಪುರುಷ ವಹಿಸಿರುವುದರಿಂದ ಮಹಿಳೆಯ ಕೆಲಸ ಕಡಿಮೆ ಇರವುದು. ಈ ಕೆಲಸದಲ್ಲಿ ಇವಳ ಶ್ರಮ ಕಡಿಮೆ. ಕಮ್ಮಾರಿಕೆ ಮತ್ತು ಕುಂಬಾರಿಕೆ ಕೆಲಸದಲ್ಲಿ ಇವಳ ಶ್ರಮ ಕಡಿಮೆ. ಕಮ್ಮಾರಿಕೆ ಮತ್ತು ಕುಂಬಾರಿಕೆ ಕೆಲಸಗಳು ಮಳೆಗಾಲದಲ್ಲಿ ಇರುವುದಿಲ್ಲ. ಹಾಗೆಯೇ ದಿನದ ಅವಧಿಯಲ್ಲಿ ಮಹಿಳೆ ಅವಲಂಬಿತ ಗುಡಿಕೈಗಾರಿಕೆಗಳಿಂದ ನೇಕಾರಿಕೆ ಮತ್ತು ಬೀಡಿಕಟ್ಟುವುದರಲ್ಲಿ ೧೦, ೧೨ ತಾಸು ಮಾಡಿದರೆ, ಇನ್ನು ಕಮ್ಮಾರಿಕೆ, ಕುಂಬಾರಿಕೆ ಕೆಲಸಗಳಲ್ಲಿ ೫, ೭ ತಾಸು ಮಾತ್ರ ಕೆಲಸ ಮಾಡುತ್ತಾರೆ. ಇನ್ನು ಉಳಿದ ಅವಧಿಯಲ್ಲಿ ಕುಟುಂಬದ ಕೆಲಸಗಳನ್ನು ನಿರ್ವಹಿಸುತ್ತಾರೆ.

ಹೀಗೆ ಗುಲ್ಬರ್ಗಾ ನಗರದ ಕ್ಷೇತ್ರಕಾರ್ಯದಲ್ಲಿ ಗುಡಿಕೈಗಾರಿಕೆಗಳಲ್ಲಿ ಮಹಿಳಾ ಸಹಭಾಗಿತ್ವ ಕುರಿತು ಹಲವಾರು ಅಂಕಿಅಂಶಗಳನ್ನು ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಿ ಸುಮಾರು ೧೬ ಕೋಷ್ಟಕಗಳನ್ನು ರಚಿಸಿ ವಿವರಣೆಯನ್ನು ನೀಡಲಾಗಿದೆ. ಒಟ್ಟಾರೆ ಅಧ್ಯಯನದ ಫಲಿತಗಳನ್ನು ಮತ್ತು ಗುಡಿಕೈಗಾರಿಕೆಗಳ ಪುನಶ್ಚೇತನ ಕ್ರಮಗಳನ್ನು ಮುಂದಿನ ಅಧ್ಯಾಯವಾದ ಸಮಾರೋಪದಲ್ಲಿ ಚರ್ಚಿಸಲಾಗಿದೆ.

******

ಅಧ್ಯಾಯ ೬

ಸಮಾರೋಪ

ಸಮಾರೋಪ

ಪ್ರಪಂಚದಲ್ಲಿ ಸಾವಿರಾರು ವರ್ಷಗಳಿಂದಲೂ ಪುರುಷ ಪ್ರಧಾನ ಸಮಾಜಿಕ ವ್ಯವಸ್ಥೆ ಅಸ್ತಿತ್ವದಲ್ಲಿದ್ದುದು ಕಂಡುಬರುತ್ತದೆ. ಭಾರತವೂ ಕೂಡಾ ಇದಕ್ಕೆ ಹೊರತೇನಲ್ಲ. ಆದರೆ ಒಂದು ಕಾಲದಲ್ಲಿ ವಿಶ್ವದಲ್ಲಿ ಎಲ್ಲಿಯೂ ಇಲ್ಲದ, 'ಮಾತೃಪ್ರಧಾನ' ಕುಟುಂಬ ವ್ಯವಸ್ಥೆ ಭಾರತದಲ್ಲಿ ಅಸ್ತಿತ್ವದಲ್ಲಿದ್ದುದು ತಿಳಿದುಬರುತ್ತದೆ. ಇಷ್ಟಾಗಿಯೂ ಕೂಡಾ ಭಾರತೀಯ ಪರಂಪರೆಯಲ್ಲಿ ಹೆಣ್ಣಿಗೆ ದೊರೆತ ಸ್ಥಾನಮಾನ ತುಂಬಾ ಶೋಚನೀಯ ಹಾಗೂ ಅತ್ಯಂತ ಕೆಳದರ್ಜೆಯದು.

ಭಾರತೀಯರ ಜನಜೀವನವನ್ನು ಧರ್ಮ ಬಹಳಷ್ಟರ ಮಟ್ಟಿಗೆ ನಿರೂಪಿಸಿದೆ, ನಿಯಂತ್ರಿಸಿದೆ. ಆದಿಮಕಾಲದಿಂದಲೂ ಈ ಪ್ರಕ್ರಿಯೆ ನಡೆದುಕೊಂಡು ಬಂದಿದೆ. ಭಾರತದಲ್ಲಿ ಧರ್ಮಗ್ರಂಥಗಳು, ಮಹಾನ್ ಪುರುಷರ ಹೆಣ್ಣಿನ ಸ್ಥಾನಮಾನದ ಬಗ್ಗೆ ನಿಕೃಷ್ಟವಾದ ಮಾತುಗಳನ್ನು ಹೇಳಿದ್ದಾರೆ. ಮಹಿಳೆಯೂ ಸಮಾಜದಲ್ಲಿ, ಕುಟುಂಬದಲ್ಲಿ ನಡೆದುಕೊಳ್ಳುವ ರೀತಿನೀತಿಗಳನ್ನು ಸಂವಿಧಾನದ ಕಾನೂನು ಕಟ್ಟಳೆಗಳಂತೆ ಸಾಂಪ್ರದಾಯಕವಾದ ಸಾಮಾಜಿಕ ವ್ಯವಸ್ಥೆ ನಿಯಂತ್ರಿಸುತ್ತದೆ. ವೇದ, ಉಪನಿಷತ್, ಪುರಾಣಗಳಲ್ಲಿ ಕ್ವಚಿತ್ತಾಗಿ ಮಹಿಳಾ ಮಣಿಗಳನ್ನು ಉದಾಹರಿಸುತ್ತಾ ಸಾಧ್ವಿಮಣಿಗಳಾಗಿ ವಿಜೃಂಭಿಸುವ ಒಂದು ಕ್ರಮ ನಮ್ಮಲ್ಲಿದೆ. ಹೆಣ್ಣನ್ನು ಪ್ರಾಚೀನ ಋಷಿಮುನಿಗಳಾದ ಮನು, ಪರಾಶರ, ಕೌಟಿಲ್ಯ, ಶಂಕಾರಾಚಾರ್ಯ ಇವರು ಹೆಣ್ಣನ್ನು ಕುರಿತು ವಿಚಿತ್ರವಾದ ನಿಲುವುಗಳನ್ನು ತಳೆದಿದ್ದಾರೆ.

ಮತೃದೇವೋಭವ, ಜನನೀ ಜನ್ಮಭೂಮಿಶ್ಚಸ್ವರ್ಗದಪಿಗರಿಯಸಿ, ಮೊದಲಾದ ಮಾತುಗಳನ್ನು ಸ್ತ್ರೀಯರ ಬಗ್ಗೆ ಮಾತನಾಡಿದ ಪುರುಷಪ್ರಧಾನ ಸಮಾಜವೇ ಹೆಣ್ಣನ್ನು ದಾಸಿಯನ್ನಾಗಿ, ಗುಲಾಮಗಳನ್ನಾಗಿ, ಭೋಗದ ವಸ್ತುವಾಗಿ, ಕೈಗೊಂಬೆಯಾಗಿ ನಡೆಸಿಕೊಂಡ ನಿದರ್ಶನಗಳಿಗೆ ಲೆಕ್ಕವೇ ಇಲ್ಲ.

ಭಾರತದ ಆರ್ಥಿಕವ್ಯವಸ್ಥೆಯಲ್ಲಿ ಕೃಷಿ ಪ್ರಧಾನ ಪಾತ್ರವಹಿಸುತ್ತದೆ. ಆ ನಂತರದ ಸ್ಥಾನದಲ್ಲಿ ಪಶುಪಾಲನೆ, ಕುಶಲ ಕಲೆಗಳು ಆ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಈ ಎಲ್ಲಾ ಕೆಲಸಗಳಲ್ಲಿ ಸ್ತ್ರೀಪುರುಷರ ಸಮಾನವಾಗಿ ಭಾಗವಹಿಸಿದರೂ ಪ್ರಧಾನಪಾತ್ರ ಪುರಷನದೇ ಆಗಿರುತ್ತದೆ. ಸ್ತ್ರೀಯೂ ಗುಡಿಕೈಗಾರಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವ್ಯವಹಾರವೆಲ್ಲಾ ಪುರುಷನದೇ ಆಗಿರುತ್ತದೆ. ಸ್ತ್ರೀಗೆ ಹೊರಗಿನ ಜಗತ್ತು ಅಪವಿತ್ರವೆಂಬಂತೆ ಆಕೆಯನ್ನು ಮನೆಯ ಒಳಗಿನ ಜಗತ್ತಿಗೆ ಸೀಮಿತವಾಗಿರಿಸಿರುವ ತಂತ್ರಗಳು ಪುರುಷ ಪ್ರಧಾನ ಸಮಾಜದ ಮೌಲ್ಯಗಳೇ ಆಗಿವೆ.

ಕೃಷಿಯ ಚಟುವಟಿಕೆಯ ಬಿಡುಗಡೆ ಸಮಯದಲ್ಲಿ ಭಾರತದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಕುಟುಂಬಗಳು ಕುಶಲಕಲೆಗಳನ್ನು ಆಶ್ರಯಿಸಿ ಬದುಕುತ್ತಿದ್ದವು. ಪಾರಂಪರಿಕ ಜ್ಞಾನದಿಂದ ಯಾವ ಅತ್ಯಾಧುನಿಕ ತಂತ್ರಜ್ಞಾನವಲ್ಲದೆ, ಔಪಚಾರಿಕ ಶಿಕ್ಷಣವೂ ಇಲ್ಲದೆ ವಂಶಪಾರಂಪರಿಕವಾಗಿದತ್ತವಾಗಿ ಬಂದ ಗುಡಿಕೈಗಾರಿಕೆಗಳ ಕಲೆಯನ್ನು ಸ್ತ್ರೀ ಪುರುಷರಿಬ್ಬರೂ ಕಲಿಯುತ್ತಿದ್ದರು.

ಗುಡಿಕೈಗಾರಿಕೆಗಳು ಕುಟುಂಬದ ಆದಾಯವನ್ನು ಹೆಚ್ಚಿಸುವುದಲ್ಲದೆ ಆ ಕುಟುಂಬಗಳಿಗೆ ಸ್ವಯಂ ಉದ್ಯೋಗವನ್ನು ಒದಗಿಸಿ ಆರ್ಥಿಕ ಭದ್ರತೆಗೆ ಹೆಚ್ಚು ಸಹಾಯಕವಾಗಿದ್ದವು. ಗುಡಿಕೈಗಾರಿಕೆಗಳು ನಿರುದ್ಯೋಗವನ್ನು ನೀಗಿಸಿ ಸ್ವಯಂಪೂರ್ಣ ಬದುಕಿಗೆ ಆಸರೆ ನೀಡಿದ್ದವು. ಇಂತಹ ಗುಡಿಕೈಗಾರಿಕೆಗಳು ಯಾವುದೇ ಬಂಡವಾಳವಿಲ್ಲದೆ, ಆಧುನಿಕ ಯಂತ್ರ ಮತ್ತು ತಂತ್ರಜ್ಞಾನವಿಲ್ಲದೆ ಭಾರತದಲ್ಲಿ ಪುರಾತನ ಕಾಲದಿಂದಲೂ ಬಹುಸಂಖ್ಯಾತ ಜನರಿಗೆ ಉದ್ಯೋಗದ ಅಭಯಹಸ್ತ ನೀಡಿದ್ದವು. ಇಂತಹ ಗುಡಿಕೈಗಾರಿಕೆಗಳಿಗೆ ಔದ್ಯೋಗಿಕರಣ ಬಹುದೊಡ್ಡ ಹೊಡೆತವನ್ನು ನೀಡಿತು. ಕೈಗಾರೀಕಿಕರಣದ ಫಲವಾಗಿ ಕುಟುಂಬದ ಗ್ರಾಮದ ವಿಕೇಂದ್ರಿಕೃತ ನೆಲೆಯಲ್ಲಿದ್ದ ಉತ್ಪಾದನಾಕ್ರಮವು ಕೇಂದ್ರೀಕರಣವಾಗತೊಡಗಿತು. ಭಾರತದಲ್ಲಿ ಅಂತೆಯೇ ಕರ್ನಾಟಕದಲ್ಲಿ ಬಡಗಿತನ, ನೂಲುವು, ನೇಯುವ, ಕಂಬಾರಿಕೆ, ಕುಂಬಾರಿಕೆ ಮೊದಲಾದ ಗುಡಿಕೈಗಾರಿಕೆಗಳು ಕೈಗಾರಿಕೀಕರಣದ ಉತ್ಪಾದನೆಗಳು ಈ ನಾಡಿಗೆ ಬರುವುದಕ್ಕಿಂತ ಮುಂಚೆ ವ್ಯಾಪಕವಾಗಿದ್ದವು. ಇಂಗ್ಲೆಂಡಿಲ್ಲಿ ಉಂಟಾದ ಕೈಗಾರಿಕಾಕ್ರಾಂತಿಯಿಂದಾಗಿ ಯಂತ್ರಗಳು ಬಳಕೆಗೆ ಬಂದವು. ಪರಿಣಾಮವಾಗಿ ನೂಲುವು, ನೇಯುವ ಮೊದಲಾದ ವೃತ್ತಿಗಳು ನೆಲಕಚ್ಚಿದವು. ಗುಡಿಕೈಗಾರಿಕೆಗಳನ್ನು ಆಶ್ರಯಿಸಿ ಬದುಕುವವರು ಅನಾಥರಾದರು. ಗಾಂಧೀಜಿಯವರು ಯಂತ್ರನಾಗರಿಕತೆ ಸೃಷ್ಟಿಸಿದ ಭೀಕರತೆಗಳನ್ನು ಬಹುಬೇಗ ಮನಗಂಡು ಅಂದೆಯೇ ತೀವ್ರವಾಗಿ ವಿರೋಧಿಸಿದರು. ಬದಲಾಗಿ ಗುಡಿಕೈಗಾರಿಕೆಗಳ ಮಹತ್ವವನ್ನು ಗಾಂಧೀಜಿ ಒತ್ತಿ ಹೇಳಿದ್ದಾರೆ.

ಗುಡಿಕೈಗಾರಿಕೆಗಳಿಗೆ ಭಾರತದಲ್ಲಿ ಸುಧೀರ್ಘವಾದ ಚರಿತ್ರೆ ಹಾಗೂ ಪರಂಪರೆಯಿದೆ. ಹಿಂದಿನಿಂದಲೂ ಗುಡಿಕೈಗಾರಿಕೆಗಳು ಮಹಿಳೆಯರ ಕೈಕಸುಬಾಗಿ ಬೆಳೆದುಕೊಂಡು ಬಂದಿವೆ. ಗುಡಿಕೈಗಾರಿಕೆಗಳು ಪ್ರತ್ಯೇಕವಾದ ಉದ್ಯೋಗವಾಗಿ ಬೆಳೆಯದೇ ಕೃಷಿ ಸಂಬಂಧಿತ ಕೆಲಸಗಳ ಒಳಗೆಯ ಬೆಳೆಯತೊಡಗಿದವು. ಆ ನಂತರದ

ದಿನಗಳಲ್ಲಿ ಪ್ರತ್ಯೇಕವಾದ ವಲಯವಾಗಿ ಬೆಳೆಯತೊಡಗಿತು. ಆರ್ಥಿಕ ಸ್ಥಿತಿಗತಿಗಳು ಎಷ್ಟೇ ಪ್ರಬಲವಾಗಿದ್ದರೂ ಸಾಂಪ್ರದಾಯಕವಾದ ಕರಕುಶಲಕಲೆಗಳನ್ನು ನಾಶಮಾಡಲಾರರು. ಆಧುನಿಕತೆಯ ಪ್ರಭಾವ ಎಷ್ಟೇ ಗಾಢವಾಗಿದ್ದರೂ ಕೆಲವು ಸಮಾಜಗಳು ಪ್ರಾಚೀನವಾದ ಕೈಕಸುಬುಗಳನ್ನು ಇವತ್ತಿಗೂ ಉಳಿಸಿಕೊಂಡು ಬಂದಿವೆ. ಪಾರಂಪರಿಕವಾದ ವೃತ್ತಿಗಳ ಸ್ಥಾನದಲ್ಲಿ ಗುಡಿಕೈಗಾರಿಕೆಗಳು ಆಧುನಿಕವಾದ ವೇಷ ಧರಿಸಿಕೊಂಡು ಬರುತ್ತವೆ. ಪಾರಂಪರಿಕವಾದ ಕುಶಲಕಲೆಗಳು ಅತ್ಯಾಧುನಿಕವಾದ ಕುಶಲಕಲೆಗಳ ಮುಂದೆ ಪೈಪೋಟಿ ನಡೆಸಲಾರದೆ ಸೋಲನ್ನಪ್ಪುತ್ತವೆ.

ಪ್ರಪಂಚೀಕರಣದ ಇಂದಿನ ದಿನಮಾನದಲ್ಲಿ ಪ್ರಪಂಚವೇ ಒಂದು ಹಳ್ಳಿಯಾಗುವ ಮಾತುಗಳು ಇಂದು ಕೇಳಿಬರುತ್ತಿವೆ. ಪ್ರಪಂಚದ ಪ್ರಾದೇಶಿಕ ಸಾಂಸ್ಕೃತಿಕ ಭಿನ್ನತೆಗಳು ಮರೆತು ಒಂದುಗೂಡುವ ದಿನಗಳು ಹೆಚ್ಚು ಹೆಚ್ಚು ಹತ್ತಿರ ಬರುವುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಮುಂದುವರಿದ ರಾಷ್ಟ್ರಗಳು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಬಂಡವಾಳಹೂಡಿ ಅವುಗಳನ್ನು ಮಾರುಕಟ್ಟೆಗಳನ್ನಾಗಿ ಪರಿವರ್ತಿಸುವುದು ಜಾಗತೀಕರಣದ ಪ್ರಧಾನ ಉದ್ದೇಶವಾಗಿದೆ. ಇಂತಹ ಸಂದರ್ಭದಲ್ಲಿ ಸಾಂಪ್ರದಾಯಕವಾಗಿ ತಯಾರಾಗುತ್ತಿರುವ ಕುಶಲಕಲೆಗಳ ಭವಿಷ್ಯವೇನು? ಅವುಗಳನ್ನು ಆಶ್ರಯಿಸಿ ಬದುಕುವವರ ಜೀವನದ ಪ್ರಶ್ನೆಯೇನು? ಮೊದಲಾದ ಪ್ರಶ್ನೆಗಳು ಉದ್ಭವಿಸುತ್ತವೆ. ಇಂತಹ ಸಂದಿಗ್ಧ ಸಮಯದಲ್ಲಿ ಈ ಪಾರಂಪರಿಕ ಗುಡಿಕೈಗಾರಿಕೆಗಳು ಆಧುನಿಕವಾದ ಕುಶಲಕಲೆಗಳ ಮುಂದೆ, ಬೃಹತ್ ಕೈಗಾರಿಕೆಗಳ ಮುಂದೆ ಪೈಪೋಟಿಯನ್ನು ನಡೆಸಲಾರದೆ ಕುಶಲಕಲೆಗಳ ಜೀವನ್ಮರಣ ಸ್ಥಿತಿಯಲ್ಲಿವೆ.

ಮನೆಯ ಕೆಲಸದ, ಕೃಷಿಯ ಬಿಡುವಿನ ಸಂದರ್ಭದಲ್ಲಿ ಸೃಷ್ಟಿಯಾದ ಕುಶಲಕಲೆಗಳು ಮಹಿಳೆಯರಿಗೆ ಮೀಸಲಾಗಿದ್ದವು. ಪುರುಷಪ್ರಧಾನ ಸಮಾಜದಲ್ಲಿ ದುಡಿಮೆಗೆ ಮಹಿಳೆ ಮೀಸಲಾಗಿದ್ದು, ದುಡಿಮೆಯ ಲಾಭ ಮಾತ್ರ ಪುರುಷನ ಕೈಗೆ ಹೋಗುತ್ತದೆ. ಇಂಡಿಯಾದ ಸಾಂಸ್ಕೃತಿಕ ರಾಜಕಾರಣವು ಮಹಿಳೆಯನ್ನು ಯಾವತ್ತೂ ಸ್ವತಂತ್ರವಾಗಿ ವ್ಯಕ್ತಿತ್ವ ರೂಪಿಸಿಕೊಂಡು ಬಾಳಲು ಬಿಟ್ಟಿಲ್ಲ. ಪಾರಂಪರಿಕವಾದ ಗುಡಿಕೈಗಾರಿಕೆಗಳು ಅತ್ಯಾಧುನಿಕವಾಗಿ ಸರ್ಕಾರವೇ ತರಬೇತಿ ನೀಡಿ ಉತ್ಪಾದಿಸುವ ಕುಶಲಕಲೆಗಳ ಮುಂದೆ ಸೋಲನ್ನಪ್ಪುತ್ತವೆ. ಕಾಲಮಾನದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲಾರದ ಗುಡಿಕೈಗಾರಿಕೆಗಳು ನಾಶದ ಹಾದಿ ಹಿಡಿದಿವೆ. ಕೆಲವು ಪಾರಂಪರಿಕ ಗುಡಿಕೈಗಾರಿಕೆಗಳು ಆಧುನಿಕವಾದ ರೂಪಗಳನ್ನು ಧರಿಸಿಕೊಂಡು ಪುನರ್ಜನ್ಮ ಪಡೆದುಕೊಳ್ಳುತ್ತಿವೆ.

ರಾಷ್ಟ್ರ, ರಾಜ್ಯಸರ್ಕಾರಗಳು, ಸ್ವಯಂಸೇವಾ ಸಂಘಟನೆಗಳು, ಮಹಿಳಾ ಸಂಘಗಳು ಮಹಿಳೆಯ ಬದುಕನ್ನು ಸುಧಾರಿಸಲು ಹತ್ತುಹಲವು ಕ್ರಿಯಾಯೋಜನೆಗಳನ್ನು ರೂಪಿಸಿವೆ. ಸ್ತ್ರೀ ಸಶಕ್ತಿಕರಣದ ಬಗ್ಗೆ ಇಂದು ಎಂದಿಗಿಂತ ಹೆಚ್ಚು ಹೆಚ್ಚು ಕಾರ್ಯಕ್ರಮಗಳು ಜರುಗುತ್ತಿವೆ. ರಾಜಕಾರಣ, ಶಿಕ್ಷಣ, ಉದ್ಯೋಗ ಮೊದಲಾದ ಕ್ಷೇತ್ರಗಳಲ್ಲಿ ಮಹಿಳೆಗೆ ಪ್ರತ್ಯೇಕವಾದ ಮೀಸಲಾತಿಯ ಕುರಿತು ಚಿಂತನೆ, ಚರ್ಚೆ, ಸಂವಾದಗಳು ನಡೆಯುತ್ತಿವೆ.

ಇದು ಮಹಿಳಾಲೋಕದ ಬಗೆಗಿರುವ ಕಾಳಜಿ ಎಂದು ಸಂಶೋಧಿಸಿದ ವಿಷಯ. ಆದರೆ ಇವೆಲ್ಲಾ ರೂಪಿತವಾಗುವುದು ಪುರುಷ ಲೋಕ ಗ್ರಹಿಕೆಯಲ್ಲಿ ಎನ್ನುವುದು ವಿಪರ್ಯಾಸವೇ ಸರಿ. ಹೀಗಿದ್ದೂ ಕೂಡಾ ಮಹಿಳೆಯರಿಗಾಗಿ ಸರ್ಕಾರದಿಂದ ಹಲವು ಯೋಜನೆಗಳಿವೆ. ಆಧುನಿಕವಾದ ರೀತಿಯಲ್ಲಿ ಕುಶಲಕಲೆಗಳ ಬಗ್ಗೆ ತರಬೇತಿ ನೀಡಿ ಸಾಲ ಸೌಲಭ್ಯ ದೊರೆಯುತ್ತದೆ. ಇಷ್ಟಾಗಿಯೂ ಕೂಡಾ ಮಹಿಳೆಯರ ಬದುಕು ಸುಧಾರಿಸಿಲ್ಲದಿರುವುದು ಕಂಡುಬರುತ್ತದೆ. ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಪಾತ್ರವನ್ನು ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಗುಡಿಕೈಗಾರಿಕೆ ಕೆಲಸ ನಾಜೂಕಿನದಾಗಿದ್ದು, ಸ್ವಯಂಪೂರ್ಣ ಗ್ರಾಮಜಗತ್ತಿಗೆ ಆಶ್ರಯನೀಡಿ ಅನ್ನ ಒದಗಿಸಿದವುಗಳು. ಯಾವುದೇ ಬೃಹತ್ ಯಂತ್ರಗಾರಿಕೆ, ತಂತ್ರಗಾರಿಕೆಯನ್ನು ಅವಲಂಬಿಸಿದೆ ಪಾರಂಪರಿಕ ತಿಳುವಳಿಕೆಯಿಂದ ನಿರಂತರವಾಗಿ ಸಾಗಿಬಂದವುಗಳಾಗಿವೆ. ಬದಲಾಗುತ್ತಿರುವ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಇವುಗಳ ಭವಿಷ್ಯ ತುಂಬಾ ಸಂದಿಗ್ಧಮಯವಾಗಿದೆ. ನಾಡಿನ ತುಂಬೆಲ್ಲಾ ಕಾಲ, ಸ್ಥಳ, ಪರಿಸರ ಪ್ರಭಾವ ಅಭಿರುಚಿಗನುಗುಣವಾಗಿ ಸೃಷ್ಟಿಗೊಂಡ ಗುಡಿಕೈಗಾರಿಕೆಗಳ ಕ್ಷೇತ್ರ ವ್ಯಾಪಕವಾಗಿದೆ. ಸಮಯದ ಅಭಾವದಿಂದ ಗುಲ್ಬರ್ಗಾ ನಗರಪ್ರದೇಶವನ್ನು ಅಧ್ಯಯನಕ್ಕೆ ಕೇಂದ್ರಬಿಂದುವಾಗಿಟ್ಟುಕೊಂಡು, ನಗರದಲ್ಲಿ ಈಗಲೂ ಕಾರ್ಯನಿರತ ಗುಡಿಕೈಗಾರಿಕೆಗಳಾದ ಕುಂಬಾರಿಕೆ, ಕಮ್ಮಾರಿಕೆ, ನೇಕಾರಿಕೆ, ಬಡಗಿತನ, ಬೀಡಿ ಕಟ್ಟುವುದು ಈ ಐದು ಉದ್ಯೋಗಗಳಿಗೆ ಸೀಮಿತವಾಗಿರಿಸಿಕೊಂಡಿದ್ದೇನೆ. ಇದು ಈ ಅಧ್ಯಯನದ ಮಿತಿಯೂ ಹೌದು. ಒಂದು ಕಾಲಕ್ಕೆ ನಿರುದ್ಯೋಗವನ್ನು ಹೋಗಲಾಡಿಸಿ ಆಶ್ರಯನೀಡಿದ್ದ ಕುಶಲಕಲೆಗಳು ಅತ್ಯಾಧುನಿಕ ತಂತ್ರಜ್ಞಾನದ ಮುಂದೆ ಇಂದು ಅವುಗಳ ಯಾವ ಸವಾಲುಗಳನ್ನು ಎದುರಿಸಬೇಕಾಗಿದೆ? ಅವುಗಳು ಭವಿಷ್ಯವೇನು? ಈ ಮೊದಲಾದ ಅಂಶಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ನಾಡಿನ ತುಂಬಾ ವ್ಯಾಪಕವಾಗಿರುವ ಇನ್ನೂ ಅನೇಕ ಗುಡಿಕೈಗಾರಿಕೆಗಳು ಇಂದು ಜೀವನ್ಮರಣ ಸ್ಥಿತಿಯಲ್ಲಿವೆ. ಅದಕ್ಕೆ ಕಾರಣಗಳೇನು? ಅವುಗಳ ಸಮಸ್ಯೆಗಳಾವುವು? ಗುಡಿಕೈಗಾರಿಕೆಗಳು ವಸಾಹತುಶಾಹಿ ಆಡಳಿತ, ಕೈಗಾರಿಕೀಕರಣ, ಜಾಗತೀಕರಣದ ಸಂದರ್ಭದಲ್ಲಿ ಗುಡಿಕೈಗಾರಿಕೆಗಳು ಉದ್ಯೋಗವನ್ನು ಒದಗಿಸುವಲ್ಲಿ ಅವುಗಳ ಮಹತ್ವವನ್ನು ತಿಳಿಯಬೇಕಿದೆ. ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಈ ನೆಲದ ಚಾರಿತ್ರಿಕ ಒತ್ತಡಗಳ ಮುಖೇನ ಕರ್ನಾಟಕದ ಅಂತೆಯೇ ಭಾರತದ ಎಲ್ಲಾ ಗುಡಿಕೈಗಾರಿಕೆಗಳ ಅಧ್ಯಯನವನ್ನು ವಿಸ್ತರಿಸಬಹುದು, ಮುಂದುವರಿಸಬಹುದೆಂಬುದು ಈ ಅಧ್ಯಯನದ ಹಿಂದಿರುವ ಅಪೇಕ್ಷೆಯಾಗಿದೆ.

೧.ಅಧ್ಯಯನದ ತಥ್ಯಗಳು

ಗುಲ್ಬರ್ಗಾ ನಗರ ಜಿಲ್ಲೆಯನ್ನು ಅನುಲಕ್ಷಿಸಿ ಗುಡಿಕೈಗಾರಿಕೆಗಳಲ್ಲಿ ಮಹಿಳೆಯ ಪಾತ್ರವನ್ನು ಸಂಶೋಧನೆ ಕೈಗೊಂಡಾಗ ಮಹಿಳೆಯರ ದುಡಿಮೆಯಲ್ಲಿ ಅನೇಕ ಬಗೆಯ ವಿಶೇಷತೆಗಳು ಕಂಡುಬಂದಿವೆ. ಪ್ರಮುಖವಾಗಿ

ಗುರ್ತಿಸಿಕೊಂಡ ಕೈಗಾರಿಕೆಗಳಲ್ಲಿ ಮಹಿಳೆಯು ಹಲವಾರು ಸಮಸ್ಯೆಗಳ ರಾಶಿಯಲ್ಲಿಯೇ ಮುಳಗಿರುವುದು ಕಂಡು ಬರುತ್ತದೆ. ಅಂತಹ ಹಲವು ತಥ್ಯಗಳನ್ನು ಈ ರೀತಿಯಾಗಿ ಗುರ್ತಿಸಲಾಗಿದೆ.

೧. ಸಾಮಾನ್ಯವಾಗಿ ಮಹಿಳೆಯರು ತೊಡಗಿಸಿಕೊಂಡ ಗುಡಿಕೈಗಾರಿಕೆಗಳು ವಂಶಪಾರಂಪರ್ಯವಾಗಿ ಬಂದವುಗಳೇ ಹೆಚ್ಚು, ಜೊತೆಗೆ ಕುಟುಂಬ ನಿರ್ವಹಣೆಯ ಮೂಲ ಉದ್ದೇಶವನ್ನು ಹೊಂದಿದಂತವುಗಳು.

೨. ನಿರ್ದಿಷ್ಟವಾದ ತಿಂಗಳುಗಳಲ್ಲಿ ಮಾತ್ರವೇ ದುಡಿಯುವವರಾಗಿದ್ದಾರೆ.

೩. ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಂಡ ಮಹಿಳೆಯರಲ್ಲಿ ಹೆಚ್ಚಿನ ಪ್ರಮಾಣದವರು ಶಿಕ್ಷಣದಿಂದ ವಂಚಿತರಾಗಿರುವವರೇ ಹೆಚ್ಚು.

೪. ಗುಡಿಕೈಗಾರಿಕೆಗಳಲ್ಲಿ ಮಹಿಳೆಯು ತ್ರಿರೂಪಿ ದುಡಿಮೆಯನ್ನು ಮೂಡುತ್ತಿರುವುದು ಕಂಡುಬರುತ್ತದೆ.

೫. ಮಹಿಳೆಯರು ತಯಾರಿಸುವ ಸಾಮಗ್ರಿಗಳಿಗೆ ಮಾರುಕಟ್ಟೆಯ ಸಮಸ್ಯೆಯು ಪ್ರಮುಖವಾಗಿ ಕಂಡುಬರುತ್ತದೆ.

೬. ಮಹಿಳೆಯರು ಗಳಿಸುವ ಆದಾಯದಲ್ಲಿ ಶೇ ೭೦ ರಷ್ಟು ಪುರುಷರ ಪಾಲಾಗುತ್ತಿದೆ.

೭. ಜಾಗತೀಕರಣದ ಸಂದರ್ಭದಲ್ಲಿ ಈ ಕೈಗಾರಿಕೆಗಳು ಸಂದಿಗ್ಧವಾದ ಹಂತಕ್ಕೆ ಬಂದಿವೆ.

೮. ಹಲವಾರು ಕೈಗಾರಿಕೆಗಳು ಆದಾಯ ಗಳಿಸಲಾರದಿದ್ದರೂ ಸಹ ಉತ್ಪಾದನೆಯ ಮೂಲವಾಗಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.

೯. ಸರ್ಕಾರ ರೂಪಿಸುತ್ತಿರುವ ಕೈಗಾರಿಕಾನೀತಿಗಳು ಅಷ್ಟಾಗಿ ಮಹಿಳೆಯರ ಪಾತ್ರವನ್ನು ಕೈಗಾರಿಕೆಗಳನ್ನು ಅನುಲಕ್ಷಿಸದೇ ಇರುವುದು ಕಾಣಬರುತ್ತದೆ.

೧೦. ಗುಡಿಕೈಗಾರಿಕೆಯಲ್ಲಿ ತೊಡಗಿಸಿಕೊಂಡ ಕುಟುಂಬಗಳು ತೀವ್ರ ಪೈಪೋಟಿಯಿಂದ ನಿರುದ್ಯೋಗಿಗಳಾಗುವ ಸಂದರ್ಭ ಕಾಣಬರುತ್ತದೆ. ಇಂತಹ ಕುಟುಂಬಗಳು ಬಡತನದಿಂದ ನರಳುತ್ತಿವೆ.

೧೧. ಹೊಸ ಕೈಗಾರಿಕಾ ನೀತಿಯಿಂದ ಮಹಿಳೆಯರ ಉದ್ಯೋಗದ ಜೊತೆಗೆ ಗೃಹವಾರ್ತೆ, ಕೌಟುಂಬಿಕ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಆಪಾಯ ಸ್ಥಿತಿಯಿಂದ ನರಳುವಂತಾಗಿದೆ.

೧೨. ಗುಡಿಕೈಗಾರಿಕೆಯಲ್ಲಿ ತೊಡಗಿಸಿಕೊಂಡು ನಿರದ್ಯೋಗಿಗಳಿಂದ ಹಲವಾರು ಮಹಿಳೆಯರು ಸಾಮಾಜಿಕ ಪಿಡುಗುಗಳಲ್ಲಿ ತೊಡಗಿ ಕೊಳ್ಳುತ್ತಿರುವುದು ಕಂಡುಬರುತ್ತದೆ.

೧೩. ಗುಡಿಕೈಗಾರಿಕೆಯಲ್ಲಿ ದುಡಿಯುವ ಮಹಿಳೆಯರ ಆದಾಯ ಮತ್ತು ಉಳಿತಾಯ ಸಾಕಷ್ಟು ಕಡಿಮೆ ಇದೆ. ಇದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ಹಲವಾರು ತೊಡಕುಗಳು ಕಂಡುಬರುತ್ತವೆ.

೧೪. ಸರ್ಕಾರಿ ಸೌಲಭ್ಯಗಳಿಂದ ವಂಚಿತಳಾದವರಲ್ಲಿ ಮಹಿಳೆಯರೇ ಹೆಚ್ಚು.

೧೫. ಸರ್ಕಾರದ ಭೂಸುಧಾರಣೆಯ ಲಾಭ ಪಡೆದವರೂ ವಿರಳವಾಗಿದ್ದಾರೆ. ಹೆಚ್ಚಿನ ಪ್ರಮಾಣದ ಕುಟುಂಬಗಳು ವಸತಿ ಮತ್ತು ಭೂಮಿಯ ಸೌಲಭ್ಯ ಕಾಣದ ಕುಟುಂಬಗಳಾಗಿವೆ.

೨. ಪುನಶ್ಚೇತನ ಕ್ರಮಗಳು

ಇಂದ ಆಧುನಿಕತೆಯ ಓಟದಲ್ಲಿ ಪಾಶ್ಚೀತಿಕರಣದ ಪ್ರಭಾವದಿಂದ ಕೈಗಾರಿಕೆಗಳ ಬೆಳವಣಿಗೆಯಿಂದ ನಮ್ಮ ಪರಂಪರಾನುಗುಣವಾಗಿ ಬಂದ ಗುಡಿಕೈಗಾರಿಕೆಗಳು ಅವನತಿಯ ಹಾದಿಯಲ್ಲಿ ಕ್ರಮಿಸುತ್ತಿವೆ. ಇಂಥ ಯಾಂತ್ರಿಕ ಜಗತ್ತಿನ ನಡುವೆಯು ಅಲ್ಲಲ್ಲಿ ಗುಡಿಕೈಗಾರಿಕೆಗಳನ್ನು ಉಳಿದಿರುವುದು ಕಾಣುತ್ತೇವೆ. ಈ ಗುಡಿಕೈಗಾರಿಕೆಗಳಲ್ಲಿ ಬಡತನದಿಂದ ಬಳಲುವವರು ಹೆಚ್ಚಾಗಿ ಕಂಡುಬರುತ್ತಾರೆ. ಈ ಸದ್ಯದ ಪರಿಸ್ಥಿತಿಯಲ್ಲಿ ಬೆಲೆ ಇಲ್ಲದ ಈ ಗುಡಿಕೈಗಾರಿಕೆಗಳಿಗೆ ಹಿಂದೊಮ್ಮೆ ಅಪಾರ ಗೌರವವಿತ್ತು. ಹಾಗೂ ಅವರ ಉಪಜೀವನ ಸಾಗುತ್ತಿತ್ತು. ಆದರೆ, ಇಂದು ಗುಡಿಕೈಗಾರಿಕೆಗಳು ಶಾಪಗ್ರಸ್ತವಾಗಿವೆ. ಇದನ್ನೇ ನಂಬಿಕೊಂಡ ಶಿಕ್ಷಣದಿಂದ ದೂರುಳಿದ ಕುಟುಂಬಗಳು ಹಲವಾರು ಸಮಸ್ಯೆಗಳಿಗೆ ಈಡಾಗಿದ್ದಾರೆ. ಇದಕ್ಕೆ ಕಾರಣ ಗುಡಿಕೈಗಾರಿಕೆಗಳು ನಶಿಸುವಿಕೆ ಈ ಹಿನ್ನೆಲೆಯಲ್ಲಿ ಗುಡಿಕೈಗಾರಿಕೆಗಳಿಗೆ ಪುನಶ್ಚೇತನದ ಅಗತ್ಯವಿದೆ. ಪ್ರಸ್ತುತ ಪರಿಸರದಲ್ಲಿ ಅತ್ಯವಶ್ಯಕವಾಗಿ ಬೇಕಾಗಿರುವ ಸಂಜೀವಿನಿಯಾಗಿದೆ. ಮಾನವನ ಸಾಮೂಹಿಕ ಅಗತ್ಯಗಳಿಗೆ ಮಾತ್ರವಲ್ಲದೆ ವೈಯಕ್ತಿಕ ಹಿತಾಸಕ್ತಿಗಳ ಅವಶ್ಯಕತೆಗಾಗಿಯೂ ಈ ಗುಡಿಕೈಗಾರಿಕೆಗಳ ಪುನಶ್ಚೇತನ ಬೇಕಾಗಿದೆ. ಇದರಿಂದ ಎಷ್ಟೋ ಮಹಿಳೆಯರಿಗೆ, ಒಂದು ನೀತಿ ಕಲ್ಪಿಸಿದಂತಾಗುತ್ತದೆ. ಹೀಗಾಗಿ ಪುರಾತನ ಸಂಸ್ಕೃತಿ ಪ್ರತಿಬಿಂಬವಾಗಿದ್ದ ಈ ಗುಡಿಕೈಗಾರಿಕೆಗಳನ್ನು ಬೆಳಸಿಕೊಂಡು ಹೋಗುವ ಅಗತ್ಯ ಹಿಂದಿನಗಿಂತ ಸದ್ಯದ ಸ್ಥಿತಿಯಲ್ಲಿ ಹೆಚ್ಚಾಗಿದೆ. ಅದಕ್ಕೆ ಪುನಶ್ಚೇತನ ಅಗತ್ಯವಿದೆ.

ಪುನಶ್ಚೇತನದ ಪ್ರಮುಖ ಅಂಶಗಳು

೧. ಸರ್ಕಾರ ಯೋಜನೆಗಳ ಮೂಲಕ ಗುಡಿಕೈಗಾರಿಕೆಗಳಿಗೆ ಧನ ಸಹಾಯ ನೀಡುವುದು ಹಾಗೂ ಇವುಗಳ ಅಭಿವೃದ್ಧಿಗಾಗಿ ಸಾಕಷ್ಟು ಹಣವನ್ನು ಮೀಸಲಿಡಬೇಕು. ಮಹಿಳೆಯರಿಗಾಗಿ ಹಲವಾರು ವೃತ್ತಿ ಯೋಜನೆಗಳನ್ನು ಜಾರಿಗೆ ತರುವುದು.

೨. ಈ ಗುಡಿಕೈಗಾರಿಕೆಗಳ ಸಾಂಪ್ರದಾಯಿಕ ವೃತ್ತಿಯಾಗಿದೆ. ಇಂದು ಆಧುನಿಕ ತಂತ್ರಜ್ಞಾನದ ಕೌಶಲ್ಯ ಬೆಳೆಸಿಕೊಂಡು ವಸ್ತುಗಳ ತಯಾರಿಕೆಯಲ್ಲಿ ಹೊಸತನವನ್ನು ಮಾಡಬೇಕು. ಸಾಂಪ್ರದಾಯಿಕ ಮಾದರಿಯಿಂದ ಇಂದು ಆಧುನಿಕತೆ ಬಂದಾಗ ಮಾತ್ರ ಈ ಗುಡಿಕೈಗಾರಿಕೆಗಳ ಪುನಶ್ಚೇತನ ಕಂಡುಕೊಳ್ಳಬಹುದು.

೩. ಸರ್ಕಾರ ಈ ಗುಡಿಕೈಗಾರಿಕೆಗಳಿಗೆ ಸಂಬಂಧಿಸಿದ ವೃತ್ತಿ ತರಬೇತಿಗಳನ್ನು ಮತ್ತು ಉಚಿತ ಶಿಕ್ಷಣವನ್ನು ನೀಡವುದರಿಂದ ಗುಡಿಕೈಗಾರಿಕೆಗಳ ಪುನಶ್ಚೇತನ ಸಾಧ್ಯ.

೪. ಗುಡಿಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಒಂದುಗೂಡಿಸಿ ಅವರ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಒಂದೇ ಉದ್ದೇಶಕ್ಕಾಗಿ ಕೆಲಸ ಮಾಡುವ ಈ ಮಹಿಳೆಯರನ್ನು ಸ್ವ ಸ್ವಹಾಯ ಗುಂಪುನಿಡಿಯಲ್ಲಿ ಒಂದಾಗುವಂತೆ ಮಾಡಿ ಉಳಿತಾಯದ ಬಗ್ಗೆ ಅರಿವು ಮೂಡಿಸಬೇಕು. ಸ್ವ ಸಹಾಯ ಗುಂಪುಗಳಿಂದ

ಉಳಿತಾಯ ಮಾಡಿದ ಹಣವನ್ನು ಗುಡಿಕೈಗಾರಿಕೆಗಳ ಬೆಳವಣಿಗೆಗೆ ಸಹಾಯಕವಾಗುವುದು ಇದರಿಂದ ಪುನಶ್ಚೇತನ ಕಂಡುಕೊಳ್ಳಬಹುದು.

೫. ಗುಡಿಕೈಗಾರಿಕೆಗಳಿಗೆ ಸರ್ಕಾರದಿಂದ ರಿಯಾಯಿತಿ ಸಾಲಸೌಲಭ್ಯ ನೀಡುವುದರಿಂದ ಮಹಿಳೆಯರು ಮತ್ತು ಪುರುಷರು ಗುಡಿಕೈಗಾರಿಕೆಗಳಲ್ಲಿ ಹೆಚ್ಚಿನ ಆಸಕ್ತಿಯಿಂದ ಭಾಗವಹಿಸುವಂತಾಗುತ್ತದೆ. ಇದರಿಂದ ಗುಡಿಕೈಗಾರಿಕೆಗಳ ವೃತ್ತಿಯಲ್ಲಿ ಬದಲಾವಣೆ ಸಾಧ್ಯ.

೬. ಮಹಿಳೆಯರಿಗೆ ಗುಡಿಕೈಗಾರಿಕೆಗಳಲ್ಲಿ ಪೂರ್ಣ ಪ್ರಮಾಣದ ಸ್ವಾವಲಂಬನೆ ನೀಡುವುದರಿಂದ ಮಹಿಳೆಯರು ಹೆಚ್ಚಿನ ಆಸಕ್ತಿಯಿಂದ ಈ ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಳ್ಳುವಂತಾಗುತ್ತದೆ. ಇದರಿಂದ ವಸ್ತುಗಳು ಉತ್ಪಾದನೆ, ಹೆಚ್ಚಾಗಿ ಗುಡಿಕೈಗಾರಿಕೆಗಳು ಬೆಳವಣಿಗೆಯನ್ನು ಕಾಣಬಹುದು.

೭. ಗುಡಿಕೈಗಾರಿಕೆ ವಸ್ತುಗಳನ್ನು ವಿವಿಧ ವಿನ್ಯಾಸಗಳಿಂದ ತಯಾರಿಸುವುದರ ಮೂಲಕ ಈ ಗುಡಿಕೈಗಾರಿಕೆಗಳ ವಸ್ತುಗಳ ಕಡೆಗೆ ಜನರು ಆಕರ್ಷಣೆಯಿಂದ ನೋಡಿ ವಸ್ತುಗಳ ಮಾರಾಟ ಹೆಚ್ಚಾಗಬಹುದು. ಇದರಿಂದ ಗುಡಿಕೈಗಾರಿಕೆಗಳಿಗೆ ಮತ್ತು ಹೊಸ ಜೀವ ಬರುತ್ತದೆ.

೮. ಸರ್ಕಾರವೇ ಈ ವೃತ್ತಿಗಳಿಗೆ ಸೂಕ್ತವಾದ ಮಾರುಕಟ್ಟೆ ಒದಗಿಸುವುದರ ಮೂಲಕ ಈ ಗುಡಿಕೈಗಾರಿಕೆಗಳ ವಸ್ತುಗಳು ಮಾರಾಟವಾಗುವಂತೆ ಮಾಡಬೇಕು. ಇದರಿಂದ ಗುಡಿಕೈಗಾರಿಕೆಗಳ ಪ್ರಗತಿ ಸಾಧ್ಯವಾಗುತ್ತದೆ.

೯. ತಂತ್ರಜ್ಞಾನದ ಕೌಶಲ್ಯವನ್ನು ಬಳಸಿಕೊಳ್ಳುವುದರ ಮೂಲಕ ಆಧುನಿಕ ಕಾಲದಲ್ಲಿ ಜನರ ಭಾವನೆಗಳಿಗೆ ತಕ್ಕಂತೆ ವಸ್ತುಗಳ ತಯಾರಿಕೆಯಲ್ಲಿ ಮಾರ್ಪಾಟು ಮಾಡಿಕೊಳ್ಳಬೇಕು. ಮತ್ತು ಜನರ ಆಸೆ ಅಭಿರುಚಿಗಳಿಗೆ, ಈ ಗುಡಿಕೈಗಾರಿಕೆಗಳ ವಸ್ತುಗಳು ಹಿಡಿಸಿದಾಗ ಗುಡಿಕೈಗಾರಿಕೆಗಳ ತನ್ನಿಂದ ತಾನೇ ಪುನಶ್ಚೇತನ ಹಾದಿಯಲ್ಲಿ ನಡೆಯುವಂತಾಗುತ್ತದೆ. ಈ ಎಲ್ಲಾ ಕ್ರಮಗಳನ್ನು ಕೈಗೊಂಡಾಗ ಅವನತಿಯ ಅಂಚಿನಲ್ಲಿರುವ ಗುಡಿಕೈಗಾರಿಕೆಗಳಿಗೆ ಪುನರ್‌ಜೀವ ಕೊಡಬಹುದು.

೩. ಕೆಲವು ಸಲಹೆಗಳು

ಗುಡಿಕೈಗಾರಿಕೆಯಲ್ಲಿ ಮಹಿಳೆಯರ ಪಾತ್ರ ಎನ್ನುವ ಶೀರ್ಷಿಕೆಯಡಿ ಸಂಶೋಧನೆಯನ್ನು ಕೈಗೊಂಡ ಹಲವಾರು ಸಮಸ್ಯೆಗಳು, ತಥ್ಯಗಳು ಕಂಡುಬಂದವು. ಅಂತಹ ಸಮಸ್ಯೆಗಳನ್ನು ಪರಿಹರಿಸಲು ಹಲವು ಸಲಹೆಗಳನ್ನು ನೀಡಲಾಗಿದೆ. ಈ ಸಲಹೆಗಳಿಂದ ಗುಡಿಕೈಗಾರಿಕೆಯಲ್ಲಿನ ಮಹಿಳೆಯರ ಜೀವನ ವಿಧಾನಕ್ಕೆ ಉಪಯುಕ್ತವಾಗಿವೆ. ಹೀಗಾಗಿ ಗುಡಿಕೈಗಾರಿಕೆಯಲ್ಲಿನ ಮಹಿಳೆಯರಿಗೆ ಸರ್ಕಾರದ ಸೌಲಭ್ಯಗಳು ಅಗತ್ಯ ದೊರೆಯಬೇಕಾದ ಸಂದರ್ಭದಲ್ಲಿ ಹಲವಾರು ಯೋಜನೆಗಳು ರೂಪಗೊಳ್ಳಬೇಕಾದದ್ದು ಅವಶ್ಯಕವಾಗಿದೆ.

ಗುಡಿಕೈಗಾರಿಕೆಯಲ್ಲಿ ತೊಡಗಿಸಿಕೊಂಡ ಸಾಕಷ್ಟು ಮಹಿಳೆಯರಲ್ಲಿ ಶಿಕ್ಷಣದಿಂದ ವಂಚಿತರಾದವರೇ ಹೆಚ್ಚು. ಹಾಗೂ ಬಡತನದಿಂದ ಕೂಡಿದ ಕುಟುಂಬಗಳು ಈ ಎಲ್ಲಾ ಕುಟುಂಬಗಳು ಸಂಪ್ರದಾಯಕ್ಕೆ ಶರಣಾಗಿ

ವಂಶವಾಹಿನಿಯಾಗಿ ಬಂದಂತಹ ವೃತ್ತಿಗಳನ್ನು ಮುಂದುವರೆಸಿಕೊಂಡು ಬರುತ್ತಿರುವವರಾಗಿದ್ದಾರೆ. ಅಂತಹ ಕೈಗಾರಿಕೆಗಳಲ್ಲಿ ದೊರೆಯುವ ಆದಾಯವು ಸಹ ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ. ಆದ್ದರಿಂದಲೇ ಈ ರಂಗದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಯು ಚಿಂತಜನಕವಾಗಿದೆ. ಹೀಗಾಗಿ ಗುಡಿಕೈಗಾರಿಕೆಯಲ್ಲಿ ದುಡಿಯುವ ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆ ಈ ಕೆಳಗಿನ ಸಲಹೆಗಳನ್ನು ಕೊಡಲಾಗಿದೆ.

೧. ಸಾಧ್ಯವದಷ್ಟು ಸರ್ಕಾರದ ನೆರವು ಈ ಗುಡಿಕೈಗಾರಿಕೆಗಳಿಗೆ ದೊರೆಯಬೇಕಿದೆ.

೨. ಉತ್ತಮ ಮಟ್ಟದ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡು ಅವರುಗಳನ್ನು ಉನ್ನತ ಮಟ್ಟದ ತಯಾರಿಕೆಗೆ ಸಜ್ಜುಗೊಳಿಸಬೇಕಿದೆ.

೩. ಸರ್ಕಾರದ ಯೋಜನೆಗಳಲ್ಲಿ ಗುಡಿಕೈಗಾರಿಕೆಗಳಲ್ಲಿನ ಮಹಿಳೆಯರಿಗೆ ವಿಶೇಷವಾದ ಪ್ರಾತಿನಿಧ್ಯ ಕೊಡಬೇಕಾಗಿದೆ.

೪. ಉತ್ತಮ ಮಟ್ಟದ ಕಚ್ಚಾಸರಕುಗಳು ದೊರೆಯುವಂತೆ ಮಾಡಬೇಕಿದೆ.

೫. ಆರೋಗ್ಯದ ಸಮಸ್ಯೆಯು ಉತ್ತಮ ಪಡಿಸುವ ಸಲುವಾಗಿ ಹೆಚ್ಚಿನ ಕ್ರಮಕೈಗೊಳ್ಳಬೇಕಿದೆ.

೬. ಸಾಮಾಜೀಕರಣದ ವ್ಯವಸ್ಥೆಯಲ್ಲಿ ಕೌಟುಂಬಿಕ ವ್ಯವಸ್ಥೆಗೆ ಬೇಕಾದ ಹಣಕಾಸಿನ ಸಹಾಯ ಮಾಡಬೇಕಿದೆ.

೭. ವಿಶೇಷವಾಗಿ ಮಹಿಳೆಯರಿಗೆ ಶಿಕ್ಷಣವನ್ನು ದೊರಕಿಸಿಕೊಡಬೇಕಾಗಿದೆ.

೮. ಭೂಸುಧಾರಣಾ ಕ್ರಮಗಳಿಂದ ಭೂರಹಿತರಿಗೆ ಭೂಮಿ ಒದಗಿಸಲು ಸರ್ಕಾರ ಮುಂದಾಗಬೇಕಿದೆ.

೯. ಅಲ್ಪಾವದಿ ಸಾಲಗಳನ್ನು ನೀಡುವ ಸಲುವಾಗಿ ಹಲವಾರು ಯೋಜನೆಗಳು ರೂಪಿಸಬೇಕಿದೆ.

೧೦. ಮಾನವ ಅಭಿವೃದ್ದಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಶ್ರಮಸಂಪತ್ತು ಉತ್ತಮವಾಗಿ ಬಳಕೆಯಾಗುವಂತೆ ಮಾಡಬೇಕಿದೆ.

೧೧. ಜನರಲ್ಲಿ ಉಳಿತಾಯದ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕಿದೆ.

೧೨. ಮುಖ್ಯವಾಗಿ ಮೂಲಭೂತ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಿಕೊಡಬೇಕಾಗಿದೆ.

೧೩. ವ್ಯವಸ್ಥೆಯಲ್ಲಿ ಮಹಿಳೆಯರ ಶೋಷಣೆಯನ್ನು ತಡೆಗಟ್ಟಬೇಕಿದೆ.

೧೪. ಗುಡಿಕೈಗಾರಿಕೆಯ ವಲಯದ ಮಹಿಳೆಯರ ಅಭಿವೃದ್ದಿಗಾಗಿ ಹೆಚ್ಚಿನ ಪ್ರಮಾಣದ ಹಣಕಾಸು ಒದಗಿಸಿ ಕೊಡಬೇಕು.

ಈ ಮೇಲಿನ ಎಲ್ಲಾ ಕ್ರಮಗಳು ಮಹಿಳೆಯರನ್ನು ಗುಡಿಕೈಗಾರಿಕಾ ರಂಗದಲ್ಲಿ ತೀವ್ರಗತಿಯ ಪ್ರಗತಿಯನ್ನು ಕಾಣಲು ಸಹಾಯಕವಾಗುವವೆಂದು ಗುರ್ತಿಸಬಹುದಾಗಿದೆ. ಹೀಗಾಗಿ ಮಹಿಳೆಯರ ಶೋಷಣೆಯನ್ನು ತಡೆಗಟ್ಟಿ ಉತ್ತಮ ಸ್ಥಿತಿಯತ್ತ ಕೊಂಡೊಯ್ಯಲು ಅವಕಾಶ ನೀಡಬೇಕಾಗಿದೆ.

ಉತ್ತಮ ರೀತಿಯ ಭವಿಷ್ಯಕ್ಕಾಗಿ, ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ. ಶೋಷಣೆಗಿಂತ ಜೀವನವಿಧಾನ ರೂಪಿಕೊಳ್ಳುವ ಸಲುವಾಗಿ ಇಂದು ಈ ಕ್ರಮಗಳು ಅಗತ್ಯವೂ ಹೌದು.

ಅನೇಕ ಜನರು ಶಿಕ್ಷಣದಿಂದ ವಂಚಿತರೇ ಹಾಗಾಗಿ ಪ್ರಾಥಮಿಕ ಶಿಕ್ಷಣದ ಪದ್ಧತಿಯಲ್ಲಿ. ಹಲವಾರು ಬದಲಾವಣೆಗಳು ತಂದು ಉತ್ತಮ ರೀತಿಯ ಶಿಕ್ಷಣವನ್ನು ವಿಶೇಷವಾಗಿ ಮಹಿಳೆಯರಿಗೆ ನೀಡಬೇಕು. ಬಾಲಕೈಗಾರಿಕಾ ವ್ಯವಸ್ಥೆಯು ಸಹ ಅಲ್ಪ ಕಂಡುಬರುತ್ತದೆ. ಅದನ್ನು ನಿಷೇಧಿಸಬೇಕಿದೆ.

ಮಹಿಳೆಯರ ತ್ರಿರೂಪಿ ದುಡಿಮೆಯನ್ನು ಪರಿಗಣಿಸಬೇಕು. ಮಹಿಳೆಯರ ಸಾಮರ್ಥ್ಯದ ತೋಪರ್ಡೆಗೆ ಅವಕಾಶ ನೀಡಬೇಕು. ಇದರಿಂದ ಪ್ರಗತಿಯು ಸಾಧ್ಯವಾಗಬಹುದು. ಉತ್ತಮ ಸ್ಥಿತಿಯ ಕೌಟುಂಬಿಕ ಜೀವನ ವಿಧಾನಕ್ಕೆ ಆರ್ಥಿಕ ವ್ಯವಸ್ಥೆಯ ಬುನಾದಿ ಭದ್ರವಾಗಿರಬೇಕಾದ ಪರಿಸ್ಥಿತಿ ಇದೆ. ಆದ್ದರಿಂದಲೇ ಈ ರಂಗದ ವೃತ್ತಿಗಳಲ್ಲಿ ತೊಡಗಿಸಿಕೊಂಡ ಮಹಿಳಾ ಕ್ಷೇತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಆರೋಗ್ಯದ ವಿಷಯದ ಬಗ್ಗೆ ತಿಳುವಳಿಕೆ ನೀಡಬೇಕಿದೆ.

ಆದಾಯವು ಕಡಿಮೆ ಉತ್ಪಾದನೆಯು ಸಹ ಕಡಿಮೆ ಇರುವುದು ಇದರಿಂದ ಕುಟುಂಬದ ನಿರ್ವಹಣೆಯು ಸಹ ಕಷ್ಟವಾಗುವುದು. ಹೀಗಾಗಿ ಉಳಿತಾಯದ ಬಗ್ಗೆ ತಿಳಿಸಿಕೊಡಬೇಕಿದೆ. ಮಹಿಳಾ ಕೇಂದ್ರಿತ ವಲಯಗಳಲ್ಲಿ ಬಹುಮುಖ್ಯವಾಗಿ ಕಂಡುಬರುವ ಈ ಲಿಂಗ ತಾರತಮ್ಯವನ್ನು ತೊಡದು ಹಾಕಬೇಕಿದೆ. ಇದರಿಂದ ಅವರುಗಳ ಪ್ರತಿಭೆಗೆ ಅವಕಾಶವಿತ್ತು. ಹಾಗೆ ಆಗುವುದರಿಂದ, ಮಾನವಮುಖಿ ಅಭಿವೃದ್ಧಿಗೆ ನೇರಮುಖಿಯಾದಂತೆ ಆಗುವುದರಿಂದ ಆರ್ಥಿಕ ವಲಯದಲ್ಲಿ ಹಲವಾರು ಬದಲಾವಣೆಗಳು ಕಾಣಬರುತ್ತವೆ.

ಬಡತನ, ನಿರುದ್ಯೋಗ ಇಂತಹ ಹಲಾವರು ಸಮಸ್ಯೆಗಳು ಪರಿಹಾರಕ್ಕೆ ಸಾಧ್ಯವಾಗುತ್ತವೆ. ಈ ರೀತಿಯಿಂದ ಕಲಿತ ಹೆಣ್ಣು ಹಲವಾರು ರಂಗಗಳಲ್ಲಿ ಮಾದರಿಯಾಗಬಲ್ಲಳು ಎಂಬುದನ್ನು ಮನವರಿಕೆ ಮಾಡಿಕೊಂಡು ಅಗತ್ಯವಿರುವ ಎಲ್ಲಾ ಪ್ರೋತ್ಸಾಹಗಳನ್ನು ನೀಡಬೇಕಾಗಿದೆ.

******

ಅನುಬಂಧ

ಗ್ರಂಥಸೂಚಿ

೧. ಉಜ್ವಲ ಹಿರೇಮಠ್, ಮಹಿಳೆಯರ ಪ್ರಗತಿಗೆ ಸಂಪನ್ಮೂಲಗಳು ಕ್ರೋಢೀಕರಣ, ಪ್ರಸಾರಾಂಗ, ಗುಲಬರ್ಗಾ ವಿ.ವಿ. ಗುಲಬರ್ಗಾ ೧೯೯೬

೨. ಕರೀಗೌಡ ಬೀಚನಹಳ್ಳಿ, ಸಂ ಕರಕುಶಲ ಕಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦

೩. ಗವಿಸಿದ್ಧಯ್ಯ ಎನ್. ಬಳ್ಳಾರಿ ಕಿನ್ನಾಳದ ಗೊಂಬೆಗಳು, ಪ್ರಸಾರಾಂಗ, ಗುಲಬರ್ಗಾ ವಿ.ವಿ. ಗುಲಬರ್ಗಾ, ೧೯೯೬

೪. ಕೆ.ಎಲ್. ಗೋಪಾಲ್‌ಕೃಷ್ಣರಾವ್, ಅನು ಮಿಗುತಾಯ ಮೌಲ್ಯ ಎಂದರೇನು ನವ ಕರ್ನಾಟಕ ಪ್ರಕಾಶನ ಬೆಂಗಳೂರು, ೧೯೮೯

೫. ಗೋಪಾಲ್‌ಕೃಷ್ಣರಾವ್,ಕೆ.ಎಲ್, ಭಾರತ ಆರ್ಥಿಕ ವ್ಯವಸ್ಥೆ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೭

೬. ಗೋಪಾಲ್‌ಕೃಷ್ಣರಾವ್,ಕೆ.ಎಲ್.ಅನು ಮಹಿಳೆಯರ ವಿಮೋಚನೆ, ಪ್ರಗತಿ ಪ್ರಕಾಶನ, ಮಾಸ್ಕೊ, ೧೯೮೦

೭. ಗಂಗಾಧರ್ ದೈವಾಜ್ಞ, ಬುಡಕಟ್ಟು ಸಮಾಜ, ಹುಟ್ಟು ಸಾವಿನ ನಡುವೆ ಪ್ರಸಾರಾಂಗ ಕನ್ನಡ ವಿ.ವಿ. ೨೦೦೧

೮. ಗೊರೂರು ರಾಮಸ್ವಾಮಿ, ಅನು ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ, ನವ ಜೀವನ ಪ್ರಕಾಶ ಮಂದಿರ, ಅಹಮದಾಬಾದ್, ೧೯೯೫

೯. ಚಂದ್ರಶೇಖರ ಟಿ.ಆರ್, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ ಪ್ರಸಾರಾಂಗ ಕನ್ನಡ ವಿ ವಿ,ಹಂಪಿ ೨೦೦೦

೧೦. ಚಂದ್ರಶೇಖರ ಟಿ.ಆರ್, ಅಮಾರ್ತ್ಯಸೇನರ ಅಭಿವೃದ್ಧಿ ಕಥನ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೯

೧೧. ಚಂದ್ರ ಪೂಜಾರಿ ಎಂ. ದೇಶೀಯತೆ ನೆರಳಿನಲ್ಲಿ ವಿಕೇಂದ್ರೀಕರಣ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ ೨೦೦೧

೧೨. ಜೆ.ಎಸ್. ಪಾಟೇಲ್, ಮಹಿಳೆ ಮತ್ತು ಕಾನೂನು, ಪ್ರಸಾರಾಂಗ, ಗುಲ್ಬರ್ಗಾ ವಿ.ವಿ. ಗುಲ್ಬರ್ಗಾ ೧೯೯೬

೧೨. ಜಯಮ್ಮ ಎಚ್. ಕರಿಯಣ್ಣ, ಹೆಣ್ಣಿನ ಸ್ಥಾನಮಾನ, ಜಯಾ ಪ್ರಕಾಶನ, ಬೆಂಗಳೂರು, ೨೦೦೦

೧೩. ಜ್ಯೋತ್ಸ್ನಾ ಕಾಮತ, ಮಹಿಳೆ ಒಂದು ಅಧ್ಯಯನ, ನವಕರ್ನಾಟಕ ಪ್ರಕಾಶನ, ೧೯೯೯

೧೪. ನಾಗೇಶ್ ಹೆಚ್.ಬಿ. ಭಾರತೀಯ ಗ್ರಾಮ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ.ಮೈಸೂರು, ೧೯೯೬

೧೫. ಫ್ರೆಡ್ರಿಕ್ ಎಂಗೆಲ್ಸ್, ಅನು. ಕೆ.ಎಲ್. ಗೋಪಾಲ್ ಕೃಷ್ಣರಾವ್, ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ

ಇವುಗಳ ಉಗಮ, ಪ್ರಗತಿ, ಪ್ರಕಾಶನ, ಮಾಸ್ಕೊ,
೧೬. ಪ್ರಭಾಕರ ಶಶಿಲ ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು, ೧೯೯೫
೧೭. ಪುಟ್ಟಿ ಕುಲಕರ್ಣಿ, ಅನು. ಜಾಗತೀಕರಣವಾದದ ಪರ್ಯಾಯ, ಮೂಲ ಜೇಮ್ಸ್ ಪೆಟ್ರಾನ್, ೧೯೯೯
೧೮. ಬಸವರಾಜ ದೇವನೂರು, ವೃತ್ತಿಪರ ತರಬೇತಿ, ಆಕರಸಾಹಿತ್ಯ, ೧೯೯೬
೧೯. ಬಂಜಗೆರೆ ಜಯಪ್ರಕಾಶ್, ಕನ್ನಡ ರಾಷ್ಟ್ರೀಯತೆ, ಕ್ರಾಂತಿ ಸಿರಿ ಪ್ರಕಾಶನ, ಬೆಂಗಳೂರು, ೨೦೦೦
೨೦. ಮಹೇಶ್ ತಿಪ್ಪೆಶೆಟ್ಟಿ, ಇಳಕಲ್ ಸೀರೆ, ಪ್ರಸಾರಾಂಗ, ೨೦೦೦
೨೧. ಮರುಳಸಿದ್ದಯ್ಯ ಎಚ್.ಎಂ. ಅನು ಗಾಂಧಿಯ ಅರ್ಥಶಾಸ್ತ್ರ
೨೨. ಮಧು ವೆಂಕಾರೆಡ್ಡಿ, ಜನಪದ ಕಸೂತಿ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ೨೦೦೦
೨೩. ಮಲ್ಲ ದೇವರು ಹೆಚ್.ಪಿ. ಸಂ. ಸರ್ವೋದಯ, ಗಾಂಧಿ ಭವನ, ಮಾನಸ ಗಂಗೋತ್ರಿ ಮೈಸೂರು, ೧೯೮೨
೨೪. ಮೈಲಾರಪ್ಪ ಬಿ.ಸಿ. ಗ್ರಾಮೀಣ ಬದುಕು ಮತ್ತು ಸಾಮಾಜಿಕ ಚಳುವಳಿ, ಪ್ರಸಾರಾಂಗ, ಬೆಂಗಳೂರು ವಿ.ವಿ. ೧೯೯೮
೨೫. ಮೊ.ಕ. ಅರ್ಥ ವಿಚಾರ, ಗಾಂಧಿ ಸ್ಮಾರಕ ನಿಧಿ ಕರ್ನಾಟಕ ಶಾಖೆ ಬೆಂಗಳೂರು ೧೯ -
೨೬. ಮೇಲಗಿರಿ ಎಂ.ಡಿ, ಕೈನೇಯಿಗೆಯ ಮಾರ್ಗದರ್ಶಿಕೆ, ಅಕಳವಾಡಿ ಬುಕ್‌ಡಿಪೊ, ಧಾರವಾಡ, ೧೯೮೫
೨೭. ಮೊಗಳ್ಳಿ ಗಣೇಶ, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೯
೨೮. ರಾಜ ಹಾಗೂ ಶಿವರಾಜು, ನೂತನ ಗೃಹಕೈಗಾರಿಕೆಗಳು, ಎಂ.ಎಸ್, ಶಾಬಾದಿಮಠ್ ಬುಕ್ ಡಿಪೋ ಗದಗ, ೧೯೯೮
೨೯. ರಾಮಕೃಷ್ಣ ಜಿ. ಅನು. ವಾನರನಿಂದ ಮಾನವವರಗೆ, ಮೂಲ ಫ್ರೆಡರಿಕ್ ಎಂಗೆಲ್ಸ್, ೨೦೦೦
೩೦. ವಾಸುದೇವ್ ಸೇಡಂ. ಎಚ್, ಸಂ. ಮಹಿಳಾ ಅಭಿವೃದ್ಧಿಯಲ್ಲಿ ಡ್ವಾಕ್ರಾ ಯೋಜನೆ, ಪ್ರಸಾರಾಂಗ, ಗುಲ್ಬರ್ಗಾ ವಿ.ವಿ.ಗುಲ್ಬರ್ಗಾ ೨೦೦೧
೩೧. ವಿಜಯ ಭಾರತಿ, ವೇದಕಾಲಿನ ವನಿತೆಯರು, ೧೯೯೯, ತಾ.ರಾ. ನಾಗರಾಜ್ ಪ್ರಕಾಶಕ, ಬೆಂಗಳೂರು, ೧೯೯೯
೩೨. ವೈದೇಹಿ, ಅನು. ಬೆಳ್ಳಿಯ ಸಂಕೋಲೆಗಳು, ಮೂಲ ಅಕ್ಷರ ಪ್ರಕಾಶನ, ಹೆಗ್ಗೋಡು, ಮೂಲ ಮೈತ್ರಿಯ ಮುಖ್ಯೋಪಾಧ್ಯಾಯ
೩೩. ಶಿವಶರಣಪ್ಪ, ಎಚ್. ದಾಬಾ, ಹೈದ್ರಾಬಾದ್ ಕರ್ನಾಟಕದಲ್ಲಿ ಕೃಷಿ ಕಾರ್ಮಿಕರು, ಪ್ರಸಾರಾಂಗ, ಗುಲ್ಬರ್ಗಾ ವಿ.ವಿ. ೨೦೦೧
೩೪. ಶಿವಣಕರ್, ಎಸ್.ಎನ್. ಭಾರತೀಯ ಮಹಿಳೆಯರ ಸ್ಥಾನಮಾನ, ಪ್ರಸಾರಾಂಗ, ಗುಲ್ಬರ್ಗಾ ವಿ.ವಿ. ೨೦೦೧
೩೫. ಸೂರ್ಯ ನಾರಾಯಣ ಹೆಗಡೆ, ಬೀದಿರು ಬೆತ್ತ, ೧೯೯೮
೩೬. ಸದಾಶಿವ ಕೆ. ಭಾರತದ ಸ್ವಾತಂತ್ರ್ಯ ಹೋರಾಟ, ಪ್ರಿಯದರ್ಶಿನಿ ಪ್ರಕಾಶನ ಮೈಸೂರು ೧೯೯೬

ನಿಯತಕಾಲಿಕೆಗಳು

೧. ಮಹಿಳಾ ಅಧ್ಯಯನ ಸಂಪುಟ ೧ ರಿಂದ ೬ಗ ವರೆಗೆ ಸಂ. ಎಚ್ ಎಸ್ ಶ್ರೀಮತಿ, ಪ್ರಸಾರಾಂಗ ಕನ್ನಡ ವಿ ವಿ, ಹಂಪಿ ೧೯೯೬-೨೦೦೨

******

ಛಾಯಾಚಿತ್ರಗಳು





ನೇಕಾರಿಕೆ ವೃತ್ತಿಯ ಕಾರ್ಯದಲ್ಲಿ ನಿರತರಾಗಿರುವ ಮಹಿಳೆಯರು

ಕೃಪೆ ಇಳಕಲ್ ಸೀರೆ, ಪ್ರಸಾರಾಂಗ, ಕನ್ನಡ ವಿ ವಿ, ಹಂಪಿ ೨೦೦೦



ಕೌದಿ ಹೊಲಿಯಲು ನಿರತರಾಗಿರುವ ಮಹಿಳೆಯರು



ಕೌದಿ ಹೊಲಿಯುವಲ್ಲಿ ನಿರತವಾಗಿರುವ ವೃದ್ಧೆ



ಕಸೂತಿ ಕಲೆಯಲ್ಲಿ ನಿರತರಾಗಿರುವ ಮಹಿಳೆಯರು



ಮಡಿಕೆ ತಯಾರಿಕೆಯಲ್ಲಿ ನಿರತರಾಗಿರುವ ಮಹಿಳೆ



ಮೂರ್ತಿ ತಯಾರಿಕೆಯಲ್ಲಿ ಸಹಾಯಕಳಾಗಿ ಮಹಿಳೆ



ಕುಂಬಾರಿಕೆ (ಹುಂಡಿ ತಯಾರಿಕೆ)ಯಲ್ಲಿ ಮಹಿಳೆ








ಕಮ್ಮಾರಿಕೆ ಕೆಲಸದಲ್ಲಿ ಸಹಭಾಗಿತ್ವವಾಗಿರುವ ಮಹಿಳೆ



ಬೀಡಿ ಕಟ್ಟುವ ಕೆಲಸದಲ್ಲಿ ನಿರತರಾಗಿರುವ ಮಹಿಳೆ



ಬಡಿಗಿತನದ ಕಲಾಕೃತಿ
ಜೋಡಿಸುತ್ತಿರುವ ಮಹಿಳೆ



ಬಡಿಗಿತನದ ವೃತ್ತಿಯಲ್ಲಿ
ನಿರತರಾಗಿರುವ ಮಹಿಳೆ



ಕಸೂತಿ ಹಾಕುತ್ತಿರುವ ಮಹಿಳೆಯರು

ಗುಲಬರ್ಗಾ ಜಿಲ್ಲೆ

ಕರ್ನಾಟಕ

